ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 22 ಸೋಮವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 97 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೆಆರ್‌ಎಸ್ ಜಲಾಶಯ ಭರ್ತಿಗೆ ಇನ್ನೊಂದು ಅಡಿ ಮಾತ್ರ ಬಾಕಿ



ಕೆಆರ್‌ಎಸ್‌ನಿಂದ ಭಾನುವಾರ 50 ಸಾವಿರ ಕ್ಯುಸೆಕ್ ನೀರು ಹೊರಬಿಟ್ಟಿರುವುದು. /ಚಿತ್ರ: ಲಕ್ಷ್ಮೀನಾರಾಯಣ ಯಾದವ್

ಜು.27ರಂದು ಕನ್ನಂಬಾಡಿಗೆ ಸಿಎಂ ಸಿದ್ದರಾಮಯ್ಯ ಬಾಗಿನ ಅರ್ಪಣೆ

ನದಿಗೆ 52,162 ಸಾವಿರ ಕ್ಯುಸೆಕ್ ನೀರು ಬಿಡುಗಡೆ, ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಹೈಅಲರ್ಟ್

ಮಂಡ್ಯ, ಜು.21(ಮೋಹನ್‌ರಾಜ್)– ಜಿಲ್ಲೆಯ ಜೀವನಾಡಿ ಕೃಷ್ಣರಾಜಸಾಗರ ಜಲಾಶಯ ಭರ್ತಿಗೆ ಇನ್ನೊಂದು ಅಡಿ ಮಾತ್ರ ಬಾಕಿ ಇದ್ದು, 124.80 ಅಡಿ ಗರಿಷ್ಠ ಮಟ್ಟವಿರುವ ಕೆಆರ್‌ಎಸ್‌ನಲ್ಲಿ 123.10 ಅಡಿ ನೀರು ಭರ್ತಿಯಾಗಿದೆ. ಈ ಹಿನ್ನೆಲೆಯಲ್ಲಿ ಇದೇ ಜು.27ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕನ್ನಂಬಾಡಿ ಅಣೆಕಟ್ಟೆಗೆ ಬಾಗಿನ ಅರ್ಪಿಸಲಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ನಿರಂತರವಾಗಿ ಮಳೆ ಸುರಿದ ಪರಿಣಾಮ ನೀರಿಲ್ಲದೇ ಕಂಗೆಟ್ಟಿದ್ದ ಜನರಿಗೆ ಡ್ಯಾಂ ಭರ್ತಿಯಾಗುವ ಮುನ್ಸೂಚನೆ ಸಿಕ್ಕಿತ್ತು. ಕಳೆದ ಹತ್ತು ದಿನಗಳಿಂದ ಸುರಿದ ನಿರಂತರ ಮಳೆಗೆ ಡ್ಯಾಂ ಕ್ರಮೇಣ ಭರ್ತಿಯಾಗಿ ಸಂಪೂರ್ಣ ಭರ್ತಿಗೆ ಕೇವಲ ಇನ್ನೊಂದು ಅಡಿ ಮಾತ್ರ ಬಾಕಿ ಇದ್ದು, ಯಾವ ಕ್ಷಣದಲ್ಲಿ ಬೇಕಾದರೂ ಅಣೆಕಟ್ಟೆ ತುಂಬಬಹುದಾಗಿದೆ.

ನಿನ್ನೆ ಶನಿವಾರವೇ 120 ಅಡಿ ದಾಟಿದ್ದ ಕೆಆರ್‌ಎಸ್ ಅಣೆಕಟ್ಟೆಯಿಂದ ನದಿಗೆ 15ರಿಂದ 35 ಸಾವಿರ ಕ್ಯೂಸೆಕ್ ನೀರು ಬಿಡುಗಡೆ ಮಾಡುವುದಾಗಿ ಕಾವೇರಿ ನೀರಾವರಿ ನಿಗಮ ಪ್ರಕಟಣೆಯಲ್ಲಿ ತಿಳಿಸಿತ್ತು. ಇಂದು ಭಾನುವಾರ 123 ಅಡಿ ತುಂಬಿದ ಬಳಿಕ ನದಿಗೆ ನೀರು ಬಿಡುವ ಪ್ರಮಾಣವನ್ನು ಹೆಚ್ಚಿಸಿ 50,162 ಸಾವಿರ ಕ್ಯುಸೆಕ್‌ನಷ್ಟು ನದಿಗೆ ಬಿಡಲಾಗುತ್ತಿದೆ. ಇನ್ನು ಅಣೆಕಟ್ಟೆಗೆ 70, 850 ಸಾವಿರ ಕ್ಯುಸೆಕ್ ಒಳಹರಿವಿನ ಪ್ರಮಾಣವಿದ್ದು, ನೀರಿನ ಪ್ರಮಾಣ ಅಣೆಕಟ್ಟೆಗೆ ಹೆಚ್ಚು ಬರುತ್ತಿರುವುದರಿಂದ ಡ್ಯಾಂನಿಂದ ಹೆಚ್ಚುವರಿಯಾಗಿ ನದಿಗೆ ನೀರು ಹರಿಸಲಾಗುತ್ತಿದೆ.


ಕಾವೇರಿ ಜಲಾನಯನ ಪ್ರದೇಶ ಹಾರಂಗಿ ಡ್ಯಾಂನಿಂದಲ್ಲದೇ ಹಾಸನದ ಗೊರೂರು ಜಲಾಶಯ ತುಂಬಿರುವ ಹಿನ್ನೆಲೆಯಲ್ಲಿ ಹೇಮಾವತಿ ನದಿಗೆ ನೀರು ಬಿಡಲಾಗುತ್ತಿರುವುದರಿಂದ ಹೇಮಾವತಿ ನದಿ ನೀರು ಸಹ ಕೆಆರ್‌ಎಸ್ ಅಣೆಕಟ್ಟೆಗೆ ಬಂದು ಸೇರುತ್ತಿದೆ. ಜೊತೆಗೆ ಲಕ್ಷ್ಮಣತೀರ್ಥ ನದಿಯು ಉಕ್ಕಿ ಹರಿಯುತ್ತಿರುವುದರಿಂದ ಈ ಎಲ್ಲಾ ನದಿಗಳು ಸಂಗಮಗೊಂಡು ಕಾವೇರಿ ನದಿ ನೀರಿನ ಪ್ರಮಾಣ ಹೆಚ್ಚಿದೆ.

ಅಣೆಕಟ್ಟೆ ಸಂಪೂರ್ಣ ಭರ್ತಿಯಾದ ಬಳಿಕ ಡ್ಯಾಂನಿಂದ ಹೊರಹರಿವಿನ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸುವ ಸಾಧ್ಯತೆ ಇದ್ದು, ನದಿ ಪಾತ್ರದ ಜನತೆ, ನದಿ ಪಕ್ಕದಲ್ಲಿರುವ ತಗ್ಗು ಪ್ರದೇಶದ ಜನರು, ಜಾನುವಾರುಗಳು ಹಾಗೂ ತಮ್ಮ ಸಾಮಗ್ರಿಗಳೊಂದಿಗೆ ಸುರಕ್ಷಿತ ಸ್ಥಳಕ್ಕೆ ಹೋಗುವಂತೆ ಜಿಲ್ಲಾಡಳಿತ ಈಗಾಗಲೇ ಸೂಚನೆ ನೀಡಿದ್ದು, ನದಿ ಹರಿಯುವ ಅಕ್ಕಪಕ್ಕದ ಕೃಷಿ ಜಮೀನುಗಳು ನೀರಿನ ■ 6ನೇ ಪುಟಕ್ಕೆ

ಹೆಚ್.ಡಿ.ರೇವಣ್ಣ ನೇತೃತ್ವದಲ್ಲಿ ಹಾಸನದಲ್ಲಿ ಬೃಹತ್ ಸಮಾವೇಶ: ಹೆಚ್.ಡಿ.ಕುಮಾರಸ್ವಾಮಿ ಘೋಷಣೆ



ಹೆಚ್.ಡಿ.ರೇವಣ್ಣ



ಹೆಚ್.ಡಿ.ಕುಮಾರಸ್ವಾಮಿ

ಸಕಲೇಶಪುರ, ಜು.21– ಲೈಂಗಿಕ ದೌರ್ಜನ್ಯ ಪ್ರಕರಣಗಳು ವ್ಯಾಪಕ ಸುದ್ದಿಗೆ ಗ್ರಾಸವಾಗಿರುವಂತೆಯೇ ಭದ್ರಕೋಟೆ ಹಾಸನದಲ್ಲಿ ಇದೀಗ ಜೆಡಿಎಸ್ ಡ್ಯಾಮೇಜ್ ಕಂಟ್ರೋಲ್‌ಗೆ ಮುಂದಾಗಿದ್ದು, ಹೆಚ್.ಡಿ.ರೇವಣ್ಣ ನೇತೃತ್ವದಲ್ಲೇ ಬೃಹತ್ ಸಮಾವೇಶ ನಡೆಸುವುದಾಗಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಭಾನುವಾರ ಘೋಷಣೆ ಮಾಡಿದ್ದಾರೆ.

ಗುರುತರ ಆರೋಪಗಳ ಮೇಲೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಮತ್ತು ಎಂಎಲ್‌ಸಿ ಸೂರಜ್ ರೇವಣ್ಣ ನ್ಯಾಯಾಂಗ ಬಂಧನದಲ್ಲಿದ್ದು, ಇದು ಜೆಡಿಎಸ್ ಕಾರ್ಯಕರ್ತರನ್ನು ಕುಗ್ಗಿಸಿದೆ. ಇದರಿಂದ ಪಕ್ಷ ಸಂಘಟನೆಗೆ ಭಾರಿ ಹೊಡೆತ ಬಿದ್ದಿದೆ. ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿ, ಪಕ್ಷ ಸಂಘಟನೆಗೆ ಚುರುಕು ನೀಡುವ ನಿಟ್ಟಿನಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಹಾಸನದಲ್ಲಿ ಬೃಹತ್ ಸಮಾವೇಶ ಮಾಡಲು ನಿರ್ಧರಿಸಿದ್ದಾರೆ.

ಕರ್ನಾಟಕದ ಮಳೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ ಬಳಿಕ ಸಕಲೇಶಪುರ ತಾಲೂಕಿನ ದೊಡ್ಡತಪ್ಪಲು ಗ್ರಾಮದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಹೆಚ್.ಡಿ. ಕುಮಾರಸ್ವಾಮಿ, ಹಾಸನದಲ್ಲಿ ಬೃಹತ್ ಸಮಾವೇಶ ಮಾಡುವಂತೆ ಶಾಸಕರ ಒತ್ತಾಯವಿದೆ. ಕಲಾಪ ಮುಗಿದ ನಂತರ ಹಾಸನದಲ್ಲಿ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರ ನೇತೃತ್ವದಲ್ಲೇ ಬೃಹತ್ ಸಮಾವೇಶ ಮಾಡುತ್ತೇನೆ. ಅವರ ಕುಟುಂಬದಲ್ಲಿ ಕೆಲವು ಸಮಸ್ಯೆಗಳಿವೆ, ಆದರೆ ರೇವಣ್ಣ ಅವರು ■ 6ನೇ ಪುಟಕ್ಕೆ

ಐಟಿ ಉದ್ಯೋಗಿಗಳಿಗೆ ದಿನಕ್ಕೆ 14 ಗಂಟೆ ಕೆಲಸ

ಹೊಸ ಬಿಲ್ ಜಾರಿಗೆ ರಾಜ್ಯ ಸರ್ಕಾರ ಚಿಂತನೆ

- ಕರ್ನಾಟಕದ ಅಂಗಡಿಗಳು ಹಾಗೂ ಕಮರ್ಷಿಯಲ್ ಎಸ್ಟಾಬ್ಲಿಷ್‌ಮೆಂಟ್ ಕಾಯ್ದೆಗೆ ತಿದ್ದುಪಡಿ ತರಲು ಪ್ರಸ್ತಾಪ
- ಕರ್ನಾಟಕ ರಾಜ್ಯ ಐಟಿ ಹಾಗೂ ಐಟಿಇಎಸ್ ಉದ್ಯೋಗಿಗಳ ಸಂಘ ತೀವ್ರ ವಿರೋಧ

ಬೆಂಗಳೂರು, ಜು.21– ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ವಿಚಾರವಾಗಿ ರಾಜ್ಯ ಸರ್ಕಾರ ಜಾರಿಗೆ ತರಲು ಉದ್ದೇಶಿಸಿದ ಮಸೂದೆ ಬಗ್ಗೆ ತೀವ್ರ ವಿರೋಧ ವ್ಯಕ್ತವಾಗಿರುವ ನಡುವೆ ಈಗ ಕರ್ನಾಟಕ ಸರ್ಕಾರ ಐಟಿ ಉದ್ಯೋಗಿಗಳ ದಿನದ ಕೆಲಸದ ಅವಧಿಯನ್ನು 14 ಗಂಟೆಗಳಿಗೆ ಹೆಚ್ಚಿಸುವ ಬಗ್ಗೆ ಕಾನೂನು ತರಲು ಮುಂದಾಗಿದೆ. ಕರ್ನಾಟಕ ರಾಜ್ಯ ಐಟಿ ಹಾಗೂ ಐಟಿಇಎಸ್ ಉದ್ಯೋಗಿಗಳ ಸಂಘ ಈ ವಿಚಾರವನ್ನು ಖಚಿತಪಡಿಸಿದ್ದು, ಸರ್ಕಾರದ ನಿರ್ಧಾರಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದೆ.



ಕೆಐಟಿಯು ಪ್ರಕಾರ, ದಿನಕ್ಕೆ 14 ಗಂಟೆಗಳ ಕಾಲ ಉದ್ಯೋಗಿಗಳು ಕೆಲಸ ಮಾಡಲು ಅನುಕೂಲವಾಗುವಂತೆ ಕರ್ನಾಟಕದ ಅಂಗಡಿಗಳು ಹಾಗೂ ಕಮರ್ಷಿಯಲ್ ಎಸ್ಟಾಬ್ಲಿಷ್‌ಮೆಂಟ್ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾಪದ ಬಗ್ಗೆ ಅಭಿಪ್ರಾಯ ಕೇಳಲು ಕಾರ್ಮಿಕ ಇಲಾಖೆಯು ಉದ್ಯಮದ ವಿವಿಧ ಪಾಲುದಾರರೊಂದಿಗೆ ಕರೆದ ಸಭೆಯಲ್ಲಿ ಈ ವಿಚಾರವನ್ನು ಪ್ರಸ್ತುತಪಡಿಸಿದೆ. ಒಂದು ವೇಳೆ ಇದು ಜಾರಿಗೆ ಬಂದಲ್ಲಿ ವಾರಕ್ಕೆ 70 ಗಂಟೆಗಳ ಕಾಲ ಐಟಿ ಉದ್ಯೋಗಿಗಳು ಕೆಲಸ ಮಾಡಬೇಕಾಗುತ್ತದೆ. ಅಲ್ಲದೇ ಇದು ಐಟಿ ಸಿಟಿ ಎನಿಸಿರುವ ಬೆಂಗಳೂರಿನ ಮೇಲೆ ಭಾರಿ ಪರಿಣಾಮ ಬೀರಲಿದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಇದುವರೆಗೆ ಏನೂ ಹೇಳಿಲ್ಲ. ಈಗ ಚರ್ಚೆಗೆ ಕಾರಣವಾಗಿರುವ ಈ ಉದ್ದೇಶಿತ ಹೊಸ ತಿದ್ದುಪಡಿ ಮಸೂದೆಯು (Karnataka Shops and Commercial Establishments (Amendment) Bill 2024) 14 ಗಂಟೆಗಳ ಕೆಲಸದ ಸಮಯವನ್ನು ಸಹಜಗೊಳಿಸಲು ಯತ್ನಿಸುತ್ತಿದೆ. ಪ್ರಸ್ತುತ ಜಾರಿಯಲ್ಲಿರುವ ಕಾಯ್ದೆ ಓವರ್‌ಟೈಂ ಸೇರಿಯೂ ಹೆಚ್ಚೆಂದರೆ ದಿನಕ್ಕೆ ಗರಿಷ್ಠ 10 ಗಂಟೆಗಳ ಕೆಲಸದ ಸಮಯಕ್ಕೆ ಮಾತ್ರ ಅನುಮತಿ ನೀಡುತ್ತದೆ. ಆದರೆ ಇದನ್ನು ಹೊಸ ತಿದ್ದುಪಡಿ ಕಾಯ್ದೆಯಿಂದ ಸಂಪೂರ್ಣವಾಗಿ ತೆಗೆಯಲಾಗಿದೆ. ಹಾಗೂ ಇದು ಐಟಿ ಫೀಲ್ಡ್‌ಗಳಲ್ಲಿ ಕೆಲಸ ಮಾಡುವವರ ಕೆಲಸದ ಅವಧಿಯನ್ನು ಅನಿರ್ದಿಷ್ಟವಾಗಿ ವಿಸ್ತರಿಸಲು ಅನುಕೂಲ ಮಾಡಿಕೊಡುತ್ತದೆ ಎಂದು ಐಟಿ ಅಂಡ್ ಐಟಿಇಎಸ್ ಉದ್ಯೋಗಿಗಳ ಸಂಘ ಹೇಳಿದೆ.

ಒಂದು ವೇಳೆ ಈ ಕಾಯ್ದೆ ಜಾರಿಗೆ ಬಂದಲ್ಲಿ ಇದು ಈ ಯುಗದಲ್ಲೇ ■ 6ನೇ ಪುಟಕ್ಕೆ

ಇಂದಿನಿಂದ ಸಂಸತ್‌ನ ಮುಂಗಾರು ಅಧಿವೇಶನ

ನಾಳೆ ಕೇಂದ್ರ ಬಜೆಟ್ ಮಂಡನೆ

ಪ್ರತಿಪಕ್ಷಗಳ ಬತ್ತಳಿಕೆಯಲ್ಲಿ ಹತ್ತಾರು ಅಸ್ತ್ರಗಳು, ಮೋದಿ ಸರ್ಕಾರಕ್ಕೆ ಅಗ್ನಿಪರೀಕ್ಷೆ



ಹೊಸದಿಲ್ಲಿ, ಜು.21– ಸಂಸತ್ ಮುಂಗಾರು ಅಧಿವೇಶನ ಸೋಮವಾರ ಆರಂಭವಾಗಲಿದ್ದು, ನೀಟ್ ಅಕ್ರಮ, ಕನ್ವರ್ ಯಾತ್ರೆ ನಿಯಮ, ಸರಣಿ ರೈಲು ಅವಘಡ ವಿಚಾರಗಳು ಆಡಳಿತ–ಪ್ರತಿಪಕ್ಷಗಳ ನಡುವೆ ಮಾತಿನ ಕದನಕ್ಕೆ ವೇದಿಕೆಯಾಗಲಿದೆ. ಮಂಗಳವಾರ (ಜುಲೈ 23) ಮಂಡನೆಯಾಗಲಿರುವ ಮೋದಿ 3.0 ಸರಕಾರದ ಮೊದಲ ಬಜೆಟ್‌ನತ್ತ ದೇಶದ ಜನರ ಚಿತ್ತ ನೆಟ್ಟಿದೆ.

ಅಧಿವೇಶನದ ಹಿನ್ನೆಲೆಯಲ್ಲಿ ಹೊಸದಿಲ್ಲಿಯಲ್ಲಿ ಭಾನುವಾರ ಕೇಂದ್ರ ಸರಕಾರ ಕರೆದಿದ್ದ ಸರ್ವಪಕ್ಷ ಸಭೆಯಲ್ಲಿ ಭಾಗವಹಿಸಿದ್ದ ಪ್ರತಿಪಕ್ಷಗಳು, ಪ್ರಮುಖ ವಿಚಾರಗಳ ಚರ್ಚೆಗೆ ಅವಕಾಶ ಕೊಡಬೇಕು ಎಂದು ಆಗ್ರಹಿಸಿವೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನೀಟ್ ಪ್ರಶ್ನೆಪತ್ರಿಕೆ ಹಗರಣ, ಉತ್ತರ ಪ್ರದೇಶದ ವಿವಾದಿತ ಕನ್ವರ್ ಯಾತ್ರೆ ಮಾರ್ಗಸೂಚಿ, ತನಿಖಾ ಸಂಸ್ಥೆಗಳ ದುರ್ಬಳಕೆ, ಸರಣಿ ರೈಲು ಅವಘಡ ವಿಚಾರಗಳ ಕುರಿತು ಚರ್ಚೆಗೆ ಅವಕಾಶ ನೀಡಬೇಕು ಎಂದು ಪ್ರತಿಪಕ್ಷಗಳ ನಾಯಕರು ಒತ್ತಾಯಿಸಿದರು.

ಅಧಿವೇಶನದಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆ ಬಲಪಡಿಸಲು ಪ್ರತಿಪಕ್ಷಗಳು ಕಲಾಪದ ನಿಯಮಾವಳಿಯಂತೆ ನಡೆದುಕೊಳ್ಳಬೇಕು. ಎಲ್ಲ ಸಮಸ್ಯೆ, ವಿವಾದ, ಆರೋಪಗಳಿಗೆ ಸರಕಾರ ಸಮಗ್ರ ಉತ್ತರ ನೀಡಲಿದೆ. ಸುಗಮ ಕಲಾಪಕ್ಕೆ ಪ್ರತಿಪಕ್ಷಗಳು ಸಹಕರಿಸಬೇಕು ಎಂದು ಸರಕಾರ ಮನವಿ ಮಾಡಿತು.

ಡೆಪ್ಯುಟಿ ಸ್ಪೀಕರ್ ಸ್ಥಾನಕ್ಕೆ ಬೇಡಿಕೆ: ಲೋಕಸಭೆ ಡೆಪ್ಯೂಟಿ ಸ್ಪೀಕರ್ ಸ್ಥಾನವನ್ನು ಪ್ರತಿಪಕ್ಷಗಳ ಮೈತ್ರಿಕೂಟಕ್ಕೆ ನೀಡಬೇಕು ಎಂದು ಕಾಂಗ್ರೆಸ್ ಆಗ್ರಹಿಸಿತು. ವಿಷಯ ಪ್ರಸ್ತಾಪಿಸಿದ ಸಂಸದ ಗೌರವ್ ಗೊಗೋಯ್, ಉಪ ಸಭಾಧ್ಯಕ್ಷ ಹುದ್ದೆಯನ್ನು ಆದಷ್ಟು ಬೇಗ ಭರ್ತಿ ಮಾಡಬೇಕು. ಆ ಸ್ಥಾನವನ್ನು ಪ್ರತಿಪಕ್ಷಗಳಿಗೆ ನೀಡಬೇಕು. ಆ ಮೂಲಕ ಸಂಸದೀಯ ಸಂಪ್ರದಾಯ ಮುಂದುವರಿಸಬೇಕು ಎಂದು ಒತ್ತಾಯಿಸಿದರು. ■ 6ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಸಿಬಿಐ ತನಿಖೆ ಎದುರಿಸಲಿ



ಬೆಳಗಾವಿ, ಜು.21– ಕಾಂಗ್ರೆಸ್‌ನ ಡಿಎನ್‌ಎಯಲ್ಲೇ ಭ್ರಷ್ಟಾಚಾರವಿದೆ. ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಪರಮ ಭ್ರಷ್ಟರಾಗಿ ಹೊರಹೊಮ್ಮಿದ್ದಾರೆ. ಮುಡಾ ಮತ್ತು ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲೂ ಅವರ ನೇರ ಹಸ್ತಕ್ಷೇಪ ಮತ್ತು ಆಶೀರ್ವಾದವಿದೆ. ಹಾಗಾಗಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ಸಿಬಿಐ ತನಿಖೆ ಎದುರಿಸಬೇಕು ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಒತ್ತಾಯಿಸಿದರು. ಇಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸುಳ್ಳು ಭರವಸೆ ನೀಡಿ, ಯಾವುದೇ ರೀತಿಯ ಮುಂದಾಲೋಚನೆ ಇಲ್ಲದೆ ಗ್ಯಾರಂಟಿ ಯೋಜನೆ ಜಾರಿಗೊಳಿಸಿ ಪರದಾಡುತ್ತಿದೆ. ಹಿಂದಿನಿಂದಲೂ ಭ್ರಷ್ಟಾಚಾರದ ಲಕ್ಷಾಂತರ ಮೊಟ್ಟೆ ಇಟ್ಟು, ■ 6ನೇ ಪುಟಕ್ಕೆ

ಗ್ಯಾರಂಟಿ ಯೋಜನೆಗೆ ದಲಿತ ಅಭಿವೃದ್ಧಿ ನಿಗಮ ಅನುದಾನ ಬಳಕೆ

ರಾಜ್ಯ ಸರ್ಕಾರದ ವಿರುದ್ಧ ಡಿಎಸ್‌ಎಸ್ ಪ್ರತಿಭಟನೆಗೆ ಸಜ್ಜು!

ಬೆಂಗಳೂರು, ಜು.21– ಕರ್ನಾಟಕ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ದಲಿತ ಅಭಿವೃದ್ಧಿ ನಿಗಮದ ಅನುದಾನ ಬಳಕೆ ವಿಚಾರವಾಗಿ ಪ್ರತಿಪಕ್ಷ ಬಿಜೆಪಿ ತೀವ್ರ ಪ್ರತಿಭಟನೆ ನಡೆಸುತ್ತಿರುವಂತೆಯೇ ಇದೀಗ ದಲಿತ ಸಂಘಟನೆಗಳೂ ಕೂಡ ಸಿದ್ದು ಸರ್ಕಾರದ ವಿರುದ್ಧ ಪ್ರತಿಭಟನೆಗೆ ಸಜ್ಜಾಗಿವೆ.

ಡಿಎಸ್‌ಎಸ್ ಮುಖಂಡರಾದ ಮಾವಳ್ಳಿ ಶಂಕರ್ ಮತ್ತು ಇಂಧುಧರ್ ಹೊನ್ನಾಪುರ ಅವರು ಜಂಟಿ ಸುದ್ದಿಗೋಷ್ಠಿ ನಡೆಸಿ, ಸಿದ್ದರಾಮಯ್ಯನವರ ಪರ ಸಹಾನುಭೂತಿ ಹೊಂದಿರುವ ದಲಿತರಿಗೆ ವಂಚಿಸಿದ್ದಾರೆ ಎಂದು ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ವಿಧಾನಸಭಾ ಚುನಾವಣೆಯ ಮೊದಲು, ಅವರು ಗ್ಯಾರಂಟಿ ಯೋಜನೆಗೆ ಹಣ ನೀಡಲು ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನವನ್ನು ಬಳಸುವುದಾಗಿ ಹೇಳಿರಲಿಲ್ಲ.

ಆದರೆ ಇದೀಗ ದಲಿತ ಅಭಿವೃದ್ಧಿ ನಿಗಮದ ಅನುದಾನವನ್ನು ಗ್ಯಾರಂಟಿ ಯೋಜನೆಗೆ ಬಳಸಿಕೊಳ್ಳಲಾಗುತ್ತಿದೆ. ಸುಮಾರು 14,000 ಕೋಟಿ ರೂ.ಗಳನ್ನು ಗ್ಯಾರಂಟಿ ಹಣಕ್ಕಾಗಿ ಬೇರೆಡೆಗೆ ತಿರುಗಿಸಲಾಗಿದೆ. ಇದು ದಲಿತರಿಗೆ ರಾಜ್ಯ ಸರ್ಕಾರ ಮಾಡಿರುವ ಅನ್ಯಾಯ. ನಾವು ಬಿಜೆಪಿ ವಿರುದ್ಧ ಹೋರಾಡಿದ್ದೇವೆ ಮತ್ತು ಕಾಂಗ್ರೆಸ್‌ಗೆ ಬೆಂಬಲ ನೀಡಿದ್ದೇವೆ, ಆದರೆ ಈ ಸರ್ಕಾರ ನಮಗೆ ಬಹಳ ಅನ್ಯಾಯ ಮಾಡುತ್ತಿದೆ ಎಂದು ಮಾವಳ್ಳಿ ಶಂಕರ್ ಆರೋಪಿಸಿದರು. ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನಕ್ಕೆ ಏನಾಗಿದೆ ಎಂಬುದನ್ನು ಬಹಿರಂಗಪಡಿಸಬೇಕು ಮತ್ತು ಈಗಾಗಲೇ ಮೀಸಲಿಟ್ಟ ಹಣವನ್ನು ಸಮುದಾಯಗಳ ಕಲ್ಯಾಣಕ್ಕೆ ಬಳಸುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಅವರು ಸರ್ಕಾರವನ್ನು ಒತ್ತಾಯಿಸಿದರು. ಇದನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಇಡೀ ರಾಜ್ಯದಲ್ಲಿ ಬೀದಿಗಿಳಿಯುತ್ತೇವೆ ಎಂದು ಎಚ್ಚರಿಕೆ ನೀಡಿದರು.



ಗ್ಯಾರಂಟಿಗಳು ಸಾಮಾನ್ಯ ಯೋಜನೆಗಳು ಮತ್ತು ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನವನ್ನು ಅವುಗಳನ್ನು ನಿಧಿಗೆ ತಿರುಗಿಸಲು ಸಾಧ್ಯವಿಲ್ಲ, ಏಕೆಂದರೆ ಇದು ಎಸ್‌ಸಿ/ಎಸ್‌ಟಿ ಸಮುದಾಯಗಳ ಸಬಲೀಕರಣದ ಉದ್ದೇಶಕ್ಕೆ ಇದು ವಿರುದ್ಧವಾಗಿರುತ್ತದೆ ಎಂದು ಹೇಳಿದ್ದಾರೆ.

ಸರ್ಕಾರದ ಕ್ರಮ ಸಮರ್ಥಿಸಿಕೊಂಡ ಸಚಿವರು: ಆದರೆ ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ.ಮಹದೇವಪ್ಪ ಮತ್ತು ಆರ್‌ಡಿಪಿಆರ್ ಸಚಿವ ಪ್ರಿಯಾಂಕ್ ಖರ್ಗೆ ಸೇರಿದಂತೆ ಎಸ್‌ಸಿ/ಎಸ್‌ಟಿ ಸಮುದಾಯಗಳ ಸಚಿವರು ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನವನ್ನು ಬೇರೆಡೆಗೆ ತಿರುಗಿಸುವ ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ, ಸಮುದಾಯಗಳು ಅವರ ಜನಸಂಖ್ಯೆಗೆ ಅನುಗುಣವಾಗಿ ಪ್ರಯೋಜನ ಪಡೆಯುತ್ತಿವೆ ಎಂದು ಹೇಳಿದ್ದಾರೆ. ಎಸ್‌ಸಿ/ಎಸ್‌ಟಿಗಳ ಕಲ್ಯಾಣಕ್ಕಾಗಿ ಅವರ ಜನಸಂಖ್ಯೆಗೆ ಅನುಗುಣವಾಗಿ ಹಣವನ್ನು ವಿನಿಯೋಗಿಸಲು ಕಾಂಗ್ರೆಸ್ ಸರ್ಕಾರವು ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆಯನ್ನು ತಂದಿದೆ. ನಾವು ಕಾಯ್ದೆಯ ಸೆಕ್ಷನ್ 7, ಎ, ಬಿ ಮತ್ತು ಸಿ ಉಲ್ಲಂಘಿಸಿದ್ದೇವೆಯೇ ಎಂಬುದನ್ನು ಬಿಜೆಪಿ ಸಾಬೀತುಪಡಿಸಲಿ. ಹಿಂದಿನ ಬಿಜೆಪಿ ಸರ್ಕಾರವು ಸೆಕ್ಷನ್ 7 ಡಿ ಅಡಿಯಲ್ಲಿ ನಿಬಂಧನೆಯನ್ನು ಮಾಡಿತ್ತು ಮತ್ತು 8,000 ಕೋಟಿ ರೂ.ಗಳನ್ನು ಡೀಮ್ಡ್ ವೆಚ್ಚವಾಗಿ ತಿರುಗಿಸಿದೆ, ಆದರೆ ನಾವು ಅದನ್ನು ತೆಗೆದು ಹಾಕಿದ್ದೇವೆ ಎಂದು ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಮೈಸೂರು ಮಿತ್ರ ಸೋಮವಾರ 22 ಜುಲೈ 2024

ಕನ್ನಡ ಸಾಹಿತ್ಯ ಲೋಕದಲ್ಲಿ ದೊಡ್ಡ ಕಥಾ ಪರಂಪರೆಯೇ ಇದೆ

'ಲಾಕ್‌ಡೌನ್ ಕಥೆಗಳು' ಕಥಾ ಸಂಕಲನ ಬಿಡುಗಡೆ ಸಮಾರಂಭದಲ್ಲಿ ಲೇಖಕಿ ಡಾ.ಶುಭಶ್ರೀ ಪ್ರಸಾದ್ ಅಭಿಮತ

ಮೈಸೂರು,ಜು.21(ಪಿಎಂ)–ಕಥೆ ಕೇಳುವುದು ನಮ್ಮ ನೆನಪಿನ ಶಕ್ತಿ ವೃದ್ಧಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದ್ದು, ಕನ್ನಡ ಸಾಹಿತ್ಯ ಲೋಕದಲ್ಲಿ ದೊಡ್ಡ ಕಥಾ ಪರಂಪರೆಯೇ ಇದೆ ಎಂದು ಲೇಖಕಿ ಡಾ.ಶುಭಶ್ರೀ ಪ್ರಸಾದ್ ಹೇಳಿದರು.


ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಸಂವಹನ ಪ್ರಕಾಶನ, ಆಕಾಶವಾಣಿ ಮೈಸೂರು ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ 'ಲಾಕ್‌ಡೌನ್ ಕಥೆಗಳು' ಕಥಾ ಸಂಕಲನ (ಮೈಸೂರು ಆಕಾಶವಾಣಿಯಿಂದ ಬಿತ್ತರಗೊಂಡ ಸಣ್ಣ ಕಥೆಗಳ ಸಂಗ್ರಹ) ಬಿಡುಗಡೆ ಸಮಾರಂಭದಲ್ಲಿ ಕಥಾ ಸಂಕಲನದ ಕುರಿತು ಅವರು ಮಾತನಾಡಿದರು.

ಕಥೆ ಎನ್ನುವುದು ಚುಂಬಕ ಶಕ್ತಿಯಾಗಿದ್ದು, ಕಥೆಗಳಿಗೂ ನಮ್ಮ ಬಾಲ್ಯಕ್ಕೂ ಅವಿನಾಭಾವ ಸಂಬಂಧವಿದೆ. ದೃಶ್ಯ ಮಾಧ್ಯಮದ ಕಥೆ ಅಥವಾ ದೃಶ್ಯಗಳು ನಮ್ಮ ಕಣ್ಮುಂದೆ ಬಂದು ನಮ್ಮ ಕಲ್ಪನಾಶಕ್ತಿ ಅಷ್ಟಕ್ಕೆ ಸೀಮಿತಗೊಳ್ಳುತ್ತದೆ. ಆದರೆ ಅಜ್ಜಿಯ ಮಡಿಲಲ್ಲೋ, ಅಪ್ಪನ ತೋಳಿನಲ್ಲೋ ಮಲಗಿ ಕಥೆ ಕೇಳುತ್ತ ಕಣ್ಣು ಮುಚ್ಚಿ ಮಲಗಿದಾಗ, ಅವರು ಹೇಳುತ್ತಿದ್ದಂತಹ ಕಥೆಯು ನಮ್ಮ ಕಲ್ಪನಾ ಲೋಕವನ್ನು ವಿಸ್ತರಿಸುತ್ತಿತ್ತು. ನಮ್ಮೊಳಗೆ ಕಥೆಗೆ ತಕ್ಕಂತೆ ಮೂರ್ತ ರೂಪ ಮೂಡುತ್ತಿತ್ತು ಕಥೆಗೆ ಇರುವ ಬಹುದೊಡ್ಡ ಶಕ್ತಿ ಇದು. ಅಂತಹ ಕಥಾ ಪ್ರಕಾರವನ್ನು ಆಕಾಶವಾಣಿಯವರು ಈ ರೀತಿಯಲ್ಲಿ ಹೊರತಂದಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ಒಬ್ಬರನ್ನೊಬ್ಬರು ಭೇಟಿ ಆಗುವುದೂ ಕಷ್ಟಕರವಾಗಿತ್ತು. ಸಂಬಂಧ, ಪ್ರೀತಿ, ಕುಟುಂಬ ಎಷ್ಟು ಮುಖ್ಯವೆಂದು ತಿಳಿಸಿತು. ಅಂತಹ ಸಂದರ್ಭದಲ್ಲಿ ಶ್ರೋತೃಗಳಿಂದ ಇ–ಮೇಲ್ ಮೂಲಕ ಕಥೆಗಳನ್ನು ಸಂಗ್ರಹಿಸಿ ಆಕಾಶವಾಣಿ ಪ್ರಸಾರ ಮಾಡಿರುವುದು ವಿಶಿಷ್ಟವಾಗಿದೆ. ಕಥಾ ಸಂಕಲನದಲ್ಲಿ ನುರಿತ ಕಥೆಗಾರರ ಕಥೆಗಳ ಜೊತೆಗೆ ಹೊಸಬರ ಕಥೆಗಳೂ ಇದ್ದು, ಆ ಮೂಲಕ ಹಲವು ಕಥೆಗಾರರನ್ನು ಆಕಾಶವಾಣಿ ಹುಟ್ಟು ಹಾಕಿದೆ ಎಂದು ಹೇಳಿದರು.

ಕಥಾ ಸಂಕಲನ ಬಿಡುಗಡೆ ಮಾಡಿದ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಕೋವಿಡ್ ಸನ್ನಿವೇಶದಲ್ಲಿ ಮೂಡಿಬಂದಿರುವ ಇಲ್ಲಿನ ಕಥೆಗಳು ನಮ್ಮ ಸಮಾಜದಲ್ಲಿ ಮಾನವೀಯ ಮೌಲ್ಯ ಎಷ್ಟು ಮುಖ್ಯವೆಂದು ಪ್ರತಿಬಿಂಬಿಸುತ್ತವೆ. ಹಲವರು ಲಾಕ್‌ಡೌನ್‌ನಿಂದ ತಾವು ಅನುಭವಿಸಿದ ಯಾತನೆಯನ್ನು ಬರವಣಿಗೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಆಕಾಶವಾಣಿ ನಿಜಕ್ಕೂ ವಿಶಿಷ್ಟ ಕೆಲಸ ಮಾಡಿದೆ ಎಂದರು.

ಕಥಾ ಸಂಕಲನದ ಸಂಪಾದಕ ಹಾಗೂ ಮೈಸೂರು ಆಕಾಶವಾಣಿಯ ಹಿರಿಯ ಉದ್ಘೋಷಕ ಪ್ರಭುಸ್ವಾಮಿ ಮಳಿಮಠ ಮಾತನಾಡಿ, ಲಾಕ್‌ಡೌನ್ ಸಂದರ್ಭದಲ್ಲಿ ನನಗಾದ ಅನುಭವವೊಂದನ್ನು ಕಥೆಯ ರೂಪದಲ್ಲಿ ಕೇಳುಗರೊಂದಿಗೆ ಹಂಚಿಕೊಳ್ಳಲು ಬಯಸಿದ್ದೆ. ಆಗ ಅದೇ ರೀತಿಯಲ್ಲಿ ಮನೆಯಲ್ಲೇ ಬಂಧಿಯಾಗಿರುವ ಶ್ರೋತೃಗಳಿಗೂ ಈ ಅವಕಾಶ ಕಲ್ಪಿಸುವ ಆಲೋಚನೆ ಮೂಡಿತು. ಜನರು ತಾವು ಕೇಳಿದ ಅಥವಾ ಅನುಭವಿಸಿದ ಘಟನೆಗಳನ್ನು ಕಥೆಯಾಗಿ ಬರೆದು ಕಳುಹಿಸುವ ವ್ಯವಸ್ಥೆ ಮಾಡಲಾಯಿತು. ಆಗ ಕೇವಲ ಮೈಸೂರು ಜಿಲ್ಲೆ ಮಾತ್ರವಲ್ಲದೆ ಇಡೀ ರಾಜ್ಯದಿಂದ ಕಥೆಗಳು ಆಕಾಶವಾಣಿಗೆ ಬಂದವು. ಅಂತಹ ಕಥೆಗಳಲ್ಲಿ 2ರಿಂದ 3 ಪಾತ್ರಗಳು ಇದ್ದರೆ ಅಂತಹವುಗಳನ್ನು ನಾಟಕ ಪ್ರಕಾರದಲ್ಲೂ ಬಿತ್ತರಿಸಲಾಯಿತು. ತಲಾ 15 ನಿಮಿಷ ಒಳಗೊಂಡಂತೆ 21 ನಾಟಕಗಳನ್ನು ಬಿತ್ತರಿಸಲಾಯಿತು. ಇದೀಗ ಆಕಾಶವಾಣಿಯಲ್ಲಿ ಬಿತ್ತರಗೊಂಡ 75 ಕಥೆಗಳು ಪುಸ್ತಕದಲ್ಲಿ ಅನಾವರಣಗೊಂಡಿವೆ ಎಂದರು. ಸಂವಹನ ಪ್ರಕಾಶನದ ಪ್ರಕಾಶಕ ಡಿ.ಎನ್.ಲೋಕಪ್ಪ, ಆಕಾಶವಾಣಿ ಮೈಸೂರು ಉಪನಿರ್ದೇಶಕ ಎಸ್.ಎಸ್.ಉಮೇಶ್, ಸಹಾಯಕ ನಿರ್ದೇಶಕ ಅಬ್ದುಲ್ ರಶೀದ್, ಕಾರ್ಯಕ್ರಮ ನಿರ್ವಾಹಕ ಎನ್.ಕೇಶವಮೂರ್ತಿ, ಕಥೆಗಾರ್ತಿ ಶೀಲಾ ಸತ್ಯೇಂದ್ರಸ್ವಾಮಿ, ಕಥೆಗಾರ ಕೊತ್ತಲವಾಡಿ ಶಿವಕುಮಾರ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ 'ಲಾಕ್‌ಡೌನ್ ಕಥೆಗಳು' ಕಥಾ ಸಂಕಲನ ಬಿಡುಗಡೆ ಮಾಡಲಾಯಿತು.

> "ಬದಲಾದ ಕಾಲಘಟ್ಟದಲ್ಲಿ ಕೋವಿಡ್ ಸೋಂಕು ನಮ್ಮೆಲ್ಲರನ್ನು ಒಂದು ಅವಧಿಗೆ ಬ್ರೇಕ್ ಹಾಕಿ ನಿಲ್ಲಿಸಿತು. ಮಾನವನ ಓಟಕ್ಕೆ ಕಡಿವಾಣ ಹಾಕಿತು. ಮನುಷ್ಯ ನಾನೇ ಮೇಲು ಎಂದು ಅಹಂಕಾರದಿಂದ ಮೆರೆಯುವ ಕಾಲದಲ್ಲಿ ಹೊಸ ಕಾಯಿಲೆ ಹುಟ್ಟಿಕೊಂಡಿವೆ. ಅಂತೆಯೇ ಕೋವಿಡ್ ಸಹ. ಮನುಷ್ಯ–ಮನುಷ್ಯರ ನಡುವಿನ ಪ್ರೀತಿ, ಸಾಮರಸ್ಯ ಎಷ್ಟು ಗಟ್ಟಿಯಾಗಿದೆ ಎಂದು ಕೋವಿಡ್ ಪರೀಕ್ಷೆ ಮಾಡಿತು.
> –ಶುಭಶ್ರೀ ಪ್ರಸಾದ್

ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ

ಜಿಲ್ಲಾ ಘಟಕದ ಅಧ್ಯಕ್ಷರಾಗಿ ಹೆಚ್.ವಿ.ಬಸವರಾಜು(ಹಿನಕಲ್) ಆಯ್ಕೆ



ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಆಯ್ಕೆಯಾದ ಹೆಚ್.ವಿ.ಬಸವರಾಜು (ಹಿನಕಲ್) ಸಂಭ್ರಮಾಚರಣೆ

ಮೈಸೂರು,ಜು.21(ಎಸ್‌ಪಿಎನ್)– ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಸ್ಥಾನಕ್ಕೆ ಭಾನುವಾರ ನಡೆದ ಚುನಾವಣೆಯಲ್ಲಿ ಹೆಚ್.ವಿ.ಬಸವರಾಜು (ಹಿನಕಲ್) ಜಯಗಳಿಸಿದ್ದಾರೆ.

ಜಿಲ್ಲಾ ಅಧ್ಯಕ್ಷ ಸ್ಥಾನಕ್ಕೆ ವರುಣಾ ಮಹೇಶ್, ಹೆಚ್.ವಿ.ಬಸವರಾಜು(ಹಿನಕಲ್), ಶಿವಮೂರ್ತಿ ಎಸ್.ಕಾನ್ಯ, ಕೆ.ವಸಂತ ಕುಮಾರ್ ಸ್ಪರ್ಧಿಸಿದ್ದರು. ಇವರಲ್ಲಿ ವರುಣ ಮಹೇಶ್ ಎರಡನೇ ಸ್ಥಾನಕ್ಕೆ ಶಿವಮೂರ್ತಿ ಎಸ್.ಕಾನ್ಯ ಮೂರನೇ ಸ್ಥಾನ ಪಡೆದಿದ್ದಾರೆ ಎಂದು ತಿಳಿದು ಬಂದಿದ್ದು, ಪತ್ರಿಕೆ ಅಚ್ಚಿಗೆ ಹೋಗುವ ವೇಳೆಯಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರ ಸ್ಥಾನದ ಮತ ಎಣಿಕೆ ಕಾರ್ಯ ನಡೆಯುತ್ತಿತ್ತು. ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಮೈಸೂರು ಘಟಕದಲ್ಲಿ ಒಟ್ಟು 3,735 ಮಂದಿ ಮತ ಚಲಾಯಿಸುವ ಹಕ್ಕು ಹೊಂದಿದ್ದರು. 20 ಮಂದಿ ಕಾರ್ಯಕಾರಿ ಸಮಿತಿ ಸ್ಥಾನಕ್ಕೆ 57 ಮಂದಿ ಪುರುಷರು ಸ್ಪರ್ಧಿಸಿದ್ದರು. 10 ಮಂದಿ ಮಹಿಳಾ ಮೀಸಲು ಸದಸ್ಯ ಸ್ಥಾನಕ್ಕೆ 17 ಮಂದಿ ಮಹಿಳೆಯರು ಸ್ಪರ್ಧಿಸಿದ್ದರು.

ಮೈಸೂರು ಹೊಸಮಠದ ಶ್ರೀ ನಟರಾಜ ಪದವಿ ಕಾಲೇಜು ಆವರಣದಲ್ಲಿ ಭಾನುವಾರ ಬೆಳಗ್ಗೆ 8ರಿಂದ ಸಂಜೆ 5 ಗಂಟೆವರೆಗೆ ಬಿರುಸಿನಿಂದ ಮತದಾನ ನಡೆದು 3,735 ಸದಸ್ಯರ ಪೈಕಿ 2,045 ಮಂದಿ ಮತದಾನ ಮಾಡಿದ್ದರು.

ಧ್ವಜಾರೋಹಣ ಬಳಿಕ ರಾಷ್ಟ್ರಧ್ವಜ ಇಳಿಸುವಾಗಲೂ ಕಟ್ಟುನಿಟ್ಟಿನ ಪಾಲನೆ ಮುಖ್ಯ

ತಿಂಗಳ ತಿಳಿವು ಕಾರ್ಯಕ್ರಮದಲ್ಲಿ ಅಂಕಣಕಾರ ಡಾ.ರಂಗನಾಥ್



ಮೈಸೂರಿನ ಪರಮಹಂಸ ಮಂಟಪದ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ತಿಂಗಳ ತಿಳಿವು ಕಾರ್ಯಕ್ರಮದಲ್ಲಿ ಅಂಕಣಕಾರ ಡಾ.ರಂಗನಾಥ್ ಮಾತನಾಡಿದರು.

ಮೈಸೂರು,ಜು.21(ಪಿಎಂ)– ನಮ್ಮ ಭಾರತದ ರಾಷ್ಟ್ರಧ್ವಜಕ್ಕೆ ಸಂಬಂಧಿಸಿದಂತೆ ಧ್ವಜಾರೋಹಣಕ್ಕೆ ಮಾತ್ರವಲ್ಲದೇ ಧ್ವಜ ಇಳಿಸುವುದಕ್ಕೂ ನಿಯಮಗಳಿದ್ದು, ಈ ಎರಡೂ ಸಂದರ್ಭದಲ್ಲೂ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಅತ್ಯಂತ ಮುಖ್ಯ ಎಂದು ಅಂಕಣಕಾರರೂ ಆದ ನಿವೃತ್ತ ತಹಸೀಲ್ದಾರ್ ಡಾ.ರಂಗನಾಥ್ ಹೇಳಿದರು.

ಮೈಸೂರಿನ ರಾಮಕೃಷ್ಣ ಪರಮಹಂಸ ವೃತ್ತದ ಪರಮಹಂಸ ಮಂಟಪದ ಸಭಾಂಗಣದಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ತಿಂಗಳ ತಿಳಿವು (ಪ್ರತಿ ಹುಣ್ಣಿಮೆಯಂದು ಆಯೋಜಿಸುವ ಉಪನ್ಯಾಸ ಕಾರ್ಯಕ್ರಮ) ಕಾರ್ಯಕ್ರಮದಲ್ಲಿ 'ನಮ್ಮ ಹೆಮ್ಮೆಯ ರಾಷ್ಟ್ರಧ್ವಜ' ಕುರಿತು ಮಾತನಾಡಿದ ಅವರು, ನಮ್ಮ ತ್ರಿವರ್ಣ ಧ್ವಜದ ಗೌರವ ಕಾಪಾಡುವ ಸಲುವಾಗಿ 1950ರಲ್ಲಿ ಪ್ರತ್ಯೇಕ ಕಾನೂನು ಮಾಡಲಾಯಿತು. 1971ರಲ್ಲಿ ಮತ್ತೊಂದು ಕಾಯ್ದೆ ಜಾರಿಗೊಂಡಿತು. 2002ರಲ್ಲಿಯೂ ಧ್ವಜ ಸಂಹಿತೆ ಜಾರಿಗೆ ಬಂದಿದೆ. ರಾಷ್ಟ್ರಧ್ವಜಕ್ಕೆ ಸಂಬಂಧಿಸಿದಂತೆ ಇರುವ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದರು.

ನಮ್ಮ ರಾಷ್ಟ್ರಧ್ವಜ ಸಿದ್ಧಪಡಿಸಲು ಮಾರ್ಗಸೂಚಿ ಸಹ ಇದೆ. ಖಾದಿ ನೂಲಿನಲ್ಲಿ ಮಾತ್ರ ಸಿದ್ಧಪಡಿಸಲು ಅವಕಾಶ ಕಲ್ಪಿಸಲಾಗಿದೆ. ನಮ್ಮ ರಾಷ್ಟ್ರ ಧ್ವಜ ಸ್ತಂಭವು ಕನಿಷ್ಠ 18 ಅಡಿ ಎತ್ತರ ಇರಬೇಕು. ಅದರ ಹೊರತಾಗಿ 25 ಅಡಿ, 45 ಅಡಿ ಹಾಗೂ 75 ಅಡಿ ಎತ್ತರ ಇರುವುದಕ್ಕೂ ಅವಕಾಶವಿದೆ. ನಮ್ಮ ರಾಷ್ಟ್ರಧ್ವಜದಲ್ಲಿರುವ ಅಶೋಕ ಚಕ್ರಕ್ಕೆ ಅಶೋಕ ಸ್ತಂಭ ಮೂಲವಾಗಿದೆ. ಅಶೋಕ ಸ್ತಂಭದ ಮೇಲೆ ಇನ್ನೊಂದು ಚಕ್ರವಿದ್ದು, ಅದನ್ನು ಮಹಾಚಕ್ರ ಎಂದು ಕರೆಯಲಾಗಿದೆ. ಈ ಮಹಾಚಕ್ರವನ್ನು ಸುಪ್ರೀಂಕೋರ್ಟ್‌ನ ಲಾಂಛನದಲ್ಲಿ ಕಾಣಬಹುದು ಎಂದು ವಿವರಿಸಿದರು.

ಅಧಿಕೃತವಾಗಿ 9 ವಿಧದ ಅಳತೆಯಲ್ಲಿ ಮಾತ್ರವೇ ಧ್ವಜಗಳನ್ನು ಸಿದ್ಧಪಡಿಸಲು ಅವಕಾಶ ಕಲ್ಪಿಸಲಾಗಿದೆ. ಆದರೆ ಅನೇಕ ಕಡೆಗಳಲ್ಲಿ ಈ 9 ವಿಧದ ಅಳತೆಗೂ ಮೀರಿದ ದೊಡ್ಡ ಧ್ವಜಗಳನ್ನು ಹಾರಿಸುವುದನ್ನು ಕಾಣುತ್ತೇವೆ. ಅದಕ್ಕೆ ಕೇಂದ್ರ ಸರ್ಕಾರದ ಅನುಮತಿ ಪಡೆಯಲಾಗಿರುತ್ತದೆ. ಈ ರೀತಿಯ ಬೃಹತ್ ರಾಷ್ಟ್ರಧ್ವಜವನ್ನು ದಿನದ 24 ಗಂಟೆಯೂ ಹಾರಾಟಕ್ಕೆ ಅನುಮತಿ ಇರುತ್ತದೆ. ರಾತ್ರಿ ವೇಳೆಯಲ್ಲಿ ಧ್ವಜವು ಕಾಣುವಂತೆ ವಿದ್ಯುತ್ ದೀಪದ ವ್ಯವಸ್ಥೆಗೊಳಿಸಿ, ಸೂಕ್ತ ಭದ್ರತೆ ಒದಗಿಸಬೇಕೆಂಬ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ ಎಂದರು.

ಇದಕ್ಕೂ ಮುನ್ನ ಗಾಯಕಿ ವಿದ್ಯಾ ಗೋಪಾಲ್ ಭಕ್ತಿಗೀತೆಗಳನ್ನು ಪ್ರಸ್ತುತಪಡಿಸಿದರು. ವಿಧಾನ ಪರಿಷತ್ ಮಾಜಿ ಸದಸ್ಯರೂ ಆದ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಡಿ.ಮಾದೇಗೌಡ, ಸೇವಾ ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಕಾರ್ಯದರ್ಶಿ ಕೆ.ಕೆಂಪಲಿಂಗರಾಜು, ಸಂಚಾಲಕ ಪ್ರೊ.ಜಿ.ಚಂದ್ರಶೇಖರ್ ಮತ್ತಿತರರು ಹಾಜರಿದ್ದರು.

ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ವನ ಮಹೋತ್ಸವ



ಮೈಸೂರಿನ ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ವನ ಮಹೋತ್ಸವಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು.

ಮೈಸೂರು, ಜು.21(ಎಸ್‌ಬಿಡಿ)– ಅರಣ್ಯ ಇಲಾಖೆ ವತಿಯಿಂದ ಮೈಸೂರಿನ ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ಭಾನುವಾರ ವನ ಮಹೋತ್ಸವ ಆಯೋಜಿಸಲಾಗಿತ್ತು. ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಇದೇ ವೇಳೆ ಸುಮಾರು 500 ವಿವಿಧ ಗಿಡಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮೈಸೂರು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎನ್.ಬಸವರಾಜ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಲಕ್ಷ್ಮಿಕಾಂತ್, ಆರ್‌ಎಫ್‌ಓಗಳಾದ ಕೆ.ಸುರೇಂದ್ರ, ಶ್ರೀಮತಿ ಧನ್ಯಶ್ರೀ, ಡಿಆರ್‌ಎಫ್‌ಓಗಳಾದ ಸಿ.ಎಸ್.ಪ್ರಕಾಶ್ ಮತ್ತು ಎಂ.ವಿ.ವೆಂಕಟಾಚಲ, ಬಿಜೆಪಿ ಮುಖಂಡರಾದ ಎನ್.ಪ್ರದೀಪ್ ಕುಮಾರ್, ಕಿಶೋರ್, ಶಾಸಕರ ಆಪ್ತ ಸಹಾಯಕ ಆದಿತ್ಯ ಮತ್ತಿತರರು ಉಪಸ್ಥಿತರಿದ್ದರು.

ಬಿ.ಶಿವಣ್ಣ ನಿಧನ



ಮೈಸೂರು, ಜು.21– ಮೈಸೂರಿನ ಕೆ.ಜಿ.ಕೊಪ್ಪಲು ನಿವಾಸಿ ಬಿ.ಶಿವಣ್ಣ(93) ಭಾನುವಾರ ರಾತ್ರಿ ನಿಧನರಾದರು.

ಮೃತರು ಪತ್ನಿ ವಿಶಾಲಾಕ್ಷಮ್ಮ, ಪುತ್ರ ಚಂದ್ರಶೇಖರ್, ಪುತ್ರಿ ಉಷಾ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಜು.22) ಬೆಳಗ್ಗೆ 11 ಗಂಟೆಗೆ ಕೆ.ಜಿ.ಕೊಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಬಿ.ಶಿವಣ್ಣ ಅವರ ನಿಧನಕ್ಕೆ ಯಜಮಾನ್ ಮಾದಯ್ಯ, ಲೇಟ್ ಬೂಪಣ್ಣನವರ ಕುಟುಂಬಸ್ಥರು ತೀವ್ರ ಸಂತಾಪ ಸೂಚಿಸಿದ್ದಾರೆ.

ಲಯನ್ಸ್ ಕ್ಲಬ್ ಆಫ್ ಮೈಸೂರ್ ಪದಾಧಿಕಾರಿಗಳ ಪದಗ್ರಹಣ



ಮೈಸೂರಿನ ತಿಲಕ್‌ನಗರದಲ್ಲಿರುವ ಲಯನ್ಸ್ ಕ್ಲಬ್ ಆಫ್ ಮೈಸೂರ್ ಸಭಾಂಗಣದಲ್ಲಿ 67ನೇ ಪದಗ್ರಹಣ ಸಮಾರಂಭ ನಡೆಯಿತು. ಈ ವೇಳೆ ಸಂಸದ ಯದುವೀರ್ ಒಡೆಯರ್, ಲಯನ್ಸ್ ಮಾಜಿ ಜಿಲ್ಲಾ ಗವರ್ನರ್ ಲಯನ್ ಕೆ.ದೇವೇಗೌಡ, ಒಂದನೇ ಉಪರಾಜ್ಯಪಾಲ ಲಯನ್ ಎ.ಐ.ರಾಜಶೇಖರ್, ಲಯನ್ ನಾರಾಯಣಸ್ವಾಮಿ, ಅಧ್ಯಕ್ಷ ಲಯನ್ ಬಿ.ಶಿವಣ್ಣ, ನಿರ್ಗಮಿತ ಅಧ್ಯಕ್ಷೆ ಲಯನ್ ಬಿ.ಭಾರತಿ, ಕಾರ್ಯದರ್ಶಿ ಲಯನ್ ಜೆ.ಲೋಕೇಶ್, ಖಜಾಂಚಿ ಲಯನ್ ಆನಂದ್ ಕೃಷ್ಣ, ಪ್ರಾಂತೀಯ ಅಧ್ಯಕ್ಷರಾದ ಲಯನ್ ಗಿರೀಶ್, ಪ್ರತಿಷ್ಠಾನ ಅಧ್ಯಕ್ಷ ಲಯನ್ ಸುರೇಶ್, ಮಾಜಿ ರಾಜ್ಯಪಾಲರಾದ ಲಯನ್ ಡಾ.ಪ್ರಭಾ ಮಂಡಲ್ ಲಯನ್ ಶಿವಕುಮಾರ್, ಲಯನ್ ಮೋಹನ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ವಿವಿಧ ಕಾಲೇಜಲ್ಲಿ ಕಾರ್ಗಿಲ್ ರಥಯಾತ್ರೆ



ಕಾರ್ಗಿಲ್ ವಿಜಯ್ ದಿವಸ್ ಸ್ಮರಣಾರ್ಥ ಕಾರ್ಗಿಲ್ ರಥಯಾತ್ರೆ ನಡೆಸಲಾಯಿತು.

ಮೈಸೂರು, ಜು.21(ಎಂಕೆ)– ಮೈಸೂರು ಎಕ್ಸ್–ಸರ್ವಿಸ್‌ಮೆನ್ ಮೂವ್‌ಮೆಂಟ್ ಹಾಗೂ ಯುವ ಬ್ರಿಗೇಡ್ ವತಿಯಿಂದ ಕಾರ್ಗಿಲ್ ವಿಜಯ್ ದಿವಸ್ ಸ್ಮರಣಾರ್ಥ ವಿವಿಧ ಕಾಲೇಜುಗಳಲ್ಲಿ ಕಾರ್ಗಿಲ್ ರಥಯಾತ್ರೆ ನಡೆಸಲಾಯಿತು.

ಗೋಪಾಲಸ್ವಾಮಿ ಪದವಿ ಪೂರ್ವ ಕಾಲೇಜಿನಿಂದ ಆರಂಭಿಸಿ, ಗುರುಕುಲ ಪದವಿ ಕಾಲೇಜು, ಜ್ಞಾನಗಂಗಾ ಪದವಿ ಪೂರ್ವ ಕಾಲೇಜು, ಎನ್‌ಸಿಸಿ ಕ್ಯಾಂಪಸ್, ಹೂಟಗಳ್ಳಿಯಲ್ಲಿರುವ ಸೈನಿಕ್ ಅಕಾಡೆಮಿಯಲ್ಲಿ ನಡೆದ ರಥಯಾತ್ರೆಗೆ ಗೌರವ ಸಲ್ಲಿಸಲಾಯಿತು. ಹಾಗೆಯೇ ಈ ವೇಳೆ ಕಾರ್ಗಿಲ್ ಯುದ್ಧದಲ್ಲಿ ವೀರಮರಣ ಹೊಂದಿದ ಸೌರಬ್ ಕಾಲಿಯ, ಮನೋಜ್‌ಕುಮಾರ್ ಪಾಂಡೆ, ವಿಕ್ರಂ ಭತ್ರಾ, ಯೋಗೇಂದ್ರ ಸಿಂಗ್, ಸಂಜಯ್‌ಕುಮಾರ್ ಸೇರಿ ಒಟ್ಟು 527 ಯೋಧರ ಬಲಿದಾನವನ್ನು ಸ್ಮರಿಸಲಾಯಿತು.

ಎನ್‌ಸಿಸಿ ಆಡಳಿತಾಧಿಕಾರಿ ಮೇಜರ್ ಮಂಜುನಾಥ್, ಮೈಸೂರು ಎಕ್ಸ್ ಸರ್ವಿಸ್ ಮೆನ್ ಮೂವ್‌ಮೆಂಟ್ ಸಂಸ್ಥಾಪಕ ವಿ.ಮಹೇಶ್, ಪ್ರಧಾನ ಕಾರ್ಯದರ್ಶಿ ಮತ್ತು ಸೈನಿಕ್ ಅಕಾಡೆಮಿಯ ಸಂಸ್ಥಾಪಕ ಶ್ರೀಧರ್, ಉಪಾಧ್ಯಕ್ಷ ವಿವೇಕಾನಂದ, ನಿರ್ದೇಶಕರಾದ ಕಿಶೋರ್ ಕದಂ, ಸುರೇಶ್, ಮಹದೇವ್ ಸ್ವಾಮಿ, ಧನಂಜಯ, ಯುವಬ್ರಿಗೇಡ್‌ನ ಸಾಗರ್, ರುದ್ರೇಶ್, ಪ್ರಶಾಂತ್, ನಾರಾಯಣ, ತೇಜಸ್, ಜಯರಾಮ್ ಮತ್ತಿತರರಿದ್ದರು.

ಎಸ್‌ಸಿಪಿ, ಟಿಎಸ್‌ಪಿ ಅನುದಾನ ಬಳಕೆಯ ಕಾಯ್ದೆ ರದ್ದತಿಗೆ ಆಗ್ರಹ

ಮೈಸೂರು, ಜು.21(ಜಿಎ)–ಎಸ್‌ಸಿಪಿ, ಟಿಎಸ್‌ಪಿ ಅನುದಾನದ 25,000 ಕೋಟಿಯನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿರುವುದು ಖಂಡನೀಯ. ಈ ರೀತಿಯ ಬಳಕೆಗೆ ಪೂರಕವಾಗಿರುವ ಕಾಯ್ದೆಯ ಸೆಕ್ಷನ್ 7ಸಿ ಅನ್ನು ಈ ಅಧಿವೇಶನದಲ್ಲಿಯೇ ರದ್ದು ಮಾಡಬೇಕು ಎಂದು ಸಾಮಾಜಿಕ ನ್ಯಾಯ ಸಬಲೀಕರಣ ವೇದಿಕೆ ಸದಸ್ಯ ಕೆ.ಎನ್.ಪ್ರಭುಸ್ವಾಮಿ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳ ಅಭಿವೃದ್ಧಿಗೆಂದು ಮೀಸಲಿಟ್ಟಿರುವ ಹಣವನ್ನು ಈ ರೀತಿ ಸಾರ್ವಜನಿಕ ಯೋಜನೆಗಳಿಗೆ ಬಳಸಿಕೊಳ್ಳುವ ಮೂಲಕ ಪರಿಶಿಷ್ಟರನ್ನು ವಂಚಿಸಲಾಗುತ್ತಿದೆ. ನಾವು ಗ್ಯಾರಂಟಿಯನ್ನು ವಿರೋಧಿಸುವುದಿಲ್ಲ. ಆದರೆ, ಪರಿಶಿಷ್ಟರ ಅಭಿವೃದ್ಧಿಗೆಂದು ಇರಿಸಿರುವ ಹಣವನ್ನು ಇತರೆ ಯಾವುದೇ ಯೋಜನೆಗಳಿಗೆ ಬಳಸಬಾರದು ಎಂದರು.

ಈಗಾಗಲೇ ಕಾಯ್ದೆಯ 7ಡಿ ಸೆಕ್ಷನ್ ಬಳಸಿ 70 ಸಾವಿರ ಕೋಟಿ ಹಾಗೂ 7ಸಿ ಸೆಕ್ಷನ್ ಬಳಸಿ 25 ಸಾವಿರ ಕೋಟಿ ಅನ್ಯ ಉದ್ದೇಶಕ್ಕೆ ಉಪಯೋಗಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈಗಾಗಲೇ 7ಡಿ ಸೆಕ್ಷನ್ ತೆಗೆದು ಹಾಕಿದ್ದಾರೆ. ಈಗಲೂ ಅಂತದ್ದೇ ಇಚ್ಛಾಶಕ್ತಿ ತೋರಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸೋಮೇಶ್ ಭೀಮನಹಳ್ಳಿ, ರವೀಂದ್ರ ಕೋಟೆ, ದಿನಕರ್ ಅಶೋಕಪುರಂ, ಎಚ್.ಎಸ್.ಗಣೇಶ್‌ಮೂರ್ತಿ, ಬಿ.ಬಸವರಾಜು, ಎನ್.ಮಹೇಶ್ ಶ್ರೀರಾಂಪುರ, ಪ್ರದೀಪ್ ಇರಸವಾಡಿ, ಸಾಗರ್ ತಾಯೂರು ಉಪಸ್ಥಿತರಿದ್ದರು.

ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರ ದೀಕ್ಷಾ ದಿನ ಆಚರಣೆ



ಆದಿಚುಂಚನಗಿರಿ ಮಠದ ಪೀಠಾಧಿಪತಿ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರ ದೀಕ್ಷಾ ದಿನವನ್ನು ಮೈಸೂರು ಹಾಗೂ ಚಾಮರಾಜನಗರ ಒಕ್ಕಲಿಗರ ಸಂಘದ ವತಿಯಿಂದ ಗಿಡ ನೆಡುವ ಮೂಲಕ ಆಚರಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ, ಪ್ರಧಾನ ಕಾರ್ಯದರ್ಶಿ ಚೇತನ್, ಖಜಾಂಚಿ ಆರ್.ಲೋಕೇಶ್, ರಾಜ್ಯ ಒಕ್ಕಲಿಗ ಸಂಘದ ನಿರ್ದೇಶಕರಾದ ಎಂ.ಬಿ.ಮಂಚೇಗೌಡ, ನಿರ್ದೇಶಕರಾದ ಎ.ರವಿ, ಸುಶೀಲಾ ನಂಜಪ್ಪ, ಕೆ.ಪಿ.ನಾಗಣ್ಣ, ಗುರುರಾಜ್, ಪಾಲಿಕೆ ಮಾಜಿ ಸದಸ್ಯ ಸುನಿಲ್, ಸಂಘದ ಮಾಜಿ ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ತೇಜಸ್ ಇದ್ದರು.


ನಾಳೆ ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘದ ಮಹಾಸಭೆ

ಮೈಸೂರು, ಜು.21(ಬಿಎಲ್‌ಯು)–ಮೈಸೂರಿನ ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘದ 2023–24ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಜು.23ರಂದು ಆಯೋಜಿಸಲಾಗಿದೆ ಎಂದು ಸಂಘದ ಪತ್ರಿಕಾ ಕಾರ್ಯದರ್ಶಿ ಜೆ.ಚಾಮಯ್ಯ ತಿಳಿಸಿದ್ದಾರೆ. ಅಂದು ಬೆಳಗ್ಗೆ 10 ಗಂಟೆಗೆ ಮೈಸೂರಿನ ಪೊಲೀಸ್ ಭವನದಲ್ಲಿ ಮಹಾಸಭೆ ಆಯೋಜಿಸಲಾಗಿದ್ದು, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಹೇಳಿದ್ದಾರೆ. ಸಂಘದ ಅಧ್ಯಕ್ಷ ಎಂ.ಸಿ.ಮರಿಸ್ವಾಮಿ ಸಭೆಯ ಅಧ್ಯಕ್ಷತೆ ವಹಿಸಲಿದ್ದು, ಸಂಘದ ಸದಸ್ಯರು ಸಭೆಯಲ್ಲಿ ಭಾಗವಹಿಸಬೇಕೆಂದು ಚಾಮಯ್ಯ ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ನಿಫಾ: ಕೇರಳದಲ್ಲಿ 14 ವರ್ಷದ ಬಾಲಕ ಸಾವು

ಕೋರಿಖಿಕ್ಕೋಡ್: ಕೇರಳದಲ್ಲಿ ಮತ್ತೆ ನಿಫಾ ವೈರಸ್ ಪತ್ತೆಯಾಗಿದೆ. 14 ವರ್ಷದ ಬಾಲಕನಲ್ಲಿ ನಿಫಾ ವೈರಸ್ ಶನಿವಾರ ಪತ್ತೆ ಆಗಿತ್ತು. ಕೋರಿಖಿಕ್ಕೋಡ್‌ನ ವೈದ್ಯಕೀಯ ಕಾಲೇಜಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಬಾಲಕ ಇಂದು ಬೆಳಗ್ಗೆ ಸಾವನ್ನಪ್ಪಿದ್ದಾನೆ. ಪಾಂಡಿಕ್ಕಾಡ್ ಮೂಲದ ಬಾಲಕನ ಸಂಪರ್ಕದಲ್ಲಿದ್ದವರನ್ನು ಕ್ವಾರಂಟೈನ್‌ನಲ್ಲಿ ಇಡಲಾಗಿದೆ. ಬಾಲಕನ ಕುಟುಂಬದವರೊಂದಿಗೆ ಮಾತನಾಡಿ ವೈಜ್ಞಾನಿಕ ರೀತಿಯಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ಮಾಹಿತಿ ನೀಡಿದ್ದಾರೆ. ಬಾಲಕ ಸಾವನ್ನಪ್ಪಿದ ಬೆನ್ನಲ್ಲೇ ಕೇರಳ ಆರೋಗ್ಯ ಇಲಾಖೆ ಮುನ್ನೆಚ್ಚರಿಕಾ ಕ್ರಮ ಕೈಗೊಂಡಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.07.2024 ಸೋಮವಾರ, ಮಳೆ ನಕ್ಷತ್ರ: ಪುಷ್ಯ, 20.07.2024ರಿಂದ 02.08.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಶ್ರವಣ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** 'ಮಧುಮೇಹ ತೊಂದರೆ' ಮತ್ತು ಚರ್ಮ ರೋಗಿಗಳಿಗೆ ಆಯುರ್ವೇದ ಪಂಚಕರ್ಮ ಪ್ರತ್ಯೇಕ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.
- **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳ ಪ್ರವೇಶ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮ. ಉದ್ಘಾಟನೆ: ಮೈಸೂರಿನ ಸಿಸಿಎಫ್ ಡಾ. ಮಾಲತಿ ಪ್ರಿಯ, ಮುಖ್ಯ ಅತಿಥಿ: ಅನ್ನಪೂರ್ಣ ಕಣ್ಣಿನ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಅಶ್ವತ್ಥ್ ಕುಮಾರ್. ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ. ಕಾಲೇಜು ಆವರಣ. ಬೆಳಗ್ಗೆ 10 ಗಂಟೆಗೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಸೈನೊಸೈಟಿಸ್, ತಲೆನೋವಿಗೆ ಉಚಿತ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್. ಬೆಳಗ್ಗೆ 10ರಿಂದ ಸಂಜೆ 4ರವರೆಗೆ.
- **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ:** 2024–25ನೇ ಸಾಲಿನ ಸಂಶೋಧನಾ ವಿದ್ಯಾರ್ಥಿ ವೇದಿಕೆ ಉದ್ಘಾಟನೆ ಮತ್ತು ಬ್ಲಾಗ್ ಅನಾವರಣ ಕಾರ್ಯಕ್ರಮ. ಉದ್ಘಾಟನೆ: ಮತ್ತು ಬ್ಲಾಗ್ ಅನಾವರಣ: ವಿಶ್ರಾಂತ ಕನ್ನಡ ಪ್ರಾಧ್ಯಾಪಕಿ ಪ್ರೊ. ಅರವಿಂದ ಮಾಲಗತ್ತಿ. ಅಧ್ಯಕ್ಷತೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಪ್ರಾಧ್ಯಾಪಕಿ ಪ್ರೊ. ಎನ್.ಕೆ.ಲೋಲಾಕ್ಷಿ. ಸ್ಥಳ: ಪ್ರಥಮ ಕನ್ನಡ ಎಂ.ಎ. ಕೊಠಡಿ, ಮೊದಲನೇ ಮಹಡಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ. ಬೆಳಗ್ಗೆ 10.30ಕ್ಕೆ.
- **ವಿಸ್ಮಯ ಬುಕ್ ಹೌಸ್:** ಸಾತನೂರು ದೇವರಾಜು ಅವರ 'ಅಭಿವ್ಯಕ್ತಿ ಸಂಪದ' ಲಲಿತ ಪ್ರಬಂಧ ಸಂಕಲನ ಹಾಗೂ ಡಾ.ಬಿ.ಬಸವರಾಜು ಅವರ 'ಕಾಡು ಮಲ್ಲಿಗೆ' ಕಿರು ಕಾದಂಬರಿ ಲೋಕಾರ್ಪಣೆ. ಪುಸ್ತಕಗಳ ಲೋಕಾರ್ಪಣೆ: ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ.ಅರವಿಂದ ಮಾಲಗತ್ತಿ. ಅಧ್ಯಕ್ಷತೆ: ಸಾಹಿತಿ ಪ್ರೊ.ಸಿ.ನಾಗಣ್ಣ. ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣ, ಸಂಜೆ 5 ಗಂಟೆಗೆ.
- **ದಿವ್ಯ ಜೀವನ ಸಂಘ, ಮಹಿಳಾ ಶಾಖೆ:** ಗುರು ಪೂರ್ಣಿಮೆ. ಸಾಧನಾ ಸಪ್ತಾಹ ಹಾಗೂ ಆರಾಧನಾ ಕಾರ್ಯಕ್ರಮ. ಚಿನ್ಮಯ ಮಿಷನ್‌ನ ಪೂಜ್ಯ ಸ್ವಾಮಿನಿ ಕಾಶಿಕಾನಂದ ಅವರಿಂದ ಪ್ರವಚನ. ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ. ಸಂಜೆ: 6.30ರಿಂದ 7.30ರವರೆಗೆ.
- **ಅವಧೂತ ದತ್ತ ಪೀಠ:** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ. ಸಂಜೆ 7 ಗಂಟೆಗೆ ಚಾತುರ್ಮಾಸ್ಯ ಪ್ರವಚನ ಪ್ರಾರಂಭ. ಸ್ಥಳ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ. ಊಟಿ ರಸ್ತೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ–ಡಾ.ಸಿ.ಎಂ.ಕುಂದಗೋಳ್, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಅಂಚೆ–ಅಂಕನ–ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್.ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಡಾ.ಪಿ.ಎಸ್.ಮುರಲೀಧರ್, ವ್ಯಾಖ್ಯಾನ: ಡಾ.ಕಬ್ಬಿನಾಲೆ ವಸಂತ ಭಾರಧ್ವಾಜ್, 6.50–ರೈತರಿಗೆ ಸಲಹೆ, 7.15–ಡೆಂಗ್ಯೂ ಹೆಚ್ಚಾಗುತ್ತಿದೆ ಜಾಗ್ರತೆ–ಈ ಕುರಿತು ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಆರೋಗ್ಯ ಅಧಿಕಾರಿ ಡಾ.ಎಸ್.ಕೆ.ಸವಿತಾ ಅವರೊಂದಿಗೆ ಸಂದರ್ಶನ, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ): ರೂಪಕ: ಸಂಸ, ರಚನೆ: ಜೀ.ಶಂ.ಪರಮಶಿವಯ್ಯ, ನಿರ್ಮಾಣ: ಹೆಚ್.ಎಸ್.ಪಾರ್ವತಿ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ.ಮೈಸೂರು ಮಂಜುನಾಥ್–ವೈಯೋಲಿನ್, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ, ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್ ಬಿ, 12.30–ದೇವರನಾಮ, 12.45 ನಮ್ಮ ಆರೋಗ್ಯ–ಓ.ಆರ್.ಎಸ್. ಸಪ್ತಾಹದ ಸಂದರ್ಭದಲ್ಲಿ 'ಓ.ಆರ್.ಎಸ್.ನ ಮಹತ್ವ' ಕುರಿತು ಮಾಹಿತಿ ನೀಡಲಿದ್ದಾರೆ ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್‌ನ ಕರ್ನಾಟಕ ಶಾಖೆ ಕಾರ್ಯದರ್ಶಿ ಡಾ.ಶಶಿಕಿರಣ್ ಕೆ.ಬಿ. ಮತ್ತು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಹಾಗೂ ಚೆಲುವಾಂಬ ಆಸ್ಪತ್ರೆಯ ಮಕ್ಕಳ ವಿಭಾಗದ ಮುಖ್ಯಸ್ಥರಾದ ಡಾ.ಎಂ.ಆರ್.ಸವಿತಾ ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.20–ಭಾವಗೀತೆಗಳು–ಎ.ಎನ್.ಶೀಲಾ, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ವಿ.ಕೆ.ರಾಮನ್, ಕೊಳಲು ವಾದನ, 4.00–ಮಹಿಳಾರಂಗ: "ನಾನು ನನ್ನ ಕಂಪನಿ", ವಿಷಯ: ಬಾಳೆ ನಾರಿನ ಉತ್ಪನ್ನಗಳ ತಯಾರಿಕಾ ಘಟಕದ ಉದ್ಯಮಿ ಪಲ್ಲವಿ ಹಾಗೂ ಸಂಗಡಿಗರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನ, 4.45–ಹಿಂದಿ ಪಾಠ–ಎಸ್.ಎನ್.ಭಟ್, ಸೈಪಂಗಲ್ಲು, 6.50–ಕೃಷಿರಂಗ: ವನ ಮಹೋತ್ಸವ ಕುರಿತು ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುತ್ತಾರೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ ಅರಣ್ಯ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ಪರಮೇಶ. ಪ್ರಸ್ತುತಿ: ಎನ್.ಕೇಶವಮೂರ್ತಿ, 7.45–ವಿಧಾನ ಮಂಡಲದಲ್ಲಿ ಇಂದು 8.30 ಕನ್ನಡದಲ್ಲಿ ಭಾಷಣ: ಜನಪದ ತ್ರಿಪದಿಗಳಲ್ಲಿ ಜೀವನ ಮೌಲ್ಯಗಳು–ಮಾತನಾಡುತ್ತಾರೆ ಸಿಂಧನೂರಿನ ಸರ್ಕಾರಿ ಪದವಿ ಮಹಾವಿದ್ಯಾಲಯದ ಬಸವರಾಜ ಪಿ.ನಾಯಕ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಶೇಕ್ ಚಿನ್ನ ಮೌಲಾನ–ನಾಗಸ್ವರ, 10.00 ನಾಟಕ–ಯಂತ್ರ ಅತಂತ್ರ ರಚನೆ–ಭುವನೇಶ್ವರಿ ಹೆಗಡೆ, ನಿರ್ಮಾಣ–ಡಾ.ಬಿ.ಎಂ.ಶರಭೇಂದ್ರ ಸ್ವಾಮಿ.

ಮೈಸೂರು ಮಿತ್ರ

ಶಿರೂರು ಗುಡ್ಡ ಕುಸಿದ ಪ್ರದೇಶಕ್ಕೆ ಸಿಎಂ ಸಿದ್ದರಾಮಯ್ಯ ಭೇಟಿ

ರಕ್ಷಣಾ ತಂಡಗಳ ಕಾರ್ಯಕ್ಷಮತೆಗೆ ಮೆಚ್ಚುಗೆ



ಶಿರೂರು ಗುಡ್ಡ ಕುಸಿತ ಪ್ರದೇಶಕ್ಕೆ ಸಿಎಂ ಸಿದ್ದರಾಮಯ್ಯ ಭೇಟಿ ನೀಡಿ, ಪರಿಶೀಲನೆ ನಡೆಸಿದರು

ಶಿರೂರು(ಉತ್ತರ ಕನ್ನಡ), ಜು.21– ಅಂಕೋಲಾ ತಾಲೂಕಿನ ಶಿರೂರು ಗುಡ್ಡ ಕುಸಿತ ಉಂಟಾಗಿರುವ ಅತ್ಯಂತ ಅಪಾಯಕಾರಿ ಸನ್ನಿವೇಶದಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಎಸ್‌ಡಿಆರ್‌ಎಫ್ ಮತ್ತು ಎನ್‌ಡಿಆರ್‌ಎಫ್ ತಂಡಗಳ ಜೊತೆ ಚರ್ಚೆ ನಡೆಸಿದ ಮುಖ್ಯಮಂತ್ರಿಗಳು, ಸಿಬ್ಬಂದಿಯ ಕಾರ್ಯಕ್ಷಮತೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಭಾನುವಾರದಂದು ರಣಭೀಕರ ಮಳೆಯಲ್ಲೇ ಶಿರೂರು ಗುಡ್ಡ ಕುಸಿತದ ಸ್ಥಳಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಾಚರಣೆಯ ಪ್ರಗತಿ ಮತ್ತು ಎಸ್‌ಡಿಆರ್‌ಎಫ್ ಹಾಗೂ ಎನ್‌ಡಿಆರ್‌ಎಫ್ ಸಿಬ್ಬಂದಿಗೆ ಎದುರಾಗುತ್ತಿರುವ ಸವಾಲುಗಳನ್ನು ಪರಿಶೀಲನೆ ನಡೆಸಿದರು. ಈ ವೇಳೆ ಲಭ್ಯವಿರುವ ಎಲ್ಲಾ ಆಧುನಿಕ ತಂತ್ರಜ್ಞಾನ ಬಳಸಲು –ಉನ್ನತ ಮೆಟಲ್ ಡಿಟೆಕ್ಟರ್ ಮತ್ತು ಜೆಸಿಬಿ ಬಳಸಿ ಕಾರ್ಯಾಚರಣೆ ನಡೆಸಲು ಸಿಎಂ ಸೂಚನೆ ನೀಡಿದರು.

ಗುಡ್ಡ ಕುಸಿತದಿಂದ ಮುಚ್ಚಿ ಹೋಗಿರುವ ರಸ್ತೆಯ ಎಡಭಾಗದಲ್ಲಿ ಕುಸಿತದ ಗುಡ್ಡ–ಬಲ ಭಾಗದಲ್ಲಿ ಭೋರ್ಗರೆದು ಹರಿಯುತ್ತಿರುವ ಕಾಳಿ ನದಿ ಇದೆ. ಜೊತೆಗೆ ನಿರಂತರವಾಗಿ ಸುರಿಯುತ್ತಿರುವ ಧಾರಾಕಾರ ಮಳೆಯಲ್ಲಿ ಮಣ್ಣಿನಡಿ ಸಿಲುಕಿರುವ ಜೀವಗಳ ಪತ್ತೆ ಕಾರ್ಯ ಬಹಳ ಸವಾಲಿನದ್ದಾಗಿದೆ ಎಂದು ಮುಖ್ಯಮಂತ್ರಿಗಳು ಸಿಬ್ಬಂದಿಯ ಶ್ರಮಕ್ಕೆ ಮೆಚ್ಚುಗೆ ಸೂಚಿಸಿದರು.

ನಾಲ್ಕು ತಂಡಗಳು ಗುಡ್ಡ ಕುಸಿತದ ಕೆಳಗೆ ಸಿಲುಕಿರಬಹುದಾದವರ ಪತ್ತೆಗೆ ರಾಡಾರ್ ತಂತ್ರಜ್ಞಾನ ಬಳಸಿ ಕಾರ್ಯಾಚರಣೆ ನಡೆಸುತ್ತಿವೆ. ಇನ್ನು ನಾಲ್ಕು ತಂಡಗಳು ಮತ್ತೊಂದು ಬದಿಯ ನದಿಯೊಳಗೆ ಕಾರ್ಯಾಚರಣೆ ನಡೆಸುತ್ತಿವೆ. ಈ ಬಗ್ಗೆ ಹಲವು ದಿನಗಳಿಂದ ತಾಲೂಕಿನಲ್ಲೇ ಮೊಕ್ಕಾಂ ಹೂಡಿರುವ ಕಂದಾಯ ಸಚಿವ ಕೃಷ್ಣಬೈರೇಗೌಡರು ಮುಖ್ಯಮಂತ್ರಿಗಳಿಗೆ ವಿವರಿಸಿದರು.

ಕಾರ್ಯಾಚರಣೆ ನಡೆಯುತ್ತಿರುವ ಜಾಗ ಮತ್ತು ಮಣ್ಣು ತುಂಬಿರುವ ರಸ್ತೆಯೂ ಕುಸಿಯುವ ಸಾಧ್ಯತೆಗಳ ಬಗ್ಗೆ ಮುಖ್ಯಮಂತ್ರಿಗಳು ಅಧಿಕಾರಿಗಳಿಂದ ಮಾಹಿತಿ ಪಡೆದು ಈ ಬಗ್ಗೆ ಹೆಚ್ಚು ಜಾಗರೂಕರಾಗಿರುವಂತೆ ಎಚ್ಚರಿಸಿದರು. ಗುಡ್ಡ ಕುಸಿತದ ಸ್ಥಳ ಒಂದು ರೀತಿ ದ್ವೀಪದಂತಾಗಿದೆ. ಸುತ್ತಲೂ ಕಾಳಿ ನದಿ ಭೋರ್ಗರೆದು ಹರಿಯುತ್ತಿದೆ. ನಡುವೆ ಅರ್ಧ ಕುಸಿದ ಗುಡ್ಡ ನಿಂತಿದೆ. ಹೀಗಾಗಿ ಕಾರ್ಯಾಚರಣೆ ವೇಳೆ ಎದುರಾಗಬಹುದಾದ ಅಪಾಯಗಳು ಮತ್ತು ಸವಾಲುಗಳ ಬಗ್ಗೆ ಉನ್ನತ ಮಟ್ಟದ ತಜ್ಞರಿಂದ ಮಾಹಿತಿ ಪಡೆದು ತಂತ್ರಜ್ಞಾನದ ನೆರವು ಪಡೆಯುವಂತೆ ಮುಖ್ಯಮಂತ್ರಿಗಳು ಸೂಚಿಸಿದರು.

ಕಂದಾಯ ಸಚಿವ ಕೃಷ್ಣಬೈರೇಗೌಡ, ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಮಾಜಿ ಸಚಿವ ಆರ್.ವಿ. ದೇಶಪಾಂಡೆ, ಶಾಸಕ ಸತೀಶ್ ಸೈಲ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಎಲ್.ಕೆ. ಅತೀಕ್, ಶಾಲಿನಿ ರಜನೀಶ್ ಸೇರಿ ಕಂದಾಯ ಇಲಾಖೆಯ ಹಿರಿಯ ಅಧಿಕಾರಿ ಮತ್ತು ಸಿಬ್ಬಂದಿ ಸ್ಥಳದಲ್ಲಿದ್ದರು.

ಪತ್ರಕರ್ತರಿಗೆ ರೇನ್ ಕೋಟ್ ಕೊಟ್ಟಿದ್ದೀರಾ?: ಒಂದೇ ಸಮನೆ ಸುರಿಯುತ್ತಿದ್ದ ಭೀಕರ ಮಳೆ ನಡುವೆ ಕಾರ್ಯನಿರ್ವಹಿಸುತ್ತಿದ್ದ ಪತ್ರಕರ್ತರು ಮತ್ತು ಕ್ಯಾಮೆರಾಮನ್‌ಗಳನ್ನು ಗಮನಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪತ್ರಕರ್ತರಿಗೆಲ್ಲಾ ರೇನ್ ಕೋಟ್ ಮತ್ತು ರಬ್ಬರ್ ಶೂ ಕೊಟ್ಟಿದ್ದೀರಾ? ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ಮುಖ್ಯಮಂತ್ರಿಗಳಿಂದ ಈ ಪ್ರಶ್ನೆ ನಿರೀಕ್ಷಿಸಿರದ ಅಧಿಕಾರಿಗಳು ತಬ್ಬಿಬ್ಬಾದರು.

ಮೃತರ ಕುಟುಂಬಸ್ಥರಿಗೆ 5 ಲಕ್ಷ ರೂ.ಪರಿಹಾರ ಘೋಷಣೆ

ಅಂಕೋಲಾ, ಜು.21– ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಸತತ ಮಳೆಗೆ ಗುಡ್ಡ ಕುಸಿದು 10 ಮಂದಿ ಕಾಣೆಯಾಗಿದ್ದು, 7 ಮಂದಿಯ ಮೃತದೇಹ ಸಿಕ್ಕಿದೆ, ಇನ್ನೂ ಮೂವರು ಸಿಕ್ಕಿಲ್ಲ ಎಂದು ತಿಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಕೃತಿ ವಿಕೋಪದಲ್ಲಿ ಮೃತಪಟ್ಟವರ ಜೀವವನ್ನು ವಾಪಸ್ ತರಲು ಸಾಧ್ಯವಿಲ್ಲ, ಕುಟುಂಬಸ್ಥರಿಗೆ ಹಣದ ಸಹಾಯ ಮಾಡಬಹುದು. ಮೃತಪಟ್ಟವರ ಕುಟುಂಬಸ್ಥರಿಗೆ ತಲಾ 5 ಲಕ್ಷ ರೂಪಾಯಿ ನೀಡಲಾಗುವುದು ಎಂದು ಘೋಷಿಸಿದರು.

ದುರಂತದಲ್ಲಿ ಗ್ಯಾಸ್ ಟ್ಯಾಂಕರ್, ಲಾರಿ ಕೊಚ್ಚಿ ಹೋಗಿದೆ. ರಕ್ಷಣಾ ಕಾರ್ಯಾಚರಣೆ ತ್ವರಿತವಾಗಿ ನಡೆಸಲು ಸೂಚಿಸಿದ್ದೇನೆ. ಸದನ ನಡೆಯುತ್ತಿರುವುದರಿಂದ ತಕ್ಷಣ ಬರಲು ಆಗಿಲ್ಲ. ಉತ್ತರ ಕನ್ನಡ ಜಿಲ್ಲಾಡಳಿತ ಎಲ್ಲಾ ಕ್ರಮಗಳನ್ನು ಕೈಗೊಂಡಿದೆ ಎಂದರು. ಕೇರಳದ ಲಾರಿ ಚಾಲಕ ಅರ್ಜುನ್ ಹುಡುಕಾಟದಲ್ಲಿ ಯಾವುದೇ ವಿಳಂಬವಾಗಿಲ್ಲ. ಕಾರ್ಯಾಚರಣೆಗೆ ಭಾರಿ ಮಳೆ ಸವಾಲಾಗಿದೆ. ಕೇರಳ ಸರ್ಕಾರ ನಮ್ಮ ಸಂಪರ್ಕದಲ್ಲಿದೆ. ಸಾಧ್ಯವಿರುವ ಎಲ್ಲವನ್ನೂ ಮಾಡುತ್ತಿದ್ದೇವೆ. ರಸ್ತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸಂಬಂಧಿಸಿದ್ದು. ರಕ್ಷಣಾ ಕಾರ್ಯಾಚರಣೆ ಬಳಿಕ ಯಾರೇ ತಪ್ಪಿತಸ್ಥರಿದ್ದರೂ ಅವರ ಮೇಲೆ ಕ್ರಮವಾಗುತ್ತದೆ ಎಂದರು.

ಮುಡಾ ಹಗರಣ: ರೋಹಿಣಿ ಸಿಂಧೂರಿ ನೇತೃತ್ವದಲ್ಲಿ ತನಿಖಾ ಸಮಿತಿ ರಚಿಸಲು ಒತ್ತಾಯ

ಮೈಸೂರು, ಜು.21–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ನಡೆದಿರುವ ಹಗರಣಗಳ ಸತ್ಯಾಸತ್ಯತೆ ಹೊರ ಬರಲು ದಕ್ಷ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿಯವರ ನೇತೃತ್ವದಲ್ಲಿ ಸಮಿತಿ ರಚಿಸಿ, ತನಿಖೆ ನಡೆಸಬೇಕೆಂದು ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಕಾರ್ಯದರ್ಶಿ ಸಯ್ಯದ್ ಫಾರೂಕ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ರಾಜ್ಯದಲ್ಲಿ ಅತ್ಯುತ್ತಮ ಹಾಗೂ ಸ್ಥಿರ ಆಡಳಿತ ನೀಡುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಳಂಕ ತರುವ ಉದ್ದೇಶದಿಂದ ಕೆಲವರು ಮಾಹಿತಿ ಹಕ್ಕು ಅಧಿನಿಯಮವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಬಿಜೆಪಿ ಮತ್ತು ಜೆಡಿಎಸ್‌ನವರು ಕಾಂಗ್ರೆಸ್‌ನ ಜನಪರ ಆಡಳಿತವನ್ನು ಸಹಿಸದೇ, ತಾವು ಮಾಡಿರುವ ಎಲ್ಲಾ ಅಕ್ರಮ ವ್ಯವಹಾರಗಳನ್ನು ಕಾಂಗ್ರೆಸ್ ಮೇಲೆ ಹೊರಿಸುತ್ತಿದ್ದಾರೆ. ಬಿಜೆಪಿ ಆಡಳಿತದ ವೇಳೆ ಮೈಸೂರು ಜಿಲ್ಲಾಧಿಕಾರಿಯಾಗಿದ್ದ ರೋಹಿಣಿ ಸಿಂಧೂರಿಯವರು ಮುಡಾದಲ್ಲಿ ನಡೆದಿದ್ದ ಅಕ್ರಮಗಳ ಬಗ್ಗೆ ಧ್ವನಿ ಎತ್ತಿದ್ದರು ಎಂದಿರುವ ಸಯ್ಯದ್ ಫಾರೂಕ್, ಮುಡಾದ ಅಕ್ರಮಗಳ ಬಗ್ಗೆ ತಿಳಿದಿರುವ ರೋಹಿಣಿ ಸಿಂಧೂರಿ ನೇತೃತ್ವದಲ್ಲಿ ತನಿಖಾ ಸಮಿತಿ ರಚಿಸಿ ಬಿಜೆಪಿ ಮತ್ತು ಜೆಡಿಎಸ್‌ನವರು ಮುಡಾದಲ್ಲಿ ಎಸಗಿರುವ ಅಕ್ರಮಗಳನ್ನು ಪತ್ತೆ ಹಚ್ಚಬೇಕು. ಹಾಗೂ ಶೇ.50:50 ಅನುಪಾತದಡಿ ವಿತರಣೆಯಾಗಿರುವ ನಿವೇಶನಗಳು ಸೇರಿದಂತೆ ಎಲ್ಲಾ ರೀತಿಯ ಅಕ್ರಮಗಳ ಬಗ್ಗೆ ಸತ್ಯಾಸತ್ಯತೆಯನ್ನು ಹೊರ ತರಬೇಕು ಎಂದು ಒತ್ತಾಯಿಸಿದ್ದಾರೆ.

ಕೆಲಸ ಕೊಡಿಸುವ ನೆಪದಲ್ಲಿ ಚೆನ್ನೈನಲ್ಲಿ ಮೈಸೂರಿನ ಯುವತಿಗೆ ಲೈಂಗಿಕ ದೌರ್ಜನ್ಯ:

ಮಹಿಳೆ ಸೇರಿ ಇಬ್ಬರು ಬಂಧನ



ಬಂಧಿತ ಸತೀಶ್ ಮತ್ತು ಶಕೀಲಾ

ಚೆನ್ನೈ, ಜು.21– ಉದ್ಯೋಗ ಕೊಡಿಸುವುದಾಗಿ ಹೇಳಿ ಮೈಸೂರು ಮೂಲದ 19 ವರ್ಷದ ಯುವತಿಯೊಬ್ಬಳ ಮೇಲೆ ವ್ಯಕ್ತಿಯೊಬ್ಬ ಲೈಂಗಿಕ ದೌರ್ಜನ್ಯ ಎಸಗಿದ ಘಟನೆ ತಮಿಳುನಾಡು ರಾಜಧಾನಿ ಚೆನ್ನೈನಲ್ಲಿ ನಡೆದಿದೆ. ಈ ಪ್ರಕರಣ ಸಂಬಂಧ ಈಗಾಗಲೇ ಆರೋಪಿ ಹಾಗೂ ಆತನ ಸ್ನೇಹಿತೆಯನ್ನು ಪೊಲೀಸರು ಬಂಧಿಸಿದ್ದಾರೆ.

ವೆಲ್ಲೂರು ಮೂಲದ ಸತೀಶ್ ಕುಮಾರ್ (32), ಮತ್ತು ಈತನ ಸಹಚರೆ ಎನ್ನಲಾದ ಮಡಿಪಾಕ್ಕಂ ಮೂಲದ ಶಕೀಲಾ (33) ಎಂಬಾಕೆಯನ್ನೂ ಪೊಲೀಸರು ಬಂಧಿಸಿದ್ದಾರೆ. ಇಬ್ಬರನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಜೈಲಿಗೆ ಸ್ಥಳಾಂತರಿಸಿದ್ದಾರೆ. ಪ್ರಮುಖ ಆರೋಪಿ ಚೆನ್ನೈನಲ್ಲಿ ಲಾರಿ ಚಾಲಕನಾಗಿ ಕೆಲಸ ಮಾಡುತ್ತಿದ್ದ ಎಂದು ಮೂಲಗಳು ತಿಳಿಸಿವೆ.

ವಿವರ: ಉದ್ಯೋಗಕ್ಕಾಗಿ ಹುಡುಕಾಟ ನಡೆಸುತ್ತಿದ್ದ ಯುವತಿ ತನ್ನ ತಂದೆ–ತಾಯಿಯನ್ನು ಕೊಯಮತ್ತೂರಿನಲ್ಲಿ ಬಿಟ್ಟು, ಕೆಲಸ ಹುಡುಕಿಕೊಂಡು ಚೆನ್ನೈಗೆ ಬಂದಿದ್ದಳು. ಕೋವಿಲಂಬಾಕ್ಕಂನಲ್ಲಿರುವ ಸ್ನೇಹಿತರ ಮನೆಯಿಂದ ಮೈಸೂರಿಗೆ ಮರಳಲು ಬಸ್ ನಿಲ್ದಾಣಕ್ಕೆ ಆಗಮಿಸಿದ್ದಳು.

ಈ ಸಂದರ್ಭದಲ್ಲಿ ವ್ಯಕ್ತಿಯೊಬ್ಬ ಯುವತಿಯನ್ನು ಪರಿಚಯ ಮಾಡಿಕೊಂಡು, ಕೆಲಸ ಕೊಡಿಸುವುದಾಗಿ ಭರವಸೆ ನೀಡಿದ್ದಾನೆ. ಅಲ್ಲದೇ, ಕೆಲಸ ಸಿಗುವವರೆಗೂ ಅರುಂಬಕ್ಕಂನಲ್ಲಿರುವ ತನ್ನ ಸ್ನೇಹಿತೆಯ ಮನೆಯಲ್ಲಿ ಇರುವಂತೆ ಹೇಳಿದ್ದಾನೆ. ಇದನ್ನೇ ನಂಬಿದ ಯುವತಿ ಅರುಂಬಕ್ಕಂನ ಮನೆಯೊಂದಕ್ಕೆ ಹೋಗಿದ್ದಳು. ಆದರೆ, ಅಲ್ಲಿಗೆ ತಲುಪಿದಾಗ ಮನೆ ಬಾಗಿಲು ಹಾಕಿ ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಈ ವೇಳೆ, ಆತನ ಗೆಳತಿ ಸಹ ಅಲ್ಲಿಯೇ ಇದ್ದಳು ಎನ್ನಲಾಗಿದೆ.

ಬಳಿಕ ಸಂತ್ರಸ್ತೆ ತನ್ನ ಮೊಬೈಲ್ ಮೂಲಕ ಪೊಲೀಸ್ ತುರ್ತು ಸಂಖ್ಯೆಗೆ ಸಂಪರ್ಕಿಸಿ, ತನ್ನ ಮೇಲೆ ನಡೆದ ಕೃತ್ಯದ ಬಗ್ಗೆ ದೂರು ನೀಡಿದ್ದಾಳೆ. ತಕ್ಷಣವೇ ಕಾರ್ಯಪ್ರವೃತ್ತರಾದ ಕೊಯಂಬೆಡು ಮಹಿಳಾ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಪೊಲೀಸರು ಮನೆ ಮೇಲೆ ದಾಳಿ ನಡೆಸಿ, ಸಂತ್ರಸ್ತೆಯನ್ನು ರಕ್ಷಿಸಿದ್ದಾರೆ. ಅಲ್ಲದೇ, ದೂರಿನ ಮೇರೆಗೆ ಪೊಲೀಸರು ತನಿಖೆ ನಡೆಸಿ, ಆರೋಪಿ ಮತ್ತು ಆತನ ಸ್ನೇಹಿತೆಯನ್ನೂ ಬಂಧಿಸಿದ್ದಾರೆ.

ಜನ್ಮದಿನದ ಶುಭಾಶಯ




ರಾಜ್ಯಸಭೆ ವಿರೋಧ ಪಕ್ಷದ ನಾಯಕರೂ ಆದ ಎಐಸಿಸಿ ಅಧ್ಯಕ್ಷ ಡಾ.ಎಂ.ಮಲ್ಲಿಕಾರ್ಜುನ ಖರ್ಗೆ ಅವರ ಹುಟ್ಟುಹಬ್ಬದ ಪ್ರಯುಕ್ತ ಭಾನುವಾರ ಬೆಂಗಳೂರಿನ ನಿವಾಸದಲ್ಲಿ ಅವರಿಗೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಿ.ನರೇಂದ್ರ ಶುಭಾಶಯ ಕೋರಿದರು. ಈ ವೇಳೆ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜಶೇಖರ್ ರಾಮಸ್ವಾಮಿ ಇದ್ದರು.

ಶ್ರೀವ್ಯಾಸರಾಜ ವಿದ್ಯಾಪೀಠಕ್ಕೆ ಭೂಮಿಪೂಜೆ




ಶ್ರೀವ್ಯಾಸರಾಜ ಮಠದ(ಸೋಸಲೆ) ವತಿಯಿಂದ ಮೈಸೂರು ಹೊರ ವಲಯದ ಶ್ರೀನಗರದಲ್ಲಿ ಶ್ರೀವ್ಯಾಸರಾಜ ವಿದ್ಯಾಪೀಠ ನಿರ್ಮಾಣಕ್ಕೆ ಭಾನುವಾರ ಶ್ರೀ 1008 ವಿದ್ಯಾಶ್ರೀಶ ಶ್ರೀಪಾದಂಗಳವರು ಭೂಮಿಪೂಜೆ ನೆರವೇರಿಸಿದರು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್, ವಿದ್ಯಾಪೀಠದ ಗೌರವ ಕಾರ್ಯದರ್ಶಿ ಡಿ.ಪಿ.ಮಧುಸೂದನ್ ಆಚಾರ್ಯ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ಸತ್ಯ ಸಂಕಲ್ಪ ತೀರ್ಥರ ಆರಾಧನೆ



ಮೈಸೂರು ಅಗ್ರಹಾರದ ಉತ್ತರಾದಿ ಮಠದಲ್ಲಿ 'ಶ್ರೀ ಸತ್ಯ ಸಂಕಲ್ಪ ತೀರ್ಥರ' ಆರಾಧನಾ ಮಹೋತ್ಸವದ ಅಂಗವಾಗಿ ಅವರ ವೃಂದಾವನಕ್ಕೆ ಭಾನುವಾರ ವಿಶೇಷ ಅಲಂಕಾರ ಮಾಡಲಾಗಿತ್ತು. ಸಂಜೆ ಖ್ಯಾತ ಗಾಯಕ ಮೈಸೂರು ರಾಮಚಂದ್ರ ಆಚಾರ್ಯ ಅವರು ದಾಸರ ಪದಗಳ ಗಾಯನ ಪ್ರಸ್ತುತಪಡಿಸಿದರು.



ಮೈಸೂರು ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಅಪಾರ ಹಾನಿ

●ಪಿರಿಯಾಪಟ್ಟಣದಲ್ಲಿ ಗೋಡೆ ಕುಸಿದು ಮಹಿಳೆ ಸಾವು ●3 ಸೇತುವೆ ಮುಳುಗಡೆ, 249 ಮನೆ, 154 ವಿದ್ಯುತ್ ಕಂಬ, 3 ಟ್ರಾನ್ಸ್‌ಫಾರ್ಮರ್, 22.63 ಕಿ.ಮೀ. ವಿದ್ಯುತ್ ಲೈನ್ ಹಾನಿ



ಮೈಸೂರು, ಜು.21(ಎಸ್‌ಬಿಡಿ)– ಮೈಸೂರು ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಅಪಾರ ಪ್ರಮಾಣದ ಹಾನಿಯಾಗಿದ್ದು, ನೂರಾರು ಮಂದಿ ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದಿದ್ದಾರೆ.

ಪಿರಿಯಾಪಟ್ಟಣ ತಾಲೂಕು ಕಗ್ಗುಂಡಿ ಗ್ರಾಮದಲ್ಲಿ ಮನೆಯ ಗೋಡೆ ಕುಸಿದು 22 ವರ್ಷದ ಮಹಿಳೆ ಸಾವನ್ನಪ್ಪಿದ್ದು, ಸದ್ಯ ಜಿಲ್ಲೆಯ ಬೇರೆಲ್ಲೂ ಮಾನವ ಪ್ರಾಣಹಾನಿ ಸಂಭವಿಸಿಲ್ಲ. ಆದರೆ ಮೂರು ಸಣ್ಣ ಸಾಕು ಪ್ರಾಣಿಗಳು ಸಾವನ್ನಪ್ಪಿವೆ ಎಂಬ ಮಾಹಿತಿ ಲಭ್ಯವಾಗಿದೆ.

ಅಪಾರ ಬೆಳೆ ನಷ್ಟ: ಕಳೆದೆರಡು ದಿನಗಳಿಂದ ಜಿಲ್ಲೆಯಲ್ಲಿ ಮಳೆ ಆರ್ಭಟ ತಗ್ಗಿದೆ. ಆದರೆ ಜೂ.1ರಿಂದ ಈವರೆಗೆ ವಾಡಿಕೆ(178 ಮಿ.ಮೀ.)ಗಿಂತ ಶೇ.45ರಷ್ಟು ಹೆಚ್ಚು ಅಂದರೆ 259 ಮಿ.ಮೀ. ಮಳೆ ಸುರಿದಿದೆ. ಪರಿಣಾಮ ಪ್ರವಾಹ ಪರಿಸ್ಥಿತಿ ಉಂಟಾಗಿ 68.75 ಹೆಕ್ಟೇರ್‌ನಷ್ಟು ಕೃಷಿ ಹಾಗೂ 82.32 ಹೆಕ್ಟೇರ್ ತೋಟಗಾರಿಕೆ ಬೆಳೆಗೆ ಹಾನಿಯಾಗಿದೆ ಎಂದು ಮೈಸೂರು ಜಿಲ್ಲಾಡಳಿತ ಮಾಹಿತಿ ನೀಡಿದೆ.

ಮೂಲಸೌಕರ್ಯಕ್ಕೆ ಹಾನಿ: ಅಪಾರ ಮಳೆಯಿಂದ ಜಿಲ್ಲೆಯಲ್ಲಿ ಮುಳುಗಡೆಯಾಗಿದ್ದ 11ರಲ್ಲಿ ಮೂರು ಸೇತುವೆಗಳಿಗೆ ಹಾನಿಯಾಗಿದೆ. 15 ಮನೆಗಳಿಗೆ ತೀವ್ರತರ ಹಾಗೂ 234 ಮನೆಗಳಿಗೆ ಅಲ್ಪ ಪ್ರಮಾಣದ ಹಾನಿಯಾಗಿದೆ. 154 ವಿದ್ಯುತ್ ಕಂಬಗಳು, 3 ಪರಿವಾಹಕ(ಟ್ರಾನ್ಸ್‌ಫಾರ್ಮರ್)ಗಳು ಹಾಗೂ 22.63 ಕಿ.ಮೀ. ವಿದ್ಯುತ್ ಲೈನ್‌ಗೆ ಹಾನಿಯಾಗಿದೆ. ನೀರು ಹರಿವಿನ ರಭಸಕ್ಕೆ ಆರೇಳು ಕಿ.ಮೀ.ನಷ್ಟು ರಸ್ತೆ ಹಾಳಾಗಿವೆ.

ಸಾರ್ವಜನಿಕರ ರಕ್ಷಣೆ: ನಂಜನಗೂಡು ತಾಲೂಕಿನ ಮೂರು ಹಳ್ಳಿಗಳ 350 ಮಂದಿ, ಹೆಚ್.ಡಿ.ಕೋಟೆಯ ಒಂದು ಹಳ್ಳಿಯಲ್ಲಿನ ಮೂವರು ಹಾಗೂ ಪಿರಿಯಾಪಟ್ಟಣದ ಒಂದು ಹಳ್ಳಿಯ ಏಳು ಮಂದಿ ಅತಿವೃಷ್ಟಿಯಿಂದ ಬಾಧಿತರಾಗಿದ್ದಾರೆ. ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಲಾಗಿರುವ ಒಟ್ಟು 360 ಸಂತ್ರಸ್ತರಲ್ಲಿ 177 ಮಂದಿ ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದಿದ್ದಾರೆ. ಪ್ರಸ್ತುತ ನಂಜನಗೂಡಿನಲ್ಲಿ 5, ಹೆಚ್.ಡಿ.ಕೋಟೆ ಹಾಗೂ ಪಿರಿಯಾಪಟ್ಟಣದಲ್ಲಿ ಒಂದೊಂದು ಕಾಳಜಿ ಕೇಂದ್ರ ಆರಂಭಿಸಿ, ಮೂಲಸೌಕರ್ಯ ಕಲ್ಪಿಸಲಾಗಿದೆ.

ಬಹುತೇಕ ಡ್ಯಾಂಗಳು ಭರ್ತಿ: ಹಳೇ ಮೈಸೂರು ಭಾಗದ ಕೆಆರ್‌ಎಸ್, ಹೇಮಾವತಿ, ಕಬಿನಿ, ನುಗು, ತಾರಕ ಹಾಗೂ ಹಾರಂಗಿ ಜಲಾಶಯಗಳು ಬಹುತೇಕ ಭರ್ತಿಯಾಗಿದ್ದು, ಅಪಾರ ಪ್ರಮಾಣದ ನೀರನ್ನು ಹೊರಬಿಡುತ್ತಿರುವುದರಿಂದ ನದಿಪಾತ್ರದ ಜನ–ಜಾನುವಾರುಗಳನ್ನು ಸ್ಥಳಾಂತರಿಸಲಾಗಿದೆ ಎಂದು ನೈಸರ್ಗಿಕ ವಿಕೋಪ ಪರಿಸ್ಥಿತಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಿಯಾಚಿನ್ ಯುದ್ಧಭೂಮಿಗೆ ಮೈಸೂರಿನ ಯುವತಿ ಆಯ್ಕೆ



ಮೈಸೂರು,ಜು.21– ಸೇನಾ ಪಡೆಯ ಕ್ಯಾಪ್ಟನ್ ಆಗಿರುವ ಮೈಸೂರಿನ ವಲ್ಲಭಭಾಯಿ ನಗರದ ನಿವಾಸಿ ಸುಪ್ರಿತಾ ಅವರು ವಿಶ್ವದ ಅತಿ ಎತ್ತರದ ಯುದ್ಧಭೂಮಿ ಸಿಯಾಚಿನ್‌ನಲ್ಲಿ ಕರ್ತವ್ಯ ನಿರ್ವಹಿಸಲು ಆಯ್ಕೆಯಾಗಿದ್ದಾರೆ. ಆ ಮೂಲಕ ಸಿಯಾಚಿನ್‌ನಲ್ಲಿ ಕರ್ತವ್ಯ ನಿರ್ವಹಿಸಲು ಆಯ್ಕೆಯಾಗಿರುವ ಮೊದಲ ಮಹಿಳಾ ಸೇನಾಧಿಕಾರಿ ಎಂಬ ಹೆಗ್ಗಳಿಕೆ ಗಳಿಸಿದ್ದಾರೆ. ತಲಕಾಡು ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ತಿರುಮಲ್ಲೇಶ್ ಹಾಗೂ ನಿರ್ಮಲಾ ದಂಪತಿಗಳ ಪುತ್ರಿ ಸುಪ್ರಿತಾ. ಮೈಸೂರಿನ ಜೆಎಸ್‌ಎಸ್ ಕಾಲೇಜಿನಲ್ಲಿ ಎಲ್‌ಎಲ್‌ಬಿ ಪದವಿ ಹಾಗೂ ಎನ್‌ಸಿಸಿ ಸರ್ಟಿಫಿಕೇಟ್ ಪಡೆದಿದ್ದಾರೆ.

ಗುರಿ ಮುಟ್ಟಲು ಗುರುಭಕ್ತಿ ಜೊತೆಗೆ ಶ್ರದ್ಧೆ ಬೇಕು

ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ



ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರು ಗುರು ಪೂರ್ಣಿಮೆ ಪ್ರಯುಕ್ತ ಪೂಜಾ ಕಾರ್ಯ ನಡೆಸಿದರು.

ಮೈಸೂರು, ಜು.21(ಎಂಕೆ)– ಗುರುವಿನ ಕೃಪೆ ಇಲ್ಲದೆ ಗುರಿ ಮುಟ್ಟಲು ಸಾಧ್ಯವಿಲ್ಲ. ಹಾಗಾಗಿ ಪ್ರತಿನಿತ್ಯ ಗುರು ಸ್ಮರಣೆ ಮಾಡಬೇಕು ಎಂದು ಅವಧೂತ ಪೀಠದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ತಿಳಿಸಿದರು.

ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಅವಧೂತ ದತ್ತ ಪೀಠದ ಪ್ರಾರ್ಥನಾ ಮಂದಿರದಲ್ಲಿ ಗುರು ಪೂರ್ಣಿಮೆ ಪ್ರಯುಕ್ತ ಪೂಜಾ ಕಾರ್ಯಗಳನ್ನು ನೆರವೇರಿಸಿ ಮಾತನಾಡಿದ ಅವರು, ಗುರಿ ಮುಟ್ಟಲು ಗುರು ಭಕ್ತಿಯ ಜೊತೆಗೆ ಶ್ರದ್ಧೆ ಇರಬೇಕು. ಅಂತವರಿಗೆ ಮಾತ್ರ ಗುರು ಕೃಪೆ ದೊರೆಯುತ್ತದೆ ಎಂದು ತಿಳಿಸಿದರು.

ಗುರುವಿನ ಮೂಲಕ ಜ್ಞಾನ ಸಂಪಾದನೆ ಮಾಡಬೇಕು. ಗುರು ಇಲ್ಲದೆ ಗುರಿ ಮುಟ್ಟಲು ಖಂಡಿತ ಸಾಧ್ಯವಿಲ್ಲ. ಹಾಗಾಗಿ ಗುರು ಸ್ಮರಣೆ ನಿರಂತರವಾಗಿರಬೇಕು. ನಾವು ಈ ದಿನ ವೇದವ್ಯಾಸರನ್ನು ಸ್ಮರಿಸಬೇಕು ಜ್ಞಾನ ಪ್ರತಿಯೊಬ್ಬರಿಗೂ ಬೇಕೇ ಬೇಕು ನಮಗೆಲ್ಲರಿಗೂ ಶ್ರೀ ಕೃಷ್ಣನೇ ಮೊದಲ ಗುರು. ಧರ್ಮ ಸಂರಕ್ಷಣೆಗೆ ಕೃಷ್ಣ ಯುದ್ಧ ಮಾಡಿಸಿ, ಜ್ಞಾನ ಸಂಪಾದನೆಗೆ ಗೀತ ಬೋಧನೆ ಮಾಡಿದರು. ವೇದಾಂತ, ವೈರಾಗ್ಯದಿಂದ ಮಾತ್ರ ಮಾನವನ ಉದ್ಧಾರ ಸಾಧ್ಯ. ಹಾಗಾಗಿ ವೇದವ್ಯಾಸರನ್ನು ಮರೆಯಬಾರದು ಎಂದರು.

ನಿರಂತರ ಭಗವಂತನ ಸ್ಮರಣೆ ಮಾಡಲು ಚಾತುರ್ಮಾಸ್ಯ ಅತ್ಯುತ್ತಮ. ಯಾರು ಬೇಕಾದರೂ ಚಾತುರ್ಮಾಸ್ಯ ವ್ರತ ಮಾಡಬಹುದು. ನೀವು ಮಾಡಿ ನಾವೀಗ ಮೈಸೂರಿನಲ್ಲೇ ಇಂದಿನಿಂದ ಚಾತುರ್ಮಾಸ್ಯ ವ್ರತ ಆರಂಭಿಸಿದ್ದೇವೆ. ನೀವು ಒಂದಲ್ಲ ಒಂದು ಅಂದರೆ ಕ್ಷೀರ ವ್ರತ, ಕ್ಷಾರ ವ್ರತವನ್ನು ಈ ಮಾಸಗಳಲ್ಲಿ ಮಾಡಬಹುದು ಎಂದು ಸಲಹೆ ನೀಡಿದರು. ಇದೇ ವೇಳೆ ಶತಶ್ಲೋಕಿ ರಾಮಾಯಣ ಬ್ರೈಲ್ ಲಿಪಿಯಲ್ಲಿ ತೆಲುಗು ಮತ್ತು ಕನ್ನಡ ಭಾಷೆಯ ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ ನೂರಾರು ಮಂದಿ ಭಕ್ತರು ಉಪಸ್ಥಿತರಿದ್ದರು.

ಸನ್ಮಾನ: ಸಂಜೆ ವೇಳೆ ಹೈದರಾಬಾದ್‌ನ ಲೇಖಕ ಅನುಮಾಂಡ್ಲ ಭೂಮಯ್ಯ ಅವರಿಗೆ 'ಶ್ರೀ ಗಣಪತಿ ಸಚ್ಚಿದಾನಂದ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಬರಹಗಾರ ಕುಪ್ಪ ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ಅಂಗನವಾಡಿ ಕಾರ್ಯಕರ್ತೆಯರ ಜಿಲ್ಲಾ ಸಮಾವೇಶ

ವೇತನ ಹೆಚ್ಚಳ, ಪಿಂಚಣಿ ಯೋಜನೆ ಜಾರಿ ಮಾಡದಿದ್ದರೆ ಉಗ್ರ ಹೋರಾಟ

ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಡಿ.ಎ. ವಿಜಯ ಭಾಸ್ಕರ್ ಎಚ್ಚರಿಕೆ



ಮೈಸೂರಿನ ಕೆ.ಆರ್.ವನಂನಲ್ಲಿರುವ ಶ್ರೀರಾಮ ಸೇವಾ ಅರಸು ಮಂಡಳಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ ವತಿಯಿಂದ ಆಯೋಜಿಸಿದ್ದ ಎರಡನೇ ಜಿಲ್ಲಾ ಸಮ್ಮೇಳನವನ್ನು ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಿ.ಎ.ವಿಜಯಭಾಸ್ಕರ್ ಉದ್ಘಾಟಿಸಿದರು.

ಮೈಸೂರು,ಜು.21(ಎಂಟಿವೈ)– ಸರ್ಕಾರಿ ನೌಕರರಿಗೆ ವೇತನ ಹಾಗೂ ಗ್ರಾಜ್ಯುಟಿ ಹೆಚ್ಚಳ ಮಾಡಿದಂತೆ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ವೇತನ ಹೆಚ್ಚಳ ಮಾಡುವುದರೊಂದಿಗೆ ನಿವೃತ್ತಿಯಾದವರಿಗೆ ಪಿಂಚಣಿ ಯೋಜನೆ ಜಾರಿಗೊಳಿಸದಿದ್ದರೆ ಉಗ್ರ ಹೋರಾಟ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಡಿ.ಎ.ವಿಜಯಭಾಸ್ಕರ್ ಎಚ್ಚರಿಸಿದ್ದಾರೆ.

ಮೈಸೂರಿನ ಕೆ.ಆರ್.ವನಂನಲ್ಲಿರುವ ಶ್ರೀರಾಮ ಸೇವಾ ಅರಸು ಮಂಡಳಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ವತಿಯಿಂದ ಭಾನುವಾರ ಆಯೋಜಿಸಿದ್ದ ಎರಡನೇ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಲವು ವರ್ಷಗಳಿಂದಲೂ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಬೇಡಿಕೆಗಳನ್ನು ಈಡೇರಿಸಲು ಹೋರಾಟ ಮಾಡಿಕೊಂಡು ಬರುತ್ತಿದ್ದರೂ ನ್ಯಾಯ ಸಿಕ್ಕಿಲ್ಲ. ಅಂಗನವಾಡಿಯಲ್ಲಿ ಕೆಲಸ ಮಾಡುವವರಿಗೆ ಸರ್ಕಾರ ಕೊಡುವ ಗೌರವಧನದಿಂದ ಗೌರವವಾಗಿ ಬದುಕಲು ಸಾಧ್ಯವಾಗುತ್ತಿಲ್ಲ. ಕನಿಷ್ಠ ವೇತನ ಕಾಯಿದೆ, ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು ಎಂದು ಒತ್ತಾಯಿಸುತ್ತಿದ್ದರೂ ಇದುವರೆಗೂ ಸಫಲವಾಗಿಲ್ಲ ಎಂದು ಹೇಳಿದರು.

ಅಂಗನವಾಡಿ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರಾಗಿ ಪರಿಗಣಿಸಬೇಕೆಂದು ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿಯ ಮೊರೆ ಹೋದಾಗ ನಮ್ಮ ಪರವಾಗಿ ತೀರ್ಪು ನೀಡಿತ್ತು ಆದರೆ, ಅಂದಿನ ಮುಖ್ಯಮಂತ್ರಿ ಜೆ.ಹೆಚ್.ಪಟೇಲ್ ಸರ್ಕಾರ ಸುಪ್ರೀಂಕೋರ್ಟ್ ಮೊರೆ ಹೋದಾಗ ಗೌರವಧನ ಪಡೆಯುವವರು ಸರ್ಕಾರಿ ನೌಕರರು ಅಲ್ಲ ಎನ್ನುವ ತೀರ್ಪು ನೀಡಿದ್ದರಿಂದ ಮಂಡಳಿ ನೀಡಿದ ಆದೇಶ ಪರಿಗಣಿಸಿಲ್ಲ. ಆದರೆ, ಗ್ರಾಜ್ಯುಟಿ ವ್ಯಾಪ್ತಿಗೆ ಸೇರಿಸಿದ್ದರೂ ಈತನಕ ಆದೇಶ ನೀಡಿಲ್ಲ ಎಂದು ಕಿಡಿಕಾರಿದರು.

ಸರ್ಕಾರಿ ನೌಕರರ ವೇತನ ಹೆಚ್ಚು ಮಾಡಿದ ಸರ್ಕಾರ ಅಂಗನವಾಡಿ ಕಾರ್ಯಕರ್ತೆಯರ ವೇತನ ಬಗ್ಗೆ ತುಟಿ ಬಿಚ್ಚುತ್ತಿಲ್ಲ. ಬಿಸಿಯೂಟ, ಕಟ್ಟಡ ಕಾರ್ಮಿಕರು, ಕೈಗಾರಿಕಾ ಕಾರ್ಮಿಕರು, ತೋಟ, ಬೀಡಿ ಕಾರ್ಮಿಕರನ್ನು ಒಟ್ಟುಗೂಡಿಸಿ ಹೋರಾಟ ಮಾಡಿಕೊಂಡು ಬಂದಿದ್ದರೂ ಸರ್ಕಾರ ಅಸಂಘಟಿತ ನೌಕರರ ಪರ ನಿಲುವು ತಾಳುತ್ತಿಲ್ಲ. ರಾಜ್ಯ ಸರ್ಕಾರ ಕಣ್ತೆರೆದು ನೋಡುವಂತೆ ಮಾಡಬೇಕಾಗಿದೆ. ಕಡಿಮೆ ವೇತನದಲ್ಲಿ ಜೀವನ ಸಾಗಿಸಲು ಆಗುವುದಿಲ್ಲ. ಗ್ರಾಜ್ಯುಟಿ ಕೊಡದಿದ್ದರೆ ಬೀದಿಗಿಳಿದು ಹೋರಾಟ ಮಾಡುವುದು ಅನಿವಾರ್ಯ ಎಂದು ಎಚ್ಚರಿಸಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಅಂಗನವಾಡಿ ಸಂಘಟನೆಯ ಜಿಲ್ಲಾ ಸಂಚಾಲಕ ಜಗನ್ನಾಥ್ ವಹಿಸಿದ್ದರು. ರಾಜ್ಯಾಧ್ಯಕ್ಷ ಬಿ.ಅಮ್ಜದ್, ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಜಯಮ್ಮ, ಎಐಟಿಯುಸಿ ಜಿಲ್ಲಾ ಅಧ್ಯಕ್ಷ ಎನ್.ಕೆ.ದೇವದಾಸ್, ಎಐಟಿಯುಸಿ ಕಟ್ಟಡ ಕಾರ್ಮಿಕ ಸಂಘಟನೆ ಪ್ರಧಾನ ಕಾರ್ಯದರ್ಶಿ ಕೆ.ಜಿ. ಸೋಮರಾಜೇ ಅರಸ್, ಪದಾಧಿಕಾರಿಗಳಾದ ವೈ.ಮಹದೇವಮ್ಮ, ಪಿ.ಎಂ.ಸರೋಜಮ್ಮ, ಕಾಂತಮ್ಮ, ಭಾಗ್ಯ, ಸುಮ, ಸಿ.ಚಂದ್ರಮ್ಮ, ಪುಟ್ಟಮ್ಮ, ಗಿರಿಜಾ, ಭುವನೇಶ್ವರಿ, ಚಂದ್ರಿಕಾ ಮತ್ತಿತರರು ಪಾಲ್ಗೊಂಡಿದ್ದರು.

ಮೆರವಣಿಗೆ: ಜಿಲ್ಲಾ ಸಮ್ಮೇಳನದ ಅಂಗವಾಗಿ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರು ಗನ್‌ಹೌಸ್ ಮುಂಭಾಗದಿಂದ ಮೆರವಣಿಗೆಯಲ್ಲಿ ಕಾಡಾ ಕಚೇರಿ ಸಿಗ್ನಲ್ ವೃತ್ತ, ಅಗ್ರಹಾರ ಸರ್ಕಲ್, ಸಿದ್ದಪ್ಪ ವೃತ್ತ, ನಂಜುಮಳಿಗೆ ವೃತ್ತ, ಮಾನಂದವಾಡಿ ರಸ್ತೆಯ ಮೂಲಕ ಕೆ.ಆರ್.ವನಂನಲ್ಲಿರುವ ಅರಸು ಸಭಾಂಗಣವನ್ನು ತಲುಪಿತು. ದಾರಿಯುದ್ದಕ್ಕೂ ಘೋಷಣೆ ಕೂಗಿ ಗಮನ ಸೆಳೆದರು.

ಹಕ್ಕೊತ್ತಾಯಗಳು

ಸಮಾವೇಶದಲ್ಲಿ ಪ್ರಮುಖ ಐದು ಹಕ್ಕೊತ್ತಾಯ ಮಾಡಲಾಯಿತು. ಐಸಿಡಿಸಿ ಯೋಜನೆಯನ್ನು ಬಲಪಡಿಸಬೇಕು. 2023ರ ಏಪ್ರಿಲ್ 1ರ ಹಿಂದೆ ನಿವೃತ್ತಿ ಹೊಂದಿದ ಎಲ್ಲಾ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ 1972ರ ಗ್ರಾಜ್ಯುಟಿ ಕಾಯ್ದೆಯ ಪ್ರಕಾರ ಗ್ರಾಜ್ಯುಟಿಯನ್ನು ನೀಡಬೇಕು. ಗ್ರಾಜ್ಯುಟಿ ಆದೇಶದಲ್ಲಿರುವವರು ಗರಿಷ್ಠ ಮಿತಿ 30 ವರ್ಷ ಸೀಲಿಂಗ್ ಇರುವುದನ್ನು ತೆಗೆಯಬೇಕು.

ಎಲ್ಲಾ ಅಂಗನವಾಡಿ ಕೇಂದ್ರದ ಮಕ್ಕಳಿಗೆ ಸಮವಸ್ತ್ರ ಹಾಗೂ ಪಠ್ಯ ಪುಸ್ತಕಗಳನ್ನು ಕೊಡಬೇಕು. ಅಂಗನವಾಡಿ ಕೇಂದ್ರದಿಂದ ಮಗು ಒಂದನೇ ತರಗತಿಗೆ ಹೋಗುವಾಗ ವರ್ಗಾವಣೆ ಪತ್ರವನ್ನು ನೀಡುವುದಕ್ಕೆ ಸರ್ಕಾರ ಕ್ರಮವಹಿಸಬೇಕು. ನಿವೃತ್ತಿ ಹೊಂದಿದವರಿಗೆ ಪಿಂಚಣಿ ಜಾರಿ ಮಾಡುವುದು.

ನಕ್ಕರೆ ಅದೇ ಸ್ವರ್ಗ

ಅತ್ತೆ : ಏನಮ್ಮಾ ಸೊಸೆ ಕೈಯಾಕ್ ಖಾಲಿ ಇದೆ, ಚೆನ್ನಾಗಿ ಕಾಣಿಸ್ತಿಲ್ಲಾ
ಸೊಸೆ : ಹೌದು ಅತ್ತೆ, ಮೊಬೈಲ್ ಚಾರ್ಜ್‌ಗೆ ಹಾಕಿದ್ದೀನಿ.
ಅತ್ತೆ : ನಿನ್ನ ಮೊಬೈಲ್‌ಗೆ ಬೆಂಕಿ ಹಾಕಾ, ಬಳೆಗಳನ್ನೂ ಯಾಕ್ ಹಾಕೊಂಡಿಲ್ಲ...?

ಮೈಸೂರು ಮಿತ್ರ
ಸೋಮವಾರ, 22 ಜುಲೈ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........
ಮನೆಯಿಂದ ಹೊರಗೆ ಹೋದಾಗ ಬುದ್ಧಿ ನಿಮ್ಮ ಹಿಡಿತದಲ್ಲಿರಲಿ,
ಮನೆಯೊಳಗೆ ಬಂದಾಗ ಹೃದಯ ತೆರದಿರಲಿ...

ವೇದ ಸುಳ್ಳಾದರೂ { ಉಗಿದರೆ ತುಪ್ಪ ಕೆಡುತ್ತದೆ,
ಗಾದೆ ಸುಳ್ಳಾಗದು { ನುಂಗಿದರೆ ಗಂಟಲು ಕೆಡುತ್ತದೆ.

ನಿಮ್ಮ ಪತ್ರಗಳು

■ ನೀರಿನ ಪ್ರವಾಸಿ ತಾಣಗಳಿಗೆ ತಾತ್ಕಾಲಿಕವಾಗಿ ನಿರ್ಬಂಧಿಸಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಮಳೆ ಆರ್ಭಟ ಹೆಚ್ಚಾಗಿರುವುದರಿಂದ ರಾಜ್ಯದ ಕೊಡಗು, ಚಿಕ್ಕಮಗಳೂರು, ಮಂಡ್ಯ, ಮೈಸೂರು, ಶಿವಮೊಗ್ಗ ಸೇರಿ ಇತರ ಜಿಲ್ಲೆಗಳಲ್ಲಿರುವ ನದಿಗಳು ಮತ್ತು ಡ್ಯಾಮ್‌ಗಳಲ್ಲಿ ನೀರಿನ ಮಟ್ಟ ಹೆಚ್ಚಳವಾಗಿ ಹರಿಯುತ್ತಿರುವ ಹಿನ್ನೆಲೆಯಲ್ಲಿ ಪ್ರವಾಸಿ ತಾಣಗಳಿಗೆ ತಾತ್ಕಾಲಿಕವಾಗಿ ನಿರ್ಬಂಧ ಹೇರಬೇಕು.



ಮಡಿಕೇರಿ, ಚಿಕ್ಕಮಗಳೂರು, ಶಿವಮೊಗ್ಗದ ಕೆಲವು ಭಾಗಗಳಲ್ಲಿ ಮಳೆಯ ಸಮಯದಲ್ಲಿ ಭೂಕುಸಿತಗಳು ಮತ್ತು ಮರಗಳು ಬೀಳುತ್ತಿರುವ ಹಿನ್ನೆಲೆಯಲ್ಲಿ ರಸ್ತೆಗಳಲ್ಲಿ ವಾಹನ ಸವಾರರಿಗೂ ತೊಂದರೆ ಉಂಟಾಗಲಿದೆ. ಪ್ರವಾಸಿ ನೆಪ ಮಾಡಿಕೊಂಡು ಅನೇಕ ಕುಟುಂಬದ ಸಮೇತ, ಸ್ನೇಹಿತರೊಂದಿಗೆ ಒಂದೊಂದು ತಂಡ ಮಾಡಿಕೊಂಡು ಮತ್ತು ಜಲಕ್ರೀಡೆಗಳಿಗೆ ಸಂಬಂಧಪಟ್ಟಂತೆ ನಿಯಮಗಳನ್ನು ಮೀರಿ ನಿರ್ಬಂಧಿತ ಪ್ರದೇಶಗಳಿಗೆ ತೆರಳಿ ಅನಾಹುತ ಮಾಡಿಕೊಳ್ಳುವುದನ್ನು ತಪ್ಪಿಸುವ ಸಲುವಾಗಿ ರಾಜ್ಯದ ಪ್ರವಾಸೋದ್ಯಮ ಇಲಾಖೆ ಮತ್ತು ಸರ್ಕಾರಗಳು ಅಧಿಸೂಚನೆ ಹೊರಡಿಸಿ ಸಾರ್ವಜನಿಕರಿಗೆ ತಾತ್ಕಾಲಿಕವಾಗಿ (ಮಳೆ ಆರ್ಭಟ ಮತ್ತು ನದಿ, ಸಾಗರ, ಡ್ಯಾಮ್‌ಗಳು, ಡ್ಯಾಮ್‌ನ ಹಿನ್ನೀರಿನ ಪ್ರದೇಶದ ನೀರಿನ ಮಟ್ಟ ಕಡಿಮೆಯಾಗುವರೆಗೂ) ಸಹಕರಿಸಲು ಕೋರಬೇಕು. ಇದಕ್ಕೆ ಸಾರ್ವಜನಿಕರು ಕೂಡ ಸ್ಪಂದಿಸುವ ಮೂಲಕ ಮಾದರಿಯಾಗಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

■ ಬಿಜೆಪಿ ಸೀಟುಗಳ ಕುಸಿತಕ್ಕೆ ಕಾರಣವೇನು?

ಮಾನ್ಯರೆ,

ಲೋಕಸಭಾ ಚುನಾವಣೆ ಸೇರಿದಂತೆ ಇತ್ತೀಚಿನ ಉಪ ಚುನಾವಣೆಗಳಲ್ಲಿ ಬಿಜೆಪಿಯ ಸಂಖ್ಯಾಬಲ ಕುಸಿದಿದ್ದು ಕಳೆದ ಹತ್ತು ವರ್ಷಗಳ ನಾಗಾಲೋಟಕ್ಕೆ ಬ್ರೇಕ್ ಬಿದ್ದಂತಾಗಿದೆ. ರಾಮಮಂದಿರ ನಿರ್ಮಾಣ ಹಾಗೂ ಪ್ರಖರ ಹಿಂದೂತ್ವದ ಅಜೆಂಡಕ್ಕೆ ಮತದಾರರು ಮನ್ನಣೆ ನೀಡಿಲ್ಲವೆಂಬುದು ಈ ಬಾರಿಯ ಚುನಾವಣೆಯಲ್ಲಿ ಬಹಿರಂಗವಾಗಿದೆ. ಉತ್ತರಪ್ರದೇಶದಂತಹ ಭದ್ರಕೋಟೆಯಲ್ಲೂ ಬಿಜೆಪಿ ಕಳಪೆತನವನ್ನು ಪ್ರದರ್ಶಿ ಸಿದ್ದು ಪಶ್ಚಿಮ ಬಂಗಾಳದಲ್ಲಿ ಅಬ್ಬರಿಸಿ ಬೊಬ್ಬಿರಿದರೂ ಮಮತಾ ಬ್ಯಾನರ್ಜಿ ಎಂಬ ಬಂಗಾಳದ ಹುಲಿ ಮುಂದೆ ಬಿಜೆಪಿ ಆಟ ನಡೆದಿಲ್ಲ. ಕರ್ನಾಟಕ ಹೊರತುಪಡಿಸಿ ದಕ್ಷಿಣದ ರಾಜ್ಯಗಳಲ್ಲಿ ಹೇಳಿಕೊಳ್ಳುವಂತಹ ಫಲಿತಾಂಶ ಸಿಕ್ಕಿಲ್ಲ ಬಿಹಾರದ ಮುಖ್ಯಮಂತ್ರಿ ನಿತೀಶ್‌ಕುಮಾರ್ ಹಾಗೂ ಆಂಧ್ರದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಏನಾದರೂ ಇಂಡಿಯಾ ಒಕ್ಕೂಟದ ಪರ ವಾಲಿದ್ದರೆ ಬಿಜೆಪಿ ಪರಿಸ್ಥಿತಿ ಅಯೋಮಯವಾಗಿರುತ್ತಿತ್ತು.

ಪ್ರಧಾನಿ ನರೇಂದ್ರ ಮೋದಿ ಹೊರತುಪಡಿಸಿ ಮತ್ತೋರ್ವ ಪ್ರಬಲ ನಾಯಕರ ಕೊರತೆ ಎದುರಿಸುತ್ತಿರುವ ಪಕ್ಷ ಸಂಪೂರ್ಣ ಮೋದಿಯವರ ಮೇಲೆ ಅವಲಂಬಿತವಾಗಿದೆ. ಕಾಶ್ಮೀರದಲ್ಲಿ 370ನೇ ವಿಧಿ ರದ್ದು, ತ್ರಿವಳಿ ತಲಾಖ್, ರಾಮಮಂದಿರ ನಿರ್ಮಾಣ, ಏಕರೂಪ ನಾಗರಿಕ ಸಂಹಿತೆ ಸೇರಿದಂತೆ ರೈಲು, ರಸ್ತೆ ಹೆದ್ದಾರಿಗಳ ಅಭಿವೃದ್ಧಿ ಮತ್ತು ಹತ್ತು ವರ್ಷಗಳ ಹಗರಣ ಮುಕ್ತ ಆಡಳಿತ ಇವೆಲ್ಲವೂ ಬಿಜೆಪಿ ಸಂಖ್ಯಾಬಲವನ್ನು ಹೆಚ್ಚಿಸುವಲ್ಲಿ ವಿಫಲವಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ.

ಕಳೆದ ಹತ್ತು ವರ್ಷಗಳಿಂದ ಪಕ್ಷ ಹಾಗೂ ಸರ್ಕಾರವನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಬರುತ್ತಿರುವ ಸ್ಥಾನಕ್ಕೆ ಪ್ರಬಲ ಉತ್ತರಾಧಿಕಾರಿಯ ಅವಶ್ಯಕತೆ ಇದ್ದು ಈಗಿನಿಂದಲೇ ಅಂತಹ ಸಂಘಟನಾ ಚತುರನ ಆಯ್ಕೆ ನಡೆಯಬೇಕಿದೆ. ನರೇಂದ್ರ ಮೋದಿಯವರ ಸ್ಥಾನವನ್ನು ತುಂಬಬಲ್ಲ ಮತ್ತೊಬ್ಬ ನಾಯಕ ಎಂದರೆ ಅದು ಯೋಗಿ ಆದಿತ್ಯನಾಥ್ ಎಂಬ ಅಭಿಪ್ರಾಯಗಳು ಸಾರ್ವತ್ರಿಕ ವಲಯದಲ್ಲಿ ಚರ್ಚಿತವಾಗುತ್ತಿದ್ದು ಪಕ್ಷದ ಮುಖಂಡರು ಈ ನಿಟ್ಟಿನಲ್ಲಿ ಗಮನಹರಿಸಬೇಕಿದೆ.

–ಹೆಚ್.ಆರ್.ಪ್ರಸಾದ್, ವಿವೇಕಾನಂದನಗರ, ಮೈಸೂರು.

■ ಬಿಎಸ್‌ಎನ್‌ಎಲ್‌ಗೆ ಕಾಯಕಲ್ಪ ನೀಡಲಿ

ಮಾನ್ಯರೆ,

ಸಾರ್ವಜನಿಕ ವಲಯದ ದೂರಸಂಪರ್ಕ ಸಂಸ್ಥೆಯಾದ ಬಿಎಸ್‌ಎನ್‌ಎಲ್‌ನ ಭವಿಷ್ಯದ ಸ್ಥಿತಿಗತಿಯ ಬಗ್ಗೆ ಸರಕಾರ ಚಿಂತನೆ ನಡೆಸಬೇಕಿದೆ. ಮಾರುಕಟ್ಟೆಯ ಸ್ಪರ್ಧೆ ಬಿಎಸ್‌ಎನ್‌ಎಲ್‌ಗೆ ದೊಡ್ಡ ಸಮಸ್ಯೆಯಾಗಿದ್ದು, ಈ ಬಗ್ಗೆ ಸರ್ಕಾರ ಹೆಚ್ಚಿನ ಆಸಕ್ತಿ ವಹಿಸಿ ಕ್ರಮ ಕೈಗೊಳ್ಳುವುದು ಅವಶ್ಯಕವಾಗಿದೆ.

ಪ್ರಸ್ತುತ ಬಿಎಸ್‌ಎನ್‌ಎಲ್ ಕಂಪನಿಯ ನಷ್ಟಕ್ಕೆ ಕಾರಣಗಳು ಹಲವಾರಿವೆ. ಕೇಂದ್ರ ಸರಕಾರ 5ಜಿ ತರಂಗಗಳ ಹರಾಜು ಪ್ರಕ್ರಿಯೆಯನ್ನು ಈಗಾಗಲೇ ಮಾಡಿ ಮುಗಿಸಿದ್ದರೂ, ಬಿಎಸ್‌ಎನ್‌ಎಲ್ ಇನ್ನೂ 4ಜಿಯನ್ನೇ ಹೊಂದಿಲ್ಲ! ಇದರಿಂದ ಬಿಎಸ್‌ಎನ್‌ಎಲ್ ಚಂದಾದಾರರ ಸಂಖ್ಯೆಯ ಬೆಳವಣಿಗೆ ತೀವ್ರ ಮಂದಗತಿಯಲ್ಲಿದೆ. ನಗರ ಹಾಗೂ ತುಂಬಾ ಕುಗ್ರಾಮ ಅನಿಸುವಂತಹ ಗ್ರಾಮೀಣ ಪ್ರದೇಶಗಳಲ್ಲಿ ಬಿಎಸ್‌ಎನ್‌ಎಲ್‌ನ ನೆಟ್‌ವರ್ಕ್ ಜಾಲ ತುಂಬಾ ಸಮರ್ಥವಾಗಿದ್ದು, ಈಗಲೂ ಕೂಡ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಧಿಕಾರಿ ಹಾಗೂ ನೌಕರ ವರ್ಗ ಸೇರಿದಂತೆ ಲಕ್ಷಾಂತರ ಚಂದಾದಾರರು ಬಿಎಸ್‌ಎನ್‌ಎಲ್ ಅನ್ನು ಆಶ್ರಯಿಸಿದ್ದಾರೆ. ಹೀಗೆ ಬಿಎಸ್‌ಎನ್‌ಎಲ್ ಹೆಚ್ಚು ಜನಸ್ನೇಹಿಯಾಗಿದ್ದರೂ ಮಾರುಕಟ್ಟೆಯ ತೀವ್ರ ಸ್ಪರ್ಧೆಯಿಂದ ಹಾಗೂ ಅದರ ದಕ್ಷ ನಿರ್ವಹಣೆಯ ಕೊರತೆಯಿಂದ ನಷ್ಟದತ್ತ ಸಾಗಿದೆ. ಕೇಂದ್ರಸರ್ಕಾರದಿಂದ ತುರ್ತು ನೆರವು ಇಲ್ಲದೇ ಬಿಎಸ್‌ಎನ್‌ಎಲ್ ನಿರ್ವಹಿಸುವುದು ಕಷ್ಟಸಾಧ್ಯವಾಗಿರುವ ಈ ಸಂದರ್ಭದಲ್ಲಿ ಕೇಂದ್ರಸರ್ಕಾರ ಯಾವುದೇ ಕಾರಣಕ್ಕೂ ಬಿಎಸ್‌ಎನ್‌ಎಲ್ ಅನ್ನು ಮುಚ್ಚಲು ಬಿಡದೇ ಬದಲಾಗಿ ಬಿಎಸ್‌ಎನ್‌ಎಲ್‌ಗೆ ಕಾಯಕಲ್ಪ ನೀಡಿ, ಬಿಎಸ್‌ಎನ್‌ಎಲ್ 4ಜಿ ಸೇವೆಯನ್ನು ದೇಶದಾದ್ಯಂತ ತುರ್ತಾಗಿ ಆರಂಭಿಸುವುದು ಅಗತ್ಯ ಹಾಗೂ ಅವಶ್ಯಕವಾಗಿದೆ. **–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.**



ಜಿ. ಎಲ್. ತ್ರಿಪುರಾಂತಕ
ಮೊ: 96866-77284

ಬೆರಗು

ಮೈಸೂರು ಆಕಾಶವಾಣಿ....... ಎಂದಿಗೂ ಮಾಸದ ಜನಧ್ವನಿ.....!



> “ ಇಂದಿಗೂ ಗ್ರಾಮೀಣ ಭಾಗದಲ್ಲಿ ಮೈಸೂರು ಆಕಾಶವಾಣಿಯ ಅಭಿಮಾನಿ ಶ್ರೋತೃಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ತಮ್ಮ ಬಿಡುವಿಲ್ಲದ ಕೆಲಸಗಳ ನಡುವೆ ರೇಡಿಯೋ ಆಲಿಸುವ ಹವ್ಯಾಸ ಹೊಂದಿದ್ದಾರೆ. ಅನೇಕ ಸಾಧಕ ಕೃಷಿಕರಿಗೆ ವೇದಿಕೆ ಕಲ್ಪಿಸಿ ಅವರಿಂದ ಅನೇಕ ಯುವ ಕೃಷಿಕರಿಗೆ ಪ್ರೇರಣಾದಾಯಕವಾದ ಕಾರ್ಯಕ್ರಮ ರೂಪಿಸಿ ರೈತಮಿತ್ರ ಆಗಿ ಮೈಸೂರು ಆಕಾಶವಾಣಿ ರೂಪುಗೊಂಡಿದೆ. ಸಂಗೀತ, ಸಾಹಿತ್ಯ, ಜನಪದ, ನಾಟಕ, ಕ್ರೀಡೆ, ವಿಜ್ಞಾನ, ಮಹಿಳೆ, ಮಕ್ಕಳ ಕುರಿತಾದ ಕಾರ್ಯಕ್ರಮಗಳು... ಹೀಗೆ ಒಂದೇ ಎರಡೇ, ಆಡು ಮುಟ್ಟದ ಸೊಪ್ಪಿಲ್ಲ, ಮೈಸೂರು ಆಕಾಶವಾಣಿ ಕಾರ್ಯಕ್ರಮ ರೂಪಿಸದ ಕ್ಷೇತ್ರಗಳಿಲ್ಲ ಎನ್ನಬಹುದು. ವಿವಿಧ ಕ್ಷೇತ್ರಗಳ ಸಾಧಕರಿಗೆ ಅವಕಾಶ ಕಲ್ಪಿಸಿ, ಅವರ ಯಶಸ್ಸಿಗೆ ಚಿಮ್ಮು ಹಲಗೆಯಾಗಿದೆ ಮೈಸೂರು ಆಕಾಶವಾಣಿ. ಸಾಂಸ್ಕೃತಿಕ ರಾಜಧಾನಿ ಎನಿಸಿಕೊಂಡಿರುವ ಅರಮನೆ ನಗರಿಯ ಪ್ರಮುಖ ಹಿರಿಮೆಗರಿಮೆಗಳಾದ ಮೈಸೂರು ಸಿಲ್ಕ್, ಮೈಸೂರು ಪಾಕು, ಮೈಸೂರು ಮಲ್ಲಿಗೆ, ಮೈಸೂರು ಪೇಟ, ಮೈಸೂರು ವಿಳ್ಯದೆಲೆ, ಮೈಸೂರು ಮಸಾಲೆ ದೋಸೆ, ಮೈಸೂರ್ ಸ್ಯಾಂಡಲ್ ಸೋಪ್‌ಗಳಂತೆ ಮೈಸೂರು ಆಕಾಶವಾಣಿಯೂ ಸಹ ಒಂದು.

ಮೈಸೂರು ಆಕಾಶವಾಣಿಗೆ ಅಮೋಘವಾದ ಇತಿಹಾಸವಿದೆ. ದೃಶ್ಯ ಮಾಧ್ಯಮಗಳ ಭರಾಟೆ ನಡುವೆ ಇಂದಿಗೂ ಶ್ರೋತೃಗಳ ಮೆಚ್ಚಿನ ಆಕಾಶವಾಣಿ ಎಂದರೆ ಅದು ಮೈಸೂರು ಆಕಾಶವಾಣಿ ಎನ್ನಬಹುದು. ವರ್ಷದಿಂದ ವರ್ಷಕ್ಕೆ ಶ್ರೋತೃ ಅಭಿಮಾನಿಗಳನ್ನು ವೃದ್ಧಿಸಿಕೊಳ್ಳುತ್ತಿರುವ ಹೆಗ್ಗಳಿಕೆ ಈ ಬಾನುಲಿ ಕೇಂದ್ರಕ್ಕೆ ಇದೆ. ಅದಕ್ಕೆ ಕಾರಣ ಕಾಲಕ್ಕೆ ತಕ್ಕ ಹಾಗೆ ವಿಭಿನ್ನ, ವಿನೂತನ, ವಿಶಿಷ್ಟ ಕಾರ್ಯಕ್ರಮಗಳನ್ನು ರೂಪಿಸುತ್ತಾ, ಕೇವಲ ಮನೆಗಳನ್ನು ಮುಟ್ಟುವ ಕೆಲಸ ಮಾಡದೆ, ಮನಮುಟ್ಟುವಂತಹ ಕಾರ್ಯಗಳನ್ನು ಮೈಸೂರು ಆಕಾಶವಾಣಿ ಮಾಡುತ್ತಿದೆ. ಎಫ್.ಎಂ.100.6ರಲ್ಲಿ ಬರುವ ಕಾರ್ಯಕ್ರಮಗಳನ್ನು ನಿರಂತರವಾಗಿ ಆಲಿಸಿದಲ್ಲಿ ವ್ಯಕ್ತಿತ್ವ ವಿಕಸನವೇ ಆಗಿಬಿಡುತ್ತದೆ. ದೇಶದ ಬೆನ್ನೆಲುಬಾದ ರೈತರಿಗೋಸ್ಕರ ರೂಪಿಸುವ ಕಾರ್ಯಕ್ರಮಗಳಿಂದ ಹಿಡಿದು ರಾಕೆಟ್ ಉಡಾಯಿಸುವ ವಿಜ್ಞಾನಿಗಳ ವರೆವಿಗೆ ವೈವಿಧ್ಯಮಯ, ಅರ್ಥಪೂರ್ಣ ಕಾರ್ಯಕ್ರಮಗಳಿಂದ ಎಲ್ಲರ ಮೆಚ್ಚುಗೆಯನ್ನು ಗಳಿಸಿದೆ. ಸಾಂಸ್ಕೃತಿಕ ರಾಜಧಾನಿ ಎನಿಸಿಕೊಂಡಿರುವ ಅರಮನೆ ನಗರಿಯ ಪ್ರಮುಖ ಹಿರಿಮೆ ಗರಿಮೆಗಳಾದ ಮೈಸೂರು ಸಿಲ್ಕ್, ಮೈಸೂರು ಪಾಕು, ಮೈಸೂರು ಮಲ್ಲಿಗೆ, ಮೈಸೂರು ಪೇಟ, ಮೈಸೂರು ವಿಳ್ಯದೆಲೆ, ಮೈಸೂರು ಮಸಾಲೆ ದೋಸೆ, ಮೈಸೂರ್ ಸ್ಯಾಂಡಲ್ ಸೋಪ್‌ಗಳಂತೆ ಮೈಸೂರು ಆಕಾಶವಾಣಿಯೂ ಸಹ ಒಂದು. ಇದರ ವ್ಯಾಪ್ತಿ ಇಂದು ವಿಶ್ವವ್ಯಾಪಿ ಎನ್ನಬಹುದು. ಏಕೆಂದರೆ ಇಂದಿನ ಆಧುನಿಕ ತಂತ್ರಜ್ಞಾನ ವ್ಯವಸ್ಥೆಯಿಂದ ಪ್ರಪಂಚದ ಯಾವುದೇ ಮೂಲೆಯಲ್ಲಿ ಕುಳಿತು ಆಲಿಸುವ ಅವಕಾಶ ಇರುವ ಕಾರಣ ವಿದೇಶದಲ್ಲಿರುವ ಅನಿವಾಸಿ ಭಾರತೀಯರು ಸಹ ಮೈಸೂರು ಆಕಾಶವಾಣಿಯ ಕಾರ್ಯಕ್ರಮಗಳನ್ನು ಆಲಿಸುತ್ತಾ ಮೆಚ್ಚುಗೆ ಸೂಚಿಸುತ್ತಿದ್ದಾರೆ. ಅನೇಕ ಮೊದಲುಗಳ ದಾಖಲೆ ಮೈಸೂರು ಆಕಾಶವಾಣಿಗಿರುವುದು ಹೆಮ್ಮೆಯ ಸಂಗತಿ.

20ನೇ ಶತಮಾನದಲ್ಲಿ ರೇಡಿಯೋ ಅನೇಕ ಜನರ ಕೌತುಕ. ಮನರಂಜನೆಯ ಮಾಧ್ಯಮ ಕೊರತೆ ಇದ್ದ ಕಾಲಘಟ್ಟದಲ್ಲಿ ರೇಡಿಯೋ ಬಹುಪಾಲು ಜನರ ಆಪ್ತಮಿತ್ರನಾಗಿದ್ದ. ಈ ರೇಡಿಯೋ ಉಗಮದ ಕುರಿತು ತಿಳಿಯುವುದಾದರೆ, ಇಟಲಿ ದೇಶದ ಎಲೆಕ್ಟ್ರಿಕಲ್ ಇಂಜಿನಿಯರ್ ಆಗಿದ್ದ ಗುಲ್ಮಿಲ್ಮೋ ಮಾರ್ಕೋನಿ ಅವರು 1895ರಲ್ಲಿ ವೈರ್‌ಲೆಸ್ ಟೆಲಿಗ್ರಫಿ ಎಂದು ಕರೆಯಲ್ಪಡುವ ರೇಡಿಯೋವನ್ನು ಆವಿಷ್ಕರಿಸುತ್ತಾರೆ. 1901ರಲ್ಲಿ ರೇಡಿಯೋ ಕೇಂದ್ರ ಪ್ರಾರಂಭಿಸುತ್ತಾರೆ. ಅದಕ್ಕಾಗಿ ಅವರಿಗೆ 1909ರಲ್ಲಿ ಭೌತಶಾಸ್ತ್ರ ವಿಭಾಗದ ನೊಬೆಲ್ ಪುರಸ್ಕಾರ ಲಭಿಸುತ್ತದೆ. ಭಾರತದಲ್ಲಿ ಪ್ರಥಮ ಬಾರಿಗೆ 1923ರಲ್ಲಿ 'ಬಾಂಬೆ ರೇಡಿಯೋ ಕ್ಲಬ್' ಪ್ರಾರಂಭವಾಗುತ್ತದೆ. ಅದಾದ ಐದು ತಿಂಗಳ ನಂತರ 'ಕಲ್ಕತ್ತ ರೇಡಿಯೋ ಕ್ಲಬ್' ಪ್ರಾರಂಭಗೊಳ್ಳುತ್ತದೆ.

ಮೈಸೂರಿನಲ್ಲಿ 1935ನೇ ಇಸವಿಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ಖಾಸಗಿ ರೇಡಿಯೋ ಕೇಂದ್ರ ಮೊದಲ ಬಾರಿಗೆ ಪ್ರಾರಂಭವಾಗುತ್ತದೆ. ಕರ್ನಾಟಕದ ಮೊದಲ ಬಾನುಲಿ ಕೇಂದ್ರ ಎಂಬ ಹೆಗ್ಗಳಿಕೆ ಈ ಕೇಂದ್ರಕ್ಕೆ ಇದೆ. ಮಹಾರಾಜ ಕಾಲೇಜಿನಲ್ಲಿ ಮನಃಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಡಾ.ಎಂ.ವಿ.ಗೋಪಾಲಸ್ವಾಮಿ ಅವರು ತಮ್ಮ ಮನೆಯಲ್ಲಿ ಮೊದಲ ಬಾರಿಗೆ ರೇಡಿಯೋ ಕೇಂದ್ರವನ್ನು ಸ್ಥಾಪಿಸುತ್ತಾರೆ. ಭಾರತದ ಮೊತ್ತ ಮೊದಲ ಖಾಸಗಿ ಬಾನುಲಿ ಕೇಂದ್ರ ಎಂಬ ಹಿರಿಮೆ ಇರುವ ಈ ಕೇಂದ್ರದಿಂದ ನ್ಯಾರೋಕ್ಯಾಸ್ಟಿಂಗ್ ಪ್ರಯೋಗವಾಗುತ್ತದೆ. ಶ್ರೀಮತಿ ಕಮಲಾ ಗೋಪಾಲಸ್ವಾಮಿಯವರೇ ಉದ್ಘೋಷಕರಾಗಿರುತ್ತಾರೆ. ಶ್ರೀ ವಾಸುದೇವಚಾರ್ಯರ ಗಾಯನ ಮೊದಲ ಸಂಗೀತ ಕಾರ್ಯಕ್ರಮವಾಗಿರುತ್ತದೆ. 1939ರಲ್ಲಿ ಅಂದಿನ ಮೈಸೂರಿನ ದಸರಾ ವಸ್ತುಪ್ರದರ್ಶನ ಕಟ್ಟಡವಾಗಿದ್ದ ಇಂದಿನ ಮೆಡಿಕಲ್ ಕಾಲೇಜು ಕಟ್ಟಡದ ಮೊದಲ ಮಹಡಿಗೆ ಸ್ಥಳಾಂತರಗೊಳ್ಳುತ್ತದೆ. ಆಗ ಮೈಸೂರು ನಗರಪಾಲಿಕೆ ಆಡಳಿತ ವಹಿಸಿಕೊಳ್ಳುತ್ತದೆ. 1942 ಜನವರಿ 1ರಿಂದ ಮೈಸೂರು ಸಂಸ್ಥಾನದ ಸರ್ಕಾರ ಆಡಳಿತ ವಹಿಸಿಕೊಳ್ಳುತ್ತದೆ. 1943ರಲ್ಲಿ ಸಾಹಿತಿಗಳು ಹಾಗೂ ಪ್ರಾಧ್ಯಾಪಕರೂ ಆಗಿದ್ದ ಪ್ರೊ.ನಾ.ಕಸ್ತೂರಿ ಅವರು ಮುಖ್ಯಾಧಿಕಾರಿಯಾಗಿ ನೇಮಕಗೊಳ್ಳುತ್ತಾರೆ. ಅವರ ಅಧಿಕಾರವಧಿಯಲ್ಲಿ ವಿನೂತನ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ಇದೇ ಸಂದರ್ಭದಲ್ಲಿ ರೇಡಿಯೋ ಕೇಂದ್ರಕ್ಕೆ 'ಆಕಾಶವಾಣಿ' ಎಂಬ ನಾಮಕರಣ ಮಾಡಲಾಗುತ್ತದೆ. ಭಾರತ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ನಂತರ ಭಾರತದ ಎಲ್ಲಾ ಆಕಾಶವಾಣಿ ಕೇಂದ್ರಗಳು ಇದೇ ಹೆಸರನ್ನು ಬಳಸಿದ್ದು ವಿಶೇಷ. ಬಾನುಲಿ ಕೇಂದ್ರಕ್ಕೆ ಆಕಾಶವಾಣಿ ಎಂಬ ಹೆಸರನ್ನು ಸೂಚಿಸಿದ ಕೀರ್ತಿ ಮೈಸೂರು ಬಾನುಲಿ ಕೇಂದ್ರಕ್ಕೆ ಇದೆ.

ಪ್ರೊ.ನಾ.ಕಸ್ತೂರಿ ಅವರ ನಂತರ ಪ್ರೊ.ಎ.ಎನ್.ಮೂರ್ತಿರಾಯರು ನಿರ್ದೇಶಕರಾಗುತ್ತಾರೆ. 1944ರ ಫೆಬ್ರವರಿ ತಿಂಗಳಿನಲ್ಲಿ ಮೈಸೂರಿನ ಯಾದವಗಿರಿಯಲ್ಲಿನ ಸ್ವಂತ ಕಟ್ಟಡಕ್ಕೆ ಸ್ಥಳಾಂತರಗೊಳ್ಳುತ್ತದೆ. ಎಷ್ಟೆಲ್ಲಾ ಉತ್ತಮ ಬೆಳವಣಿಗೆಗಳ ನಂತರ 'ಮೈಸೂರು ಆಕಾಶವಾಣಿ' ಕೆಲವು ಅಡೆತಡೆಗಳನ್ನು ಸಹ ಅನುಭವಿಸುತ್ತದೆ. 1950ರಲ್ಲಿ ಬೆಂಗಳೂರು ನಗರ ಕರ್ನಾಟಕದ ರಾಜಧಾನಿಯಾದ ಸಂದರ್ಭದಲ್ಲಿ ಅಲ್ಲಿ ರೇಡಿಯೋ ಕೇಂದ್ರವಿರಬೇಕು ಎಂಬ ಅಭಿಪ್ರಾಯ ವ್ಯಕ್ತವಾದ ಹಿನ್ನೆಲೆಯಲ್ಲಿ ಮೈಸೂರಿನ ಬಾನುಲಿ ಕೇಂದ್ರವನ್ನು ಬೆಂಗಳೂರಿಗೆ ಸ್ಥಳಾಂತರಿಸುವ ಯೋಜನೆ ಸಿದ್ಧವಾಗುತ್ತದೆ. 1955ರಲ್ಲಿ ಬೆಂಗಳೂರು ನಿಲಯದಿಂದ ಮೈಸೂರು ಆಕಾಶವಾಣಿ ಕಾರ್ಯಕ್ರಮಗಳ ಪ್ರಸಾರ ಮುಂದುವರಿಯುತ್ತದೆ. ಮತ್ತೆ ಮೈಸೂರಿಗರು ಸಂತೋಷಪಡುವ ಸಂಗತಿ ಜರುಗಿದ್ದು 1971ರ ನವೆಂಬರ್ 14ರಂದು. ಅಂದು ಮೈಸೂರು ಆಕಾಶವಾಣಿ ಮೈಸೂರಿನಲ್ಲಿ ಮತ್ತೆ ಉದಯವಾಗುತ್ತದೆ. ಇಡೀ ದೇಶದಲ್ಲಿ 400ಕ್ಕೂ ಹೆಚ್ಚು ಬಾನುಲಿ ಕೇಂದ್ರಗಳು ಇಂದು ಕಾರ್ಯನಿರ್ವಹಿಸುತ್ತಿದ್ದು, ಮೈಸೂರು ಆಕಾಶವಾಣಿ ಪ್ರಾರಂಭವಾದ ಕಾಲದಿಂದ ಇಂದಿನವರೆವಿಗೂ ಕಾರ್ಯಕ್ರಮಗಳ ನಿರ್ಮಾಣ ಹಾಗೂ ಪ್ರಸಾರದಲ್ಲಿ ಗುಣಮಟ್ಟ ಹಾಗೂ ವೈವಿಧ್ಯತೆ ಕಾಪಾಡಿಕೊಂಡ ಕಾರಣ ಒಂದು ಘನತೆ ಹೊಂದಿದೆ.

ಮೈಸೂರು ಆಕಾಶವಾಣಿಯಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳ ಹೆಸರುಗಳೇ ವಿಶಿಷ್ಟವಾಗಿವೆ. ಬಹುತೇಕ ಶ್ರೋತೃಗಳಿಗೆ ಕಾರ್ಯಕ್ರಮಗಳ ಹೆಸರುಗಳು ಬಾಯಿಪಾಠವಾಗಿಬಿಟ್ಟಿವೆ. ಬೆಳಗ್ಗೆ 5.55 ರಿಂದ ರಾತ್ರಿ 11.05ರವರೆಗೆ ನಿರಂತರವಾಗಿ ಕಾರ್ಯಕ್ರಮಗಳು ಪ್ರಸಾರವಾಗುವ ಮೂಲಕ ಅಬಾಲವೃದ್ಧರಾಗಿ ಎಲ್ಲರ ಮನಸೂರೆಗೊಳ್ಳುತ್ತಿದೆ. ಬಹುಕಾಲದ ಹಿಂದೆ ಸೀಮಿತ ಅವಧಿಗೆ ಮಾತ್ರ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದವು. ಈಗ ಜನರು ಬೆಳಗ್ಗೆ ಏಳುವ ಸಮಯದಿಂದ ಮಲಗುವ ಸಮಯದವರೆವಿಗೆ ಎಲ್ಲಾ ವಯೋಮಾನದವರಿಗೆ ಇಷ್ಟವಾಗುವಂತಹ ಒಂದಿಲ್ಲೊಂದು ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ಕೆಲವು ಖಾಸಗಿ ಎಫ್.ಎಂ. ಕೇಂದ್ರಗಳು ಮೈಸೂರಿನಲ್ಲಿ ಕಾರ್ಯನಿರ್ವಹಿಸುತ್ತಿವೆ, ಅವುಗಳ ಸ್ಪರ್ಧೆಯ ನಡುವೆ ಸದಭಿರುಚಿಯ ಕಾರ್ಯಕ್ರಮಗಳನ್ನು ರೂಪಿಸಿ, ಪ್ರಸಾರ ಮಾಡುತ್ತಾ ತನ್ನದೇ ಆದ ಫ್ಯಾನ್‌ಬೇಸ್ ಇರುವ ಎಫ್.ಎಂ. ಕೇಂದ್ರ ಮೈಸೂರು ಆಕಾಶವಾಣಿ ಕೇಂದ್ರ. ದಿನಕ್ಕೆ ನಾಲ್ಕು ಬಾರಿ ಪ್ರಸಾರವಾಗುವ ವಾರ್ತೆಗಳು ಹಾಗೂ ಪ್ರದೇಶ ಸಮಾಚಾರ ವಸ್ತುನಿಷ್ಠವಾದ ಸುದ್ದಿಗಳನ್ನು ಬಿತ್ತರ ಮಾಡುವ ಮೂಲಕ ಜನಮಾನಸದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿವೆ. ಮೈಸೂರು ಬಾನುಲಿ ಕೇಂದ್ರದ ಪ್ರಸಾರ ಏಕಮುಖವಾಗಿರದೆ ಶ್ರೋತೃಗಳೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದೆ ಪತ್ರ ವ್ಯವಹಾರ, ದೂರವಾಣಿ ಮುಖಾಂತರ ಸಂವಹನ ಹಾಗೂ ಸಂದರ್ಶನಗಳ ಮೂಲಕ ಜನಧ್ವನಿಯಾಗಿ ಹೊರಹೊಮ್ಮಿದೆ.

ಮೈಸೂರು ಆಕಾಶವಾಣಿಯ ಕಾರ್ಯಕ್ರಮಗಳು ಎಷ್ಟು ಅರ್ಥಪೂರ್ಣವೋ ಅಷ್ಟೇ ಅರ್ಥಪೂರ್ಣವಾಗಿವೆ ಕಾರ್ಯಕ್ರಮಗಳಿಗೆ ನೀಡಿರುವ ಶೀರ್ಷಿಕೆಗಳು. ಕಾರ್ಯಕ್ರಮಗಳ ಪಟ್ಟಿ ನೋಡುತ್ತಾ ಹೋದರೆ ಓದುಗರಿಗೆ ಕೇಳುಗರಷ್ಟೆ ಬೆರಗು ಉಂಟಾಗುತ್ತದೆ. ನಿತ್ಯ ನಿಗದಿತ ಕಾರ್ಯಕ್ರಮಗಳ ಜೊತೆಗೆ ವಾರಾಂತ್ಯದಲ್ಲಿ ವಿಶೇಷ ಕಾರ್ಯಕ್ರಮಗಳು ಪ್ರಸಾರವಾಗುವುದು ಏಕತಾನತೆಯನ್ನು ಮೂಡಿಸದೆ, ಕೇಳುಗರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಚಿಂತನ ಕಾರ್ಯಕ್ರಮ, ಗೀತಾರಾಧನ, ಗಾಂಧಿ ಸ್ಮೃತಿ, ಸಿನೆಮಾಯಾನ, ಅರಿವಿನ ಶಿಖರ, ರೈತರಿಗೆ ಸಲಹೆ, ಕನ್ನಡ ಚಿತ್ರಗೀತೆಗಳು, ನಮ್ಮ ಆರೋಗ್ಯ ಕಾರ್ಯಕ್ರಮ, ಕೇಳಿ ಗಿಳಿಗಳೆ, ಮಕ್ಕಳ ಮಂಟಪ, ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ದೇವರನಾಮ, ಜನಪದ ಸಂಗೀತ, ಭಾವಗೀತೆಗಳು, ಕನ್ನಡ ಚಲನಚಿತ್ರ, ಧ್ವನಿ ವಾಹಿನಿ, ಸಿರಗನ್ನಡಂ ಗೆಲ್ಗೆ, ಯಕ್ಷಗಾನ, ಹಾದಿಯಲ್ಲಿ ಕಂಡ ಮುಖ, ರಂಗಗೀತೆಗಳು, ಸವಿನೆನಪು, ಕರ್ನಾಟಕ ಶಾಸ್ತ್ರೀಯ ಸಂಗೀತ, ಹಳ್ಳಿಹಾಡು, ನಾಟಕ, ನೆನೆಪಿನಂಗಳ, ಕೃಷಿರಂಗ, ಯುವವಾಣಿ, ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಅಂಚೆ ಅಂಕಣ, ಮಹಿಳಾ ರಂಗ, ಹಿಂದಿಪಾಠ, ಕನ್ನಡದಲ್ಲಿ ಭಾಷಣ, ಸಂವಹನ, ಚಟ್–ಪಟ್ ಚುರುಮುರಿ, ವಿಜ್ಞಾನ ಭಾರತಿ, ಹಲೋ ಯುವರಾಣಿ, ವೃತ್ತಿ ಮಾರ್ಗದರ್ಶನ, ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತ, ಕ್ಷಿತಿಜ ಲಿಟರರಿ ಗುರು, ಬಣ್ಣದ ಬಾನಾಡಿಗಳು, ಕಾದಂಬರಿ ವಿಹಾರ, ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳು, ಮನೋ ಚಿಂತನ, ತತ್ವ ಸಂಚಾರ, ವನಿತಾ ವಿಹಾರ, ಕ್ರೀಡಾ ಲೋಕ, ಮೈಸೂರು ಜಂಕ್ಷನ್ ..... ಹೀಗೆ ಪಟ್ಟಿ ಮಾಡುತ್ತಲೇ ಹೋಗಬಹುದು. ಒಂದೊಂದು ಕಾರ್ಯಕ್ರಮದ್ದು ಒಂದೊಂದು ವೈಶಿಷ್ಟ್ಯತೆ. ಕೇಳುಗರಿಗೆ ಎಂದಿಗೂ ಬೋರ್ ಆಗದಂತ ಕಾರ್ಯಕ್ರಮಗಳು ನಿರಂತರವಾಗಿ ಪ್ರಸಾರವಾಗುತ್ತಿವೆ.

ಇಂದಿಗೂ ಗ್ರಾಮೀಣ ಭಾಗದಲ್ಲಿ ಮೈಸೂರು ಆಕಾಶವಾಣಿಯ ಅಭಿಮಾನಿ ಶ್ರೋತೃಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ತಮ್ಮ ಬಿಡುವಿಲ್ಲದ ಕೆಲಸಗಳ ನಡುವೆ ರೇಡಿಯೋ ಆಲಿಸುವ ಹವ್ಯಾಸ ಹೊಂದಿದ್ದಾರೆ. ಅನೇಕ ಸಾಧಕ ಕೃಷಿಕರಿಗೆ ವೇದಿಕೆ ಕಲ್ಪಿಸಿ ಅವರಿಂದ ಅನೇಕ ಯುವ ಕೃಷಿಕರಿಗೆ ಪ್ರೇರಣಾದಾಯಕವಾದ ಕಾರ್ಯಕ್ರಮ ರೂಪಿಸಿ ರೈತಮಿತ್ರ ಆಗಿ ಮೈಸೂರು ಆಕಾಶವಾಣಿ ರೂಪುಗೊಂಡಿದೆ. ಸಂಗೀತ, ಸಾಹಿತ್ಯ, ಜನಪದ, ನಾಟಕ, ಕ್ರೀಡೆ, ವಿಜ್ಞಾನ, ಮಹಿಳೆ, ಮಕ್ಕಳ ಕುರಿತಾದ ಕಾರ್ಯಕ್ರಮಗಳು... ಹೀಗೆ ಒಂದೇ ಎರಡೇ, ಆಡು ಮುಟ್ಟದ ಸೊಪ್ಪಿಲ್ಲ, ಮೈಸೂರು ಆಕಾಶವಾಣಿ ಕಾರ್ಯಕ್ರಮ ರೂಪಿಸದ ಕ್ಷೇತ್ರಗಳಿಲ್ಲ ಎನ್ನಬಹುದು. ಶುದ್ಧವಾದ ಭಾಷೆ ಎಲ್ಲರಿಗೂ ಒಂದು ಪಾಠದಂತಿದೆ. ಯಾವುದೇ ಭಾವಾತಿರೇಕವಿಲ್ಲದ ಕರ್ಣಾನಂದವಾಗುವ ರೀತಿಯಲ್ಲಿ ಉದ್ಘೋಷಕರು ಹಾಗೂ ಸಂದರ್ಶಕರು ಮಾತನಾಡುವುದು ಆಪ್ಯಾಯಮಾನವಾಗಿದೆ.

ನಾಡಹಬ್ಬ ದಸರಾ ಜಂಬೂಸವಾರಿ ವೀಕ್ಷಕ ವಿವರಣೆಯನ್ನು ಕಣ್ಣಿಗೆ ಕಟ್ಟುವಂತೆ ವಿವರಣೆ ನೀಡುತ್ತಾ, ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ ಅಷ್ಟೇ ಅಲ್ಲದೆ ಕೇಂದ್ರ ಸರ್ಕಾರದ ಕೆಲವು ಕಾರ್ಯಕ್ರಮಗಳ ನೇರ ಪ್ರಸಾರ ಮಾಡುತ್ತಿರುವುದು ವಿಶೇಷ. ಅತಿವೃಷ್ಟಿಯಾದಾಗ ಉಂಟಾಗುವ ನದಿಗಳ ಪ್ರವಾಹ ಸಂದರ್ಭದಲ್ಲಿ ಸಾರ್ವಜನಿಕರನ್ನು ಎಚ್ಚರಿಸುವಂತಹ ಕಾರ್ಯಕ್ರಮಗಳು, ಕೊರೊನಾ ವೈರಸ್ ವ್ಯಾಪಿಸಿದ್ದಾಗ ಲಾಕ್ಡೌನ್ ಉಂಟಾಗಿದ್ದ ಸಂದರ್ಭದಲ್ಲಿ ಅನೇಕ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳು ಕಾರ್ಯನಿರ್ವಹಿಸಲಿಲ್ಲ. ಆದರೆ ಮೈಸೂರು ಆಕಾಶವಾಣಿ ಮಾತ್ರ ನಿರಂತರವಾಗಿ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಾ, ಜನರು ಭಯಭೀತರಾಗಿದ್ದ ಸಂದರ್ಭದಲ್ಲಿ, ಮನೆಯಿಂದ ಹೊರಬರಲಾಗದೆ ಪರಿತಪಿಸುತ್ತಿದ್ದ ಸಂದರ್ಭದಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳ ಮೂಲಕ ಜನರಿಗೆ ಧೈರ್ಯ ತುಂಬುವ ಭರವಸೆಯ ವಾಣಿ ಇದಾಗಿತ್ತು. ಲಾಕ್ಡೌನ್ ಕಥೆಗಳ ಸರಣಿ ಪ್ರಸಾರವಾಗಿ, 75 ಕಥೆಗಳ ಒಂದು ಪುಸ್ತಕ ರೂಪದಲ್ಲಿ ಹೊರತಂದಿರುವುದು ಮತ್ತೊಂದು ವಿಶೇಷ ಪ್ರಯತ್ನ ಎನ್ನಬಹುದು.

ಇದು ಮೈಸೂರು ಆಕಾಶವಾಣಿ, ಸರ್ವರ ಮನಸೂರೆಗೊಳ್ಳುವ ಮಿತ್ರವಾಣಿ. ಗೃಹಿಣಿಯರ ಸಂಗಾತಿ, ಹಿರಿಯ ನಾಗರಿಕರಿಗೆ ಬೇಸರ ಮೂಡಿಸದ ಬೆಸ್ಟ್‌ಫ್ರೆಂಡ್, ವಿವಿಧ ಕ್ಷೇತ್ರಗಳ ಸಾಧಕರಿಗೆ ವೇದಿಕೆ ಕಲ್ಪಿಸುವ ಅವರ ಯಶಸ್ಸಿನ ಚಿಮ್ಮುಹಲಗೆ ಈ ಬಾನುಲಿ ಕೇಂದ್ರ. 2010ರಲ್ಲಿ 75 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಅಮೃತ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿರುವ ಮೈಸೂರು ಆಕಾಶವಾಣಿ ಕೇಂದ್ರ ಶತಮಾನೋತ್ಸವದತ್ತ ಮುನ್ನಡೆಯುತ್ತಿದೆ. ಅಪೂರ್ವ ಕಾರ್ಯಕ್ರಮಗಳ ಮುಖಾಂತರ ಶ್ರೋತೃಗಳ ಮನಮುಟ್ಟುವ ಕಾರ್ಯಕ್ರಮ ರೂಪಿಸುತ್ತಿರುವ ದಕ್ಷ ಅಧಿಕಾರಿಗಳಾದ ಉಪನಿರ್ದೇಶಕ ಎಸ್.ಎಸ್.ಉಮೇಶ್, ಸಹಾಯಕ ನಿರ್ದೇಶಕ ಅಬ್ದುಲ್ ರಶೀದ್ ಹಾಗೂ ಸಮರ್ಥ ಸಿಬ್ಬಂದಿ ವರ್ಗದವರ ಪರಿಶ್ರಮಕ್ಕೆ ಅಭಿನಂದನೆಗಳನ್ನು ಸಲ್ಲಿಸೋಣ. ಮೈಸೂರು ಮಲ್ಲಿಗೆಯ ಪರಿಮಳದಂತೆ ಎಲ್ಲೆಡೆ ಮತ್ತಷ್ಟು ಪಸರಿಸಿ ಮೈಸೂರಿನ ಕೀರ್ತಿಯನ್ನು ಇನ್ನಷ್ಟು ಬೆಳಗುವಂತಹ ಕಾರ್ಯಕ್ರಮಗಳು ಪ್ರಸಾರವಾಗಲಿ ಎಂದು ಆಶಿಸೋಣ.

ಭರತ್ ಮಂಜೇಗೌಡ ಸಮಾಜಕ್ಕೆ ಮಾದರಿ ವ್ಯಕ್ತಿಯಾಗಲಿ: ಎಂಎಲ್‌ಸಿ ಮಂಜೇಗೌಡ





ಸಿ.ಎನ್.ಮಂಜೇಗೌಡರ ಪುತ್ರ ಭರತ್ ಮಂಜೇಗೌಡರ 36ನೇ ವರುಷದ ಹುಟ್ಟುಹಬ್ಬವನ್ನು ಶ್ರೀರಾಂಪುರದ ಅವರ ನಿವಾಸದಲ್ಲಿ ಅಭಿಮಾನಿಗಳು ಆಚರಿಸಿದರು.

ಮೈಸೂರು,ಜು.21–ಭರತ್ ಮಂಜೇಗೌಡರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದು, ಈ ಭವ್ಯ ಭಾರತ ದೇಶಕ್ಕೆ ಉತ್ತಮ ಪ್ರಜೆಗಳನ್ನು ನೀಡುವ ಮುಖಾಂತರ ಸಮಾಜಕ್ಕೆ ಮಾದರಿ ವ್ಯಕ್ತಿಯಾಗಿ ಬಾಳಲಿ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.

ಸಿ.ಎನ್.ಮಂಜೇಗೌಡರ ಪುತ್ರ ಭರತ್ ಮಂಜೇಗೌಡರ 36ನೇ ವರುಷದ ಹುಟ್ಟುಹಬ್ಬವನ್ನು ಶ್ರೀರಾಂಪುರದ ಅವರ ನಿವಾಸದಲ್ಲಿ ಕೇಕ್ ಕತ್ತರಿಸಿ ಮಗನಿಗೆ ಆಶೀರ್ವದಿಸಿ ಮಾತನಾಡಿದ ಅವರು, ಇಂದು ಪ್ರಪಂಚದಲ್ಲಿ ಜ್ಞಾನದ ಮುಂದೆ ಯಾವ ಶಕ್ತಿಯೂ ಇಲ್ಲದಾಗಿದ್ದು ಶಿಕ್ಷಣದಿಂದಲೇ ದೇಶ ಅಭಿವೃದ್ಧಿಯಾಗಲು ಸಾಧ್ಯವಾಗಿರುವುದರಿಂದ ಪ್ರಪಂಚದಾದ್ಯಂತ ಭಾರತದ ಯುವಕರು ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಭರತ್ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾನೆ. ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಜಯಪುರದ ಬಳಿ ಸಿ.ಎನ್.ಎಂ. ಶಿಕ್ಷಣ ಸಂಸ್ಥೆಯನ್ನು ನಡೆಸುತ್ತಿದ್ದಾನೆ. ಅವನಿಗೆ ಚಾಮುಂಡೇಶ್ವರಿ ತಾಯಿ ಒಳ್ಳೆಯದನ್ನು ಮಾಡಲಿ. ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಮಾಜಿ ಸಚಿವ ಸಾ.ರಾ.ಮಹೇಶ್ ಅವರ ಆಶೀರ್ವಾದದಿಂದ ಮುಂದೆ ರಾಜಕಾರಣಕ್ಕೆ ಬಂದರೆ ಬರಬಹುದು ಎಂದರು.

ಭರತ್ ಮಂಜೇಗೌಡ ಮಾತನಾಡಿ, ಸ್ನೇಹಿತರು, ಅಭಿಮಾನಿಗಳು ನನ್ನ ಹುಟ್ಟುಹಬ್ಬವನ್ನು ಆಚರಿಸುತ್ತಿದ್ದಾರೆ. ಅವರ ಪ್ರೀತಿಗೆ ನಾನು ಚಿರಋಣಿಯಾಗಿರುತ್ತೇನೆ. ರಾಜ್ಯದಲ್ಲಿ ಉತ್ತಮ ಮಳೆಯಾಗುತ್ತಿದ್ದು ಅಣೆಕಟ್ಟೆಗಳೆಲ್ಲಾ ತುಂಬಲಿ. ಚಾಮುಂಡೇಶ್ವರಿ ತಾಯಿ ಎಲ್ಲರಿಗೂ ಒಳ್ಳೆಯದು ಮಾಡಲಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಅಭಿಮಾನಿಗಳು ಭರತ್ ಮಂಜೇಗೌಡರಿಗೆ ಭಾರಿ ಗಾತ್ರದ ಗುಲಾಬಿ ಹಾರ, ಸೇಬಿನ ಹಾರ ಹಾಕಿ, ಸಿಹಿ ಹಂಚಿ ಸಂಭ್ರಮಿಸಿದರು. ಜೆಡಿಎಸ್ ಹಿಂದುಳಿದ ವರ್ಗದ ಜಿಲ್ಲಾ ಅಧ್ಯಕ್ಷ ಅಪೆಕ್ಸ್ ಶ್ರೀನಿವಾಸ್, ಶ್ರೀರಾಂಪುರ ಗ್ರಾ.ಪಂ. ಮಾಜಿ ಅಧ್ಯಕ್ಷರಾದ ರಮೇಶ್, ಟ್ಯೂಬ್ ಮಹದೇವ, ಪೈಲ್ವಾನ ದಿನೇಶ್‌ಗೌಡ, ರಾಘವೇಂದ್ರ, ಸುರೇಶ್ ಧರ್ಮ, ಸುರೇಶ್, ಜಗದೀಶ್, ಸತೀಶ್, ಪಾರ್ಥಸಾರಥಿ, ಮಹೇಶ್, ಮಣಿ, ಪ್ರಕಾಶ್, ಹರೀಶ್, ಸಂದೀಪ್‌ಕುಮಾರ್, ಪ್ರಜ್ವಲ್‌ಶೆಟ್ಟಿ, ಫಾಸ್ಟರ್ ಜೋಸೆಫ್ ಸೇರಿದಂತೆ ಇನ್ನಿತರರು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ದೇಶ - ವಿದೇಶ

ತಿರುಮಲದಲ್ಲಿ ನೌಕರರಿಗೆ ವಸ್ತ್ರಸಂಹಿತೆ ಜಾರಿ



ತಿರುಮಲ: ತಿರುಮಲದಲ್ಲಿನ ನೌಕರರಿಗೆ ಟಿಟಿಡಿ ವಸ್ತ್ರಸಂಹಿತೆ ಜಾರಿ ಮಾಡಿದೆ. ಭಕ್ತರ ಸೇವೆಗಾಗಿ ಟಿಟಿಡಿ ನೇಮಿಸಿದ ನೌಕರರು ಭಾಷೆ ಮತ್ತು ಉಡುಗೆ ಬಗ್ಗೆ ವಿಶೇಷ ಗಮನಹರಿಸುವಂತೆ ಟಿಟಿಡಿ ಸೂಚನೆ ನೀಡಿದೆ. ಇನ್ನು ಮುಂದೆ ಯಾವುದೇ ಉದ್ಯೋಗಿಯು ಇನ್ನೊಬ್ಬ ಉದ್ಯೋಗಿ ಅಥವಾ ಭಕ್ತನೊಂದಿಗೆ ಮಾತನಾಡುವ ಮೊದಲು "ಗೋವಿಂದಾ ಅಥವಾ ಓಂ ನಮೋ ವೆಂಕಟೇಶಾಯ" ಎಂದು ಹೇಳಿದ ನಂತರವೇ ತಮ್ಮ ಸಂಭಾಷಣೆಯನ್ನು ಪ್ರಾರಂಭಿಸುವಂತೆ ಟಿಟಿಡಿ ತನ್ನ ಉದ್ಯೋಗಿಗಳಿಗೆ ಖಡಕ್ ಸೂಚನೆ ನೀಡಿದೆ. ತಿರುಪತಿ ದೇವಸ್ಥಾನದ ನೌಕರರು ಶನಿವಾರದಂದು ಬಿಳಿ ಪಂಚೆ ಅಥವಾ ಪ್ಯಾಂಟ್, ಬಿಳಿ ಶರ್ಟ್ ಮತ್ತು ಹಣೆಗೆ ಕುಂಕುಮ ಮತ್ತು ವಿಭೂತಿ ಧರಿಸಿ ಕೆಲಸಕ್ಕೆ ಬರಲು ಸೂಚಿಸಲಾಗಿದೆ. ತಿರುಪತಿ ದೇವಸ್ಥಾನದ ಮಹಿಳಾ ಉದ್ಯೋಗಿಗಳು ಬಿಳಿ ಚೂಡಿದಾರ್ ಜೊತೆಗೆ ಸೀರೆ, ಕುಪ್ಪಸ ಮತ್ತು ದುಪಟ್ಟಾವನ್ನು ಧರಿಸಲು ಮತ್ತು ಹಣೆಯ ಮೇಲೆ ಕುಂಕುಮ ಮತ್ತು ತಿಲಕವನ್ನು ಇಟ್ಟುಕೊಂಡು ಕೆಲಸ ನಿರ್ವಹಿಸುವಂತೆ ಸೂಚನೆ ನೀಡಲಾಗಿದೆ. ಸಾಮಾನ್ಯ ಬೊಟ್ಟಿನ ಬದಲು ಸ್ಟಿಕ್ಕರ್‌ಗಳನ್ನು ಹಾಕಿಕೊಳ್ಳಬಹುದು ಎಂದು ತಿರುಪತಿ ದೇವಸ್ಥಾನಂ ಮಾಹಿತಿ ನೀಡಿದೆ.


ಅಮೆರಿಕದಲ್ಲಿ ರಸ್ತೆ ರಂಪಾಟ: ಭಾರತೀಯ ಮೂಲದ ನವ ವಿವಾಹಿತನಿಗೆ ಗುಂಡಿಟ್ಟು ಕೊಂದ ಲಾರಿ ಚಾಲಕ



ನ್ಯೂಯಾರ್ಕ್: ಭಾರತೀಯ ಮೂಲದ ನವ ವಿವಾಹಿತನೊಬ್ಬ ಅಮೆರಿಕದ ಇಂಡಿಯಾನಾ ಪೊಲೀಸ್ ನಗರದಲ್ಲಿ ಭೀಕರವಾಗಿ ಹತ್ಯೆಗೀಡಾಗಿದ್ದಾರೆ. ಉತ್ತರ ಪ್ರದೇಶದ ಆಗ್ರಾ ಮೂಲದ 29 ವರ್ಷ ವಯಸ್ಸಿನ ಗವಿನ್ ದಸೌರ್ ಅವರು ಮೆಕ್ಸಿಕೋ ಮೂಲದ ಸಿಂತ್ಯಾ ವಿವಿಯಾನಾ ಝಮೋರಾ ಎಂಬುವರನ್ನು ಮದುವೆಯಾಗಿದ್ದರು. 18 ದಿನಗಳ ಹಿಂದಷ್ಟೇ ಇವರ ಮದುವೆ ಆಗಿತ್ತು.

ನವ ವಿವಾಹಿತರು ಮೋಟಾರ್ ಬೈಕ್‌ನಲ್ಲಿ ಪ್ರಯಾಣ ಮಾಡುತ್ತಿದ್ದ ವೇಳೆ ಬಿಳಿ ಬಣ್ಣದ ಪಿಕಪ್ ಲಾರಿಯೊಂದು ಅತಿ ವೇಗವಾಗಿ ಅಜಾಗರೂಕತೆಯಿಂದ ಗವಿನ್ ಚಲಾಯಿಸುತ್ತಿದ್ದ ಬೈಕ್ ಅನ್ನು ಹಿಂದಿಕ್ಕಿತು. ಈ ವೇಳೆ ಸಿಟ್ಟಿಗೆದ್ದ ಗವಿನ್ ದಸೌರ್, ಪಿಕಪ್ ಲಾರಿಯನ್ನು ಓವರ್‌ಟೇಕ್ ಮಾಡಿ ತಡೆದು ಡ್ರೈವರ್‌ಗೆ ಕಳಗೆ ಇಳಿಯುವಂತೆ ತಾಕೀತು ಮಾಡಿದರು. ಅಷ್ಟೇ ಅಲ್ಲದೇ ತಮ್ಮ ಬಳಿ ಇದ್ದ ಪಿಸ್ತೂಲ್ ಹೊರಗೆ ತೆಗೆದರು. ಈ ವೇಳೆ ಟ್ರಕ್ ಚಾಲಕ ಲಾರಿಯಿಂದ ಕೆಳಗೆ ಇಳಿದು ಗವಿನ್ ಜೊತೆಗೆ ಬಡಿದಾಟಕ್ಕೆ ನಿಂತ. ಬಳಿಕ ಲಾರಿ ಚಾಲಕ ತನ್ನಲ್ಲಿದ್ದ ಬಂದೂಕನ್ನು ಹೊರ ತೆಗೆದು ಗವಿನ್ ಕಡೆಗೆ ಗುರಿ ಮಾಡಿ ಮೂರ್ನಾಲ್ಕು ಬಾರಿ ಗುಂಡು ಹಾರಿಸಿದ. ಗವಿನ್ ಅವರ ದೇಹಕ್ಕೆ ಹಲವು ಸುತ್ತು ಗುಂಡು ಬಿದ್ದ ಹಿನ್ನೆಲೆಯಲ್ಲಿ ಸ್ಥಳದಲ್ಲೇ ಕೊನೆಯುಸಿರೆಳೆದರು. ಕೂಡಲೇ ಸ್ಥಳಕ್ಕೆ ಆಗಮಿಸಿದ ಪೊಲೀಸರು ಸೂಕ್ತ ಕಾನೂನು ಕ್ರಮ ಕೈಗೊಂಡರು. ವಿಪರ್ಯಾಸವೆಂದರೆ, ಗವಿನ್ ಅವರಿಗೆ ಗುಂಡಿಟ್ಟು ಕೊಲೆ ಮಾಡಿದ ಲಾರಿ ಚಾಲಕನನ್ನು ಪೊಲೀಸರು ತಮ್ಮ ವಶದಿಂದ ಬಿಡುಗಡೆ ಮಾಡಿದ್ದಾರೆ. ಗವಿನ್ ಅವರು ಅಮೆರಿಕ ಪ್ರಜೆಯಲ್ಲ. ಆದರೆ, ಲಾರಿ ಚಾಲಕ ಅಮೆರಿಕ ಪ್ರಜೆಯಾದ ಕಾರಣ ಆತನನ್ನು ಬಿಡುಗಡೆ ಮಾಡಲಾಗಿದೆ ಎಂದು ಗವಿನ್ ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಯೆಮೆನ್ ಮೇಲೆ ಇಸ್ರೇಲ್ ಪ್ರತೀಕಾರ; ಹೌತಿ ಬಂಡುಕೋರರ ನೆಲೆಗಳ ಮೇಲೆ ವಾಯುದಾಳಿ



ಟೆಲ್ ಅವೀವ್: ರಾಜಧಾನಿ ಟೆಲ್ ಅವೀವ್ ಮೇಲೆ ದಾಳಿ ಮಾಡಿದ್ದ ಯೆಮೆನ್ ಹೌತಿ ಬಂಡುಕೋರರ ನೆಲೆಗಳ ಮೇಲೆ ಇಸ್ರೇಲ್ ವಾಯುದಾಳಿ ನಡೆಸಿದೆ.

ಹೌತಿ ಬಂಡುಕೋರರ ನಿಯಂತ್ರಣದಲ್ಲಿರುವ ಪಶ್ಚಿಮ ಯೆಮನ್ ಮೇಲೆ ಇಸ್ರೇಲಿ ಸೇನಾ ಪಡೆ ಭಾರಿ ಪ್ರಮಾಣದ ವೈಮಾನಿಕ ದಾಳಿ ನಡೆಸಿದ್ದು, ಪಶ್ಚಿಮ ಯೆಮೆನ್‌ನ ಹೊಡೆಡಾದಲ್ಲಿರುವ ತೈಲ ಸಂಸ್ಕರಣಾ ಘಟಕಗಳನ್ನು ಗುರಿಯಾಗಿಸಿಕೊಂಡು ವಾಯುದಾಳಿ ನಡೆಸಿದೆ. ಹೌತಿಗಳೇ ಹೆಚ್ಚಾಗಿರುವ ಪಶ್ಚಿಮ ಕರಾವಳಿ ಯೆಮೆನ್ ನಗರದಲ್ಲಿ ಭಾರಿ ಸ್ಫೋಟಗಳು ಮತ್ತು ಆಕಾಶದೆತ್ತರಕ್ಕೆ ಬೆಂಕಿಯ ಜ್ವಾಲೆಗಳು ಕಂಡುಬಂದಿವೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಹೌತಿ ಪ್ರಾಯೋಜಿತ ಸುದ್ದಿಸಂಸ್ಥೆ ವರದಿ ಮಾಡಿರುವಂತೆ ಇಸ್ರೇಲ್ ಸೇನೆ ನಡೆಸಿದ ಭೀಕರ ವಾಯುದಾಳಿಯಲ್ಲಿ ಹಲವಾರು ಜನರು ಸಾವನ್ನಪ್ಪಿದ್ದು, ಭಾರಿ ಸಂಖ್ಯೆಯಲ್ಲಿ ಗಾಯಗೊಂಡಿದ್ದಾರೆ ಎಂದು ಯೆಮೆನ್ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ ಎಂದು ವರದಿ ಮಾಡಿದೆ. ಈ ಹಿಂದೆ ಇಸ್ರೇಲ್ ರಾಜಧಾನಿ ಟೆಲ್ ಅವಿವ್‌ನಲ್ಲಿ ನಡೆದ ಡ್ರೋನ್ ದಾಳಿಯಲ್ಲಿ ಓರ್ವ ಇಸ್ರೇಲ್ ಪ್ರಜೆ ಸಾವನ್ನಪ್ಪಿದ್ದರು. ಈ ದಾಳಿ ಹೊಣೆಯನ್ನು ಹೌತಿ ಬಂಡುಕೋರ ಸಂಘಟನೆ ಹೊತ್ತುಕೊಂಡಿತ್ತು.

ರೀಲ್ಸ್ ಹುಚ್ಚು: DSLR ಕ್ಯಾಮರಾ ಖರೀದಿಸಲು ಕಳ್ಳತನಕ್ಕಿಳಿದ ಮನೆ ಕೆಲಸದಾಕೆ



ನವದೆಹಲಿ: ದೆಹಲಿಯ ದ್ವಾರಕಾದಲ್ಲಿ ಮನೆಕೆಲಸ ಮಾಡುತ್ತಿದ್ದ 30 ವರ್ಷದ ಮಹಿಳೆಯೊಬ್ಬರು ರೀಲ್ಸ್ ಮಾಡಲು ಡಿಎಸ್‌ಎಲ್‌ಆರ್ ಕ್ಯಾಮೆರಾ ಖರೀದಿಸಲು ಲಕ್ಷಾಂತರ ಮೌಲ್ಯದ ಚಿನ್ನ ಮತ್ತು ಬೆಳ್ಳಿ ಆಭರಣಗಳನ್ನು ಕದ್ದಿದ್ದಾಳೆ. ಇದಕ್ಕಾಗಿ ಆಕೆಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ದೆಹಲಿ ಪೊಲೀಸ್‌ರು ಮಹಿಳೆಯನ್ನು ಬಂಧಿಸಿದ್ದು, ಕದ್ದ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಆಕೆಯನ್ನು ನೀತು ಯಾದವ್ ಎಂದು ಗುರುತಿಸಲಾಗಿದೆ. ದ್ವಾರಕಾದ ಐಷಾರಾಮಿ ಪ್ರದೇಶದಲ್ಲಿರುವ ಬಂಗಲೆಯ ಮಾಲೀಕರು ಜು.15ರಂದು ತಮ್ಮ ಮನೆ ಕಳ್ಳತನವಾಗಿದೆ ಎಂದು ಪೊಲೀಸ್ ದೂರು ದಾಖಲಿಸಿದ್ದಾರೆ. ಅವರ ಮನೆಯಲ್ಲಿ ಚಿನ್ನದ ಬಳೆ, ಬೆಳ್ಳಿ ಸರ ಮತ್ತು ಬೆಳ್ಳಿ ಆಭರಣಗಳನ್ನು ಕಳವು ಮಾಡಲಾಗಿದೆ ಎಂದು ಮಾಲೀಕರು ತಿಳಿಸಿದ್ದಾರೆ. ಮನೆಯಲ್ಲಿ ಕೆಲಸ ಮಾಡುತ್ತಿದ್ದ ಮನೆಕೆಲಸದಾಕೆಯೇ ಈ ಕೃತ್ಯ ಎಸಗಿರಬಹುದು ಎಂದು ಶಂಕಿಸಿರುವುದಾಗಿ ಪೊಲೀಸರಿಗೆ ತಿಳಿಸಿದ್ದಾರೆ. ದೆಹಲಿಯಿಂದ ಬ್ಯಾಗ್ ಸಮೇತ ಪರಾರಿಯಾಗಲು ಯತ್ನಿಸುತ್ತಿದ್ದಾಗ ಆಕೆಯನ್ನು ಬಂಧಿಸಲಾಗಿದೆ. ಕೆಲ ದಿನಗಳಿಂದ ಆಕೆ ಯೂಟ್ಯೂಬ್ ಚಾನೆಲ್ ತೆರೆದಿದ್ದಳು, ಜೊತೆಗೆ Instagram ರೀಲ್‌ಗಳನ್ನು ಪೋಸ್ಟ್ ಮಾಡಲು ಪ್ರಾರಂಭಿಸಿದಳು. DSLR ಕ್ಯಾಮರಾಕ್ಕೆ ಲಕ್ಷಗಟ್ಟಲೆ ಬೇಕು ಎಂದು ತಿಳಿದ ಆಕೆ ಸಂಬಂಧಿಕರಲ್ಲಿ ಸಾಲ ಕೇಳಿದರೂ ಯಾರೂ ಹಣ ಕೊಟ್ಟಿಲ್ಲ. ದ್ವಾರಕಾ ಬಂಗಲೆಯಲ್ಲಿ ಕೆಲಸ ಮಾಡುತ್ತಿದ್ದಾಗ ಮನೆಯಲ್ಲಿ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣಗಳನ್ನು ಕದಿಯಲು ಯೋಜನೆ ರೂಪಿಸಿದ್ದೆ ಎಂದು ಆಕೆಯೇ ಬಾಯ್ಬಿಟ್ಟಿದ್ದಾಳೆ.

ವಿದ್ಯಾರ್ಥಿಯನ್ನು ಮಂಚಕ್ಕೆ ಕರೆದ ಶಿಕ್ಷಕಿ ಅರೆಸ್ಟ್!



ಡೆಲ್ವಾರ್: 24ರ ಹರೆಯ ಮಹಿಳಾ ಟೀಚರ್ 8ನೇ ತರಗತಿ ವಿದ್ಯಾರ್ಥಿಗೆ ತನ್ನ ನಗ್ನ ಫೋಟೋ ಹಾಗೂ ಇತರ ಕೆಲ ಪೋರ್ನ್ ವಿಡಿಯೋಗಳನ್ನು ಕಳುಹಿಸಿ ಮಂಚಕ್ಕೆ ಕರೆದಿದ್ದಾಳೆ. ಘಟನೆಯಿಂದ ಬೆಚ್ಚಿಬಿದ್ದ ವಿದ್ಯಾರ್ಥಿ ಪೋಷಕರಿಗೆ ಮಾಹಿತಿ ನೀಡಿದ ಪರಿಣಾಮ ಇದೀಗ ಶಿಕ್ಷಕಿಯನ್ನು ಪೊಲೀಸರು ಬಂಧಿಸಿದ ಘಟನೆ ಅಮೆರಿಕದ ಡೆಲ್ವಾರ್‌ನಲ್ಲಿ ನಡೆದಿದೆ. ವಿಲ್ಮಿಂಗ್ಟನ್‌ನ ಸೈಂಟ್ ಮೇರಿ ಮಗ್ಡೇಲನ್ ಕ್ಯಾಥೋಲಿಕ್ ಶಾಲೆಯಲ್ಲಿ ಈ ಘಟನೆ ನಡೆದಿದೆ. ಶಿಕ್ಷಕಿ ಅಲಾನಿಸ್ ಪಿಲಾನಿಯನ್ ಅರೆಸ್ಟ್ ಆಗಿದ್ದಾರೆ. ಸ್ನಾಪ್‌ಚಾಟ್ ಮೂಲಕ ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸುತ್ತಿದ್ದ ಅಲಾನಿಸ್, ಪಠ್ಯ, ಪರೀಕ್ಷೆ ಸಂಬಂಧಿತ ವಿಚಾರಗಳನ್ನು ಹಂಚಿಕೊಳ್ಳುತ್ತಿದ್ದರು. ಆದರೆ 14ರ ಹರೆಯದ ಓರ್ವ ವಿದ್ಯಾರ್ಥಿ ಜೊತೆ ಆತ್ಮೀಯವಾಗಿ ಸಂದೇಶ ಕಳುಹಿಸಲು ಆರಂಭಿಸಿದ್ದಾಳೆ. ಇದರ ನಡುವೆ ಅಲಾನಿಸ್ ವಿದ್ಯಾರ್ಥಿಗೆ ತನ್ನ ನಗ್ನ ಫೋಟೋ ಹಾಗೂ ಇತರ ಕೆಲ ವಿಡಿಯೋಗಳನ್ನು ಕಳುಹಿಸಿದ್ದಾಳೆ. ಬಳಿಕ ಮನೆಗೆ ಕರೆದಿದ್ದಾಳೆ. ಆತಂಕಗೊಂಡ ವಿದ್ಯಾರ್ಥಿ, ಪೋಷಕರಿಗೆ ಮಾಹಿತಿ ನೀಡಿದ್ದಾನೆ. ಇತ್ತ ಪೋಷಕರು ಪೊಲೀಸ್ ಠಾಣೆಗೆ ದಾಖಲೆ ಸಮೇತ ದೂರು ನೀಡಿದ್ದಾರೆ. ತಕ್ಷಣವೇ ಕಾರ್ಯಪ್ರವೃತ್ತರಾದ ಪೊಲೀಸರು ಶಿಕ್ಷಕಿಯನ್ನು ಬಂಧಿಸಿದ್ದಾರೆ. ಶಾಲಾ ಆಡಳಿತ ಮಂಡಳಿ ಶಿಕ್ಷಕಿಯನ್ನು ಅಮಾನತು ಮಾಡಿದೆ.

ಮೈಸೂರಲ್ಲಿ ಧಮ್ಮಚಕ್ಕ ಪವತ್ತನ ದಿನ ಆಚರಣೆ

ದೇವರ ಜಾಗದಲ್ಲಿ ಸತ್ಯ, ಸದಾಚಾರ, ನೈತಿಕತೆಯನ್ನಿರಿಸಿದ ಭಗವಾನ್ ಬುದ್ಧ



ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ 'ಧಮ್ಮಚಕ್ಕ ಪವತ್ತನ ದಿನ' ಆಚರಿಸಲಾಯಿತು.

ಮೈಸೂರು, ಜು.21(ಎಂಕೆ)–ದೇವರೆಂಬ ಸುಪ್ರೀಂ ಪವರ್ ಇಲ್ಲವೇ ಇಲ್ಲ ಎಂದು ಪ್ರತಿಪಾದಿಸಿರುವ ಭಗವಾನ್ ಬುದ್ಧರು, ದೇವರ ಜಾಗದಲ್ಲಿ ಸತ್ಯ, ಸದಾಚಾರ, ನೈತಿಕತೆಯನ್ನಿರಿಸಿದ್ದಾರೆ ಎಂದು ಅಕ್ಕ ಐಎಎಸ್ ಅಕಾಡೆಮಿ ಸ್ಥಾಪಕ ಡಾ.ಶಿವಕುಮಾರ್ ತಿಳಿಸಿದರು.

ಮೈಸೂರಿನ ಅಶೋಕಪುರಂ ಸಮೀಪದಲ್ಲಿರುವ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ಭಾರತೀಯ ವಿದ್ಯಾರ್ಥಿ ಸಂಘ ಹಾಗೂ ನೆಲೆ ಹಿನ್ನೆಲೆ ಸಂಸ್ಥೆ ಸಹಯೋಗದೊಂದಿಗೆ ಭಗವಾನ್ ಗೌತಮ ಬುದ್ಧರು ಸಾರನಾಥದಲ್ಲಿ ಮೊದಲು ಧಮ್ಮೋಪದೇಶ ನೀಡಿದ ದಿನದ ಅಂಗವಾಗಿ 'ಧಮ್ಮಚಕ್ಕ ಪವತ್ತನ ದಿನ' ಆಚರಿಸಲಾಯಿತು. ಈ ವೇಳೆ 'ಧಮ್ಮಚಕ್ಕ ಪವತ್ತನ ಸುತ್ತ' ಕುರಿತು ಮಾತನಾಡಿದ ಅವರು, ದೇವರೆಂಬ ಯಾವುದೇ ಅಗೋಚರ ಶಕ್ತಿಯೂ ನಿಮ್ಮನ್ನು ಮುನ್ನಡೆಸುವುದಿಲ್ಲ. ನಿಮ್ಮ ಕಷ್ಟ–ನಷ್ಟಕ್ಕೆ ಅದು ಕಾರಣವೂ ಅಲ್ಲ. ನಿಮ್ಮನ್ನು ಸುಸ್ಥಿತಿ ಅಥವಾ ದುಸ್ಥಿತಿಯಲ್ಲಿಡಲು ಅದರಿಂದ ಸಾಧ್ಯವಿಲ್ಲ. ಮನುಷ್ಯನಿಂದಲೇ ಪ್ರಾರಂಭವಾಗಿ, ಮನುಷ್ಯನಿಂದಲೇ ಮುನ್ನಡೆದು, ಮನುಷ್ಯನಿಂದಲೇ ತಿದ್ದಲ್ಪಡಬೇಕು ಎಂಬುದನ್ನು ಬುದ್ಧರು ತಿಳಿಸಿದ್ದಾರೆ ಎಂದರು.

ಬುದ್ಧರು ಜ್ಞಾನ ಪಡೆದ ನಂತರ ತಮ್ಮೊಂದಿಗೆ ಪರಿಪೂರ್ಣ ಜ್ಞಾನ ಪಡೆಯಲು ಪ್ರಯತ್ನಿಸಿದ್ದ ಐವರು ಸ್ನೇಹಿತರಿಗೆ ಮೊದಲ ಬಾರಿ ಧಮ್ಮವನ್ನು ಬೋಧಿಸಿದ ಪವಿತ್ರ ದಿನ ಇದಾಗಿದ್ದು, ವಿಶ್ವದೆಲ್ಲೆಡೆ 'ಧಮ್ಮಚಕ್ಕ ಪವತ್ತನ' ದಿನವಾಗಿ ಆಚರಿಸಲಾಗುತ್ತಿದೆ. ನಾನು ಹಿಂದಿನಿಂದ ಧಮ್ಮ ಚಕ್ರವನ್ನು ಪ್ರಾರಂಭಿಸುತ್ತಿದ್ದೇನೆ. ಅದನ್ನು ಯಾರಿಂದಲೂ ಹಿಂದೆ ತಳ್ಳಲು ಸಾಧ್ಯವಿಲ್ಲ ಎಂದು ಬುದ್ಧರು ಕರಾರುವಕ್ಕಾಗಿ ಹೇಳಿದ್ದಾರೆ. ಬುದ್ಧರ ವಿಚಾರಗಳನ್ನು ಸುಳ್ಳು ಎಂದು ಸಾಬೀತು ಮಾಡಿದರೆ ಧಮ್ಮ ಚಕ್ಕವನ್ನು ಹಿಂದೆ ತಳ್ಳಿದಂತೆ. ಆದರೆ ಇಲ್ಲಿಯವರೆಗೂ ಬುದ್ಧರ ವಿಚಾರಗಳನ್ನು ಸುಳ್ಳೆಂದು ಸಾಬೀತುಪಡಿಸಲು ಸಾರಿಂದಲೂ ಸಾಧ್ಯವಾಗಿಲ್ಲ ಎಂದು ಹೇಳಿದರು.

ಬುದ್ಧರು ಎರಡು ಅತಿರೇಕಗಳನ್ನು ಒಪ್ಪುವುದಿಲ್ಲ. ಅದರಲ್ಲಿ ಸನ್ಯಾಸಿಗಳಾದವರು ಅಥವಾ ಬಿಕ್ಕುಗಳಾದರೂ ಸುಖ–ಭೋಗಗಳಲ್ಲಿ ಮುಳುಗಿರುವುದು ಹಾಗೂ ಯಾವುದೇ ಸುಖ–ಭೋಗವನ್ನು ಅಂಟಿಸಿಕೊಳ್ಳದೆ ದೇಹವನ್ನು ದಂಡಿಸುವುದು ಅಥವಾ ಹಿಂಸಿಸುವುದಾಗಿದೆ. ಈ ಎರಡು ಪ್ರಕೃತಿ ವಿರೋಧ ಎಂದಿದ್ದಾರೆ. ಆದರೆ ಇವತ್ತು ಕೆಲ ಸನ್ಯಾಸಿಗಳು ಭಕ್ತರಿಂದ ಕಾಣಿಕೆ, ಸಂಪತ್ತನ್ನು ಸ್ವೀಕರಿಸಿ, ಅವುಗಳಿಗೆ ಮಾಲೀಕರಾಗಿ ಭೋಗದ ತುತ್ತ ತುದಿಯಲ್ಲಿ ಮೆರೆಯುತ್ತಿರುವುದನ್ನು ನೋಡುತ್ತಿದ್ದೇವೆ ಎಂದರು.

ಜಗತ್ತು ನೈತಿಕ ಮಾರ್ಗದಲ್ಲಿಯೇ ಮುನ್ನಡೆಯಬೇಕು ಹಾಗೂ ಮುನ್ನಡೆಸಲ್ಪಬೇಕು ಎಂದು ಪ್ರತಿಪಾದಿಸಿರುವ ಬುದ್ಧರು, ಅದಕ್ಕಾಗಿ ಪಂಚ ಶೀಲ ತತ್ವಗಳು, ಅಷ್ಟಾಂಗ ಮಾರ್ಗಗಳನ್ನು ಬೋಧಿಸಿದ್ದಾರೆ. ಮನುಷ್ಯನ ಸಂತೋಷಕ್ಕೆ ಪಂಚಶೀಲ ತತ್ವಗಳು ಹಾಗೂ ಅಷ್ಟಾಂಗ ಮಾರ್ಗಗಳ ನೇರವಾದ ಸಂಬಂಧ ಇದೆ. ನಮ್ಮ ಸಂಕಟ, ದುಃಖಕ್ಕೆ ನಮ್ಮ ಆಲೋಚನೆಯೇ ಕಾರಣ. ನಮಗೆ ನಾವೇ ಜವಾಬ್ದಾರರು ಎಂಬುದನ್ನು ಅರ್ಥಮಾಡಿದ್ದಾರೆ ಎಂದು ತಿಳಿಸಿದರು. ಇದಕ್ಕೂ ಮುನ್ನ ಪದ್ಮಪಾಣಿ ಲಲಿತಕಲಾ ಅಕಾಡೆಮಿ ವಿದ್ಯಾರ್ಥಿಗಳು ಬುದ್ಧ ಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಮಾಜಿ ಮೇಯರ್ ಪುರುಷೋತ್ತಮ್ ಅಧ್ಯಕ್ಷತೆ ವಹಿಸಿದ್ದರು. ಕವಿ ಸೋಸಲೆ ಗಂಗಾಧರ್, ನೆಲೆ ಹಿನ್ನೆಲೆ ಸಂಸ್ಥೆಯ ಕೆ.ಆರ್.ಗೋಪಾಲಕೃಷ್ಣ, ಪ್ರಮುಖರಾದ ಡಾ.ಪ್ರೇಮಕುಮಾರ್, ಡಾ.ಶಿವಕುಮಾರ್, ಡಾ.ಜಗನ್ನಾಥ್, ಪುಟ್ಟಮಣಿ, ಸೋಸಲೆ ಸಿದ್ದರಾಜು, ಶಿಕ್ಷಕ ರಘೋತ್ತಮ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಸೋಮವಾರ 22 ಜುಲೈ 2024

ಹೆಚ್‌ಎಂಟಿ ಕಾರ್ಖಾನೆ ಪುನಶ್ಚೇತನಗೊಳಿಸಿ ಉದ್ಯೋಗ ಸೃಷ್ಟಿಸುವೆ

ಕೆ.ಆರ್.ಪೇಟೆಯಲ್ಲಿ ಅಭಿನಂದನೆ ಸ್ವೀಕರಿಸಿದ ಹೆಚ್.ಡಿ.ಕುಮಾರಸ್ವಾಮಿ ಭರವಸೆ




ಕೆ.ಆರ್.ಪೇಟೆ ಪುರಸಭಾ ಕಚೇರಿಯ ಆವರಣದಲ್ಲಿ ಆಯೋಜಿಸಿದ್ದ ಮೈತ್ರಿ ಪಕ್ಷಗಳ ಬೃಹತ್ ಕಾರ್ಯಕರ್ತರ ಸಮಾವೇಶ ಹಾಗೂ ಅಭಿನಂದನಾ ಸಮಾರಂಭವನ್ನು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಿದರು. ಬಲಚಿತ್ರದಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಜನಸ್ತೋಮವನ್ನು ಕಾಣಬಹುದು.

ಕೆಆರ್.ಪೇಟೆ,ಜು.21–ಭದ್ರಾವತಿ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಲು ತೀರ್ಮಾನ ಮಾಡಿದ್ದೇನೆ. ರಾಷ್ಟ್ರದ 6 ಕಡೆ ಸಾವಿರಾರು ಮಂದಿಗೆ ಉದ್ಯೋಗ ನೀಡಿದ್ದ ಹೆಚ್‌ಎಂಟಿ ಕಾರ್ಖಾನೆ ಮುಚ್ಚಿದೆ. ಈ ದೇಶೀಯ ಕಾರ್ಖಾನೆ ಹೆಚ್‌ಎಂಟಿಯನ್ನು ಪುನಶ್ಚೇತನಗೊಳಿಸಿ ದೇಶಾದ್ಯಂತ ಉದ್ಯೋಗ ಸೃಷ್ಟಿಗೆ ತೀರ್ಮಾನಿಸಲಾಗಿದೆ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ. ಪಟ್ಟಣದ ಪುರಸಭಾ ಕಚೇರಿ ಆವರಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಮಂಡ್ಯ ಜಿಲ್ಲೆಯ ಜನತೆ ನಿಮ್ಮ ಕುಮಾರಸ್ವಾಮಿಗೆ ಪಕ್ಷಾತೀತವಾಗಿ ಆಶೀರ್ವಾದ ಮಾಡಿದ್ದೀರಿ. ಸ್ವಲ್ಪ ಸಮಯಾವಕಾಶ ಕೊಡಿ, ಜಿಲ್ಲೆಯ ಸಮಗ್ರ ಅಭಿವೃದ್ಧಿ ಮಾಡುತ್ತೇನೆ. ಜಿಲ್ಲೆಯಲ್ಲಿ ಉದ್ಯೋಗ ಸೃಷ್ಟಿ ಮಾಡುವ ಅವಕಾಶ ನನಗೆ ಒದಗಿ ಬಂದಿದೆ. ಮಂಡ್ಯ ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಆರಂಭ ಮಾಡಿ, ಜಿಲ್ಲೆಯ ಯುವಕರಿಗೆ ಕೃಷಿ ಜೊತೆಗೆ ಉದ್ಯೋಗ ನೀಡಲು ತೀರ್ಮಾನ ಮಾಡಿದ್ದೇನೆ. ಜಿಲ್ಲೆಯು ಕೇವಲ ಕೃಷಿ ನಂಬಿ ಬದುಕಲು ಆಗಲ್ಲ. ಜೊತೆಗೆ ಕೈಗಾರಿಕೆ ಇದ್ದರೆ ಉತ್ತಮ ಎಂದು ಕೈಗಾರಿಕೋದ್ಯಮಿಗಳನ್ನು ಕರೆತಂದು ಕೈಗಾರಿಕೆಗಳನ್ನು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಆರಂಭಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಕಾವೇರಿ ಸಮಸ್ಯೆ ಇತ್ಯರ್ಥಕ್ಕೆ ಪ್ರಯತ್ನ: ಬ್ರಿಟಿಷರ ಕಾಲದ ಕಾವೇರಿ ಸಮಸ್ಯೆ ಇತ್ಯರ್ಥಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಪ್ರಧಾನಿ ನರೇಂದ್ರ ಮೋದಿ ಅವರ ಮನವೊಲಿಸಿ ಕಾವೇರಿ ಸಮಸ್ಯೆಯನ್ನು ಹೋಗಲಾಡಿಸಲು ಶ್ರಮಿಸುತ್ತೇನೆ. ನೀರಾವರಿ ಬಗ್ಗೆ ಅಪಾರ ಜ್ಞಾನ ಇರುವ ದೇವೇಗೌಡರ ಬಗ್ಗೆ ಪ್ರಧಾನಿ ನರೇಂದ್ರಮೋದಿ ಅವರು ಅಪಾರ ಗೌರವ ಇಟ್ಟುಕೊಂಡಿದ್ದಾರೆ. ರಾಜ್ಯದಲ್ಲಿ ಮೈತ್ರಿ ಪಕ್ಷಗಳಿಗೆ ಮೈಸೂರು ಪ್ರಾಂತ್ಯದಲ್ಲಿ ಅತ್ಯಧಿಕ ಸ್ಥಾನಗಳನ್ನು ನೀಡಿದ್ದ ಮತದಾರರ ಹಿತಕ್ಕಾಗಿ ನನಗೆ ಸಂಪುಟ ದರ್ಜೆಯ ಸಚಿವ ಸ್ಥಾನ ನೀಡಿದ್ದಾರೆ. ಅಲ್ಲದೇ ಕೇಂದ್ರ ಯೋಜನಾ ಆಯೋಗದ ಸದಸ್ಯ ಸ್ಥಾನವನ್ನು ಸಹ ನೀಡಿದ್ದಾರೆ. ಇದನ್ನು ಸಮರ್ಥವಾಗಿ ಸದುಪಯೋಗಪಡಿಸಿಕೊಂಡು ಜಿಲ್ಲೆಯ ಹಾಗೂ ರಾಜ್ಯದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಎಂದರು.

ಕಾಂಗ್ರೆಸ್ ಪಕ್ಷದವರು ಷಡ್ಯಂತ್ರ ಮಾಡಿ ಮಂಡ್ಯ ಜಿಲ್ಲೆಯ ಲೋಕಸಭಾ ಚುನಾವಣೆಯಲ್ಲಿ ನನ್ನನ್ನು ಸೋಲಿಸಿ, ಪಕ್ಷವನ್ನು ನಾಶ ಮಾಡಲು ಮುಂದಾಗಿದ್ದರು. ಜೆಡಿಎಸ್ ಪಕ್ಷವು ಲೋಕಸಭಾ ಚುನಾವಣೆಯ ನಂತರ ನಾಶವಾಗಲಿದೆ. ಹಾಗಾಗಿ ಜೆಡಿಎಸ್ ಕಾರ್ಯಕರ್ತರೆಲ್ಲರೂ ಕಾಂಗ್ರೆಸ್ ಪಕ್ಷವನ್ನು ಸೇರಿ ಎಂದು ಕರೆ ನೀಡಿದ ಕಾಂಗ್ರೆಸ್ ನಾಯಕರು ಮುಟ್ಟಿನೋಡಿಕೊಳ್ಳುವಂತೆ ನನ್ನನ್ನು ಭರ್ಜರಿಯಾಗಿ ಗೆಲ್ಲಿಸುವ ಮೂಲಕ ಮಂಡ್ಯ ಜಿಲ್ಲೆಯ ಜನತೆ ನನ್ನ ಜೆಡಿಎಸ್ ಪಕ್ಷವನ್ನು ಉಳಿಸಿದ್ದೀರಿ, ನಿಮ್ಮ ಈ ಋಣವನ್ನು ನನ್ನ ಕೊನೆಯ ಉಸಿರು ಇರುವವರೆವಿಗೂ ಮರೆಯುವುದಿಲ್ಲ. ಮಂಡ್ಯ ಜಿಲ್ಲೆಯ ಜನತೆಯ ನಿರೀಕ್ಷೆಯನ್ನು ಹುಸಿಗೊಳಿಸದೇ ಅವರ ಅಭಿವೃದ್ಧಿಗೆ ಶ್ರಮಿಸುವುದಾಗಿ ಕುಮಾರಸ್ವಾಮಿ ಭರವಸೆ ನೀಡಿದರು.

ಸತ್ತವರ ಬಗ್ಗೆಯೂ ನಿರ್ಲಕ್ಷ್ಯ: ಅಂಕೋಲ ಬಳಿ ಮಳೆಯಿಂದ ಮಣ್ಣು ಕುಸಿದು ಐದು ಮಂದಿ ಮಣ್ಣಿನ ಅಡಿ ಸಿಲುಕಿ ಸಾವನ್ನಪ್ಪಿದರೂ ರಾಜ್ಯದ ಸಿಎಂ ಸಿದ್ದರಾಮಯ್ಯ ಹೋಗಿ ಸಾಂತ್ವನ ಹೇಳಲಿಲ್ಲ. ನಾನು ಹೋಗಿ ಬಂದ ನಂತರ ಸಿಎಂ ಹೋಗಿರುತ್ತಾರೆ. ಇಂತಹ ಜನವಿರೋಧಿ ರಾಜ್ಯ ಸರ್ಕಾರ ಯಾರಿಗೆ ಬೇಕಾಗಿದೆ ಎಂದು ಟೀಕಿಸಿದರು.

ಪಾಂಡವಪುರದಿಂದ ಕೆಆರ್.ಪೇಟೆ ಟೌನ್ ಮಾರ್ಗವಾಗಿ ಚನ್ನರಾಯಪಟ್ಟಣಕ್ಕೆ ರೈಲ್ವೆ ಮಾರ್ಗ ಹಾಗೂ ಚತುಷ್ಪಥ ರಸ್ತೆ ಮಾರ್ಗ ಕಲ್ಪಿಸಲು ಇದೇ ಕೇಂದ್ರ ಬಜೆಟ್‌ನಲ್ಲಿ ಸೇರಿಸಲು ಕೇಂದ್ರ ರೈಲ್ವೆ ಸಚಿವರು ಹಾಗೂ ಸಾರಿಗೆ ಸಚಿವರಾದ ನಿತಿನ್ ಗಡ್ಕರಿ ಅವರೊಂದಿಗೆ ಚರ್ಚೆ ನಡೆಸಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಕ್ಷೇತ್ರದ ಶಾಸಕ ಹೆಚ್.ಟಿ.ಮಂಜು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅಲ್ಲದೆ ತಾಲೂಕಿನ ರೈಲ್ವೆ ಮಾರ್ಗ ಹಾಗೂ ನಾಲ್ಕು ಪಥದ ರಸ್ತೆ ನಿರ್ಮಾಣ ಮಾಡಿಸಿಕೊಡಬೇಕು ಎಂದು ಮನವಿ ಮಾಡಿದರು.

ಮಾಜಿ ಸಚಿವರಾದ ಡಾ.ಕೆ.ಸಿ.ನಾರಾಯಣಗೌಡ, ಸಾ.ರಾ.ಮಹೇಶ್, ಶಾಸಕರಾದ ಸಿ.ಎನ್.ಬಾಲಕೃಷ್ಣ, ಸ್ವರೂಪ್ ಪ್ರಕಾಶ್, ಸುರೇಶ್‌ಬಾಬು, ಮಾಜಿ ಶಾಸಕರಾದ ಸುರೇಶ್‌ಗೌಡ, ರವೀಂದ್ರ ಶ್ರೀಕಂಠಯ್ಯ, ಡಾ.ಕೆ.ಅನ್ನದಾನಿ, ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್, ಮೂಡಾ ಮಾಜಿ ಅಧ್ಯಕ್ಷ ಕೆ.ಶ್ರೀನಿವಾಸ್, ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕೀರಾಂ, ತಾಲೂಕು ಬಿಜೆಪಿ ಅಧ್ಯಕ್ಷ ಸಾರಂಗಿ ನಾಗಣ್ಣ, ಮುಖಂಡರಾದ ಮನ್‌ಮುಲ್ ಮಾಜಿ ಅಧ್ಯಕ್ಷರಾದ ಎಂ.ಬಿ.ಹರೀಶ್, ಮಂಡ್ಯ ರಾಮ ಚಂದ್ರು, ನೆಲ್ಲಿಗೆರೆ ಬಾಲು, ಹೆಚ್.ಟಿ.ಲೋಕೇಶ್, ಮದ್ದೂರು ಸ್ವಾಮಿ, ಎಸ್.ಎಲ್.ಮೋಹನ್, ಸಿ.ಎನ್.ಪುಟ್ಟಸ್ವಾಮೀಗೌಡ, ಬಿ.ಎಂ.ಕಿರಣ್, ಕುರುಬಹಳ್ಳಿ ನಾಗೇಶ್, ಬಿ.ವಿ.ನಾಗೇಶ್, ಐನೋರಹಳ್ಳಿ ಮಲ್ಲೇಶ್, ಎಸ್.ಆರ್.ದಿನೇಶ್, ಶೀಳನೆರೆ ಭರತ್ ಸೇರಿದಂತೆ ನೂರಾರು ಮುಖಂಡರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಖಜಾನೆ ಖಾಲಿ ಮಾಡಿರುವ ಸರ್ಕಾರ ಬೇಕಿಲ್ಲ

ಕೆ.ಆರ್.ಪೇಟೆ: ರಾಜ್ಯ ಸರ್ಕಾರದ ಗ್ಯಾರಂಟಿ ಕಾರ್ಯಕ್ರಮಗಳಿಂದಾಗಿ ಸರ್ಕಾರದ ಖಜಾನೆ ಖಾಲಿಯಾಗಿದೆ. ಇಂತಹ ಸರ್ಕಾರ ರಾಜ್ಯದ ಜನತೆಗೆ ಅಗತ್ಯವಿಲ್ಲ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ಪರಿಶಿಷ್ಟ ಜಾತಿ ಮತ್ತು ಪಂಗಡ ಸಮುದಾಯದ ಅಭಿವೃದ್ಧಿಗೆ ಬಳಸಬೇಕಾದ ಹಣವನ್ನು ಕಾಂಗ್ರೆಸ್ ಪಕ್ಷದ ಚುನಾವಣೆ ಖರ್ಚಿಗಾಗಿ ದುರ್ಬಳಕೆ ಮಾಡಿಕೊಂಡಿದೆ. ಆದರೂ ಮುಖ್ಯಮಂತ್ರಿಗಳು ಬರೀ 97 ಕೋಟಿ ದುರ್ಬಳಕೆ ಆಗಿದೆ ಎನ್ನುತ್ತಿದ್ದಾರೆ. ಇವರಿಗೆ ನಾಚಿಕೆಯಾಗಬೇಕು. ಜನರ ತೆರಿಗೆ ಹಣವನ್ನು ಲೂಟಿ ಮಾಡಲು ಸಚಿವರು ಪೈಪೋಟಿ ನಡೆಸುತ್ತಿದ್ದಾರೆ ಎಂದು ಅಭಿನಂದನಾ ಸಮಾರಂಭದಲ್ಲಿ ಟೀಕಾಪ್ರಹಾರ ನಡೆಸಿದರು.

ರಾಜ್ಯದ ಜನತೆ ಇವರ ಬಿಟ್ಟಿ ಗ್ಯಾರಂಟಿ ಯೋಜನೆಗಳನ್ನು ಕೇಳಿರಲಿಲ್ಲ. ತಮ್ಮ ಪಕ್ಷದ ಅಭಿವೃದ್ಧಿಗಾಗಿ ರೂಪಿಸಿದ್ದ ಈ ಯೋಜನೆ ನಿಜವಾದ ಫಲಾನುಭವಿಗಳಲ್ಲದೇ ಉಳ್ಳವರಿಗೂ ನೀಡಿ ರಾಜ್ಯದ ಖಜಾನೆ ಮಾಡಿದ್ದೇ ರಾಜ್ಯ ಸರ್ಕಾರದ ಸಾಧನೆಯಾಗಿದೆ. ಬಡವರಿಗೆ ಶಕ್ತಿ ಯೋಜನೆ ನೀಡುವ ಬದಲು ಶ್ರೀಮಂತರಿಗೂ, 3ಲಕ್ಷ ವೇತನ ಪಡೆಯುವ ಸರ್ಕಾರಿ ನೌಕರರಿಗೂ ನೀಡುವ ಮೂಲಕ ಸರ್ಕಾರದ ಹಣವನ್ನು ಪೋಲು ಮಾಡುತ್ತೀರಿ. ವಿದ್ಯುತ್ ಸೌಲಭ್ಯವನ್ನು ಶ್ರೀಮಂತರಿಗೂ, ತೆರಿಗೆದಾರರಿಗೂ ಉಚಿತವಾಗಿ ನೀಡುವ ಮೂಲಕ ಬಡವರ ಪಾಲಿನ ವಿದ್ಯುತ್ ಶ್ರೀಮಂತರಿಗೂ ಹಂಚಿಕೆಯಾಗಿದೆ ಎಂದರು.

ಶನಿವಾರ ಕಾವೇರಿಗೆ ಸಿಎಂ ಬಾಗಿನ ಅರ್ಪಣೆ, ಜಿಲ್ಲಾಡಳಿತದಿಂದ ಸಿದ್ಧತೆ

ಕೆಆರ್‌ಎಸ್: ಕೃಷ್ಣರಾಜಸಾಗರ ಜಲಾಶಯ ಭರ್ತಿಗೆ ಇನ್ನು ಕೇವಲ ಒಂದು ಅಡಿ ಮಾತ್ರ ಬಾಕಿ ಇದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜುಲೈ 27ರಂದು ಡ್ಯಾಂಗೆ ಬಾಗಿನ ಅರ್ಪಿಸಲಿದ್ದು, ಜಿಲ್ಲಾಡಳಿತ ಸಿದ್ಧತೆ ಕೈಗೊಂಡಿದೆ ಎಂದು ಶಾಸಕ ಎ.ಬಿ.ರಮೇಶ ಬಂಡಿಸಿದ್ದೇಗೌಡ ತಿಳಿಸಿದರು.




ಭಾನುವಾರ ಕೆಆರ್‌ಎಸ್ ಅಣೆಕಟ್ಟೆ ಭರ್ತಿಯಾಗುವ ಹಿನ್ನೆಲೆಯಲ್ಲಿ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ 123 ಅಡಿ ತುಂಬಿರುವ ಜಲಾಶಯ ಸಂಪೂರ್ಣ ಭರ್ತಿಗೆ ಇನ್ನೊಂದು ಅಡಿ ಇದ್ದು, ಅಣೆಕಟ್ಟೆ ಶೀಘ್ರವೇ ತುಂಬಲಿದೆ. 27ರಂದು ಸಿಎಂ ಸಿದ್ದರಾಮಯ್ಯ ಆಗಮಿಸಲಿದ್ದು, ಬಾಗಿನ ಅರ್ಪಣೆ ಮಾಡಲಿದ್ದಾರೆ ಎಂದರು.

ಬಾಗಿನ ಅರ್ಪಣೆ ಕಾರ್ಯಕ್ರಮಕ್ಕೆ ಜಿಲ್ಲಾಡಳಿತ ಈಗಾಗಲೇ ಸಿದ್ಧತೆ ನಡೆಸುತ್ತಿದ್ದು, ಅಂದು ಒಳ್ಳೆಯ ಮುಹೂರ್ತದಲ್ಲಿ ಸಿಎಂ ಬಾಗಿನ ಅರ್ಪಿಸುವರು. ಈ ಸಂದರ್ಭದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಮಂಡ್ಯ ಹಾಗೂ ಮೈಸೂರು ಜಿಲ್ಲೆಯ ಜನಪ್ರತಿನಿಧಿಗಳು ಭಾಗಿಯಾಗಲಿದ್ದಾರೆ. ರೈತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಕೋರಿದರು.

ಮಂಡ್ಯ ಜಿಲ್ಲೆಯ ಜನಕ್ಕೆ ಯುಗಾದಿ, ದಸರಾ ಹಬ್ಬ ಎಷ್ಟು ಸಂಭ್ರಮವೋ ಹಾಗೆಯೇ ಕನ್ನಂಬಾಡಿ ಅಣೆಕಟ್ಟೆ ಭರ್ತಿಯಾದಾಗ ಮಾಡುವ ಬಾಗಿನವೂ ದೊಡ್ಡ ಹಬ್ಬವಾಗಿದೆ. ನೀರಿಲ್ಲದೇ ಕಂಗೆಟ್ಟಿದ್ದ ರೈತರು ಸಂಭ್ರಮಿಸುವ ಸಂದರ್ಭವಾಗಿದ್ದು, ಇನ್ನೂ ಕೆಲವು ತಿಂಗಳು ಮಂಡ್ಯ ಜಿಲ್ಲೆಗೆ ಕುಡಿಯಲು ಹಾಗೂ ಬೆಳೆ ಬೆಳೆಯಲು ಯಾವುದೇ ಸಮಸ್ಯೆ ಇರುವುದಿಲ್ಲ. ಜೊತೆಗೆ ಬೆಂಗಳೂರಿನ ಜನಕ್ಕೂ ಸಹ ಕುಡಿಯುವ ನೀರಿಗೆ ತೊಂದರೆ ಇಲ್ಲ ಎಂದು ಹೇಳಿದರು.

ಇಂದು ಕೆಆರ್‌ಎಸ್‌ಗೆ ಡಿಸಿಎಂ ಡಿಕೆಶಿ

ಮಂಡ್ಯ: ಕೆಆರ್‌ಎಸ್ ಭರ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಜಲಸಂಪನ್ಮೂಲ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೋಮವಾರ ಬೆಳಿಗ್ಗೆ ಕೆಆರ್‌ಎಸ್ ಜಲಾಶಯಕ್ಕೆ ಭೇಟಿ ನೀಡಲಿದ್ದಾರೆ.



ಇಂದು ಬೆಳಿಗ್ಗೆ 7.45ಕ್ಕೆ ಕೆಆರ್‌ಎಸ್‌ಗೆ ಆಗಮಿಸಲಿರುವ ಡಿಕೆಶಿ, ಅಧಿಕಾರಿಗಳೊಂದಿಗೆ ಡ್ಯಾಂ ಪರಿಶೀಲನೆ ನಡೆಸಲಿದ್ದಾರೆ. ಡಿಕೆಶಿ ಜತೆಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯ ಸ್ವಾಮಿ, ಕ್ಷೇತ್ರದ ಶಾಸಕ ಎ.ಬಿ.ರಮೇಶ ಬಂಡಿಸಿದ್ದೇಗೌಡ ಸಹ ಉಪಸ್ಥಿತರಿರಲಿದ್ದಾರೆ. ಡ್ಯಾಂ ಪರಿಶೀಲನೆ ಬಳಿಕ ಡಿಕೆಶಿ, ರಾಯಲ್ ಆರ್ಕಿಡ್ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿಯನ್ನು ದ್ದೇಶಿಸಿ ಮಾತನಾಡಲಿದ್ದಾರೆ.

ಪಾಂಡವಪುರದಲ್ಲಿ ಗುರು ಪೂರ್ಣಿಮೆ ಆಚರಣೆ

ಪಾಂಡವಪುರ,ಜು.21– ಗುರು ಪೂರ್ಣಿಮೆ ಅಂಗವಾಗಿ ಪಟ್ಟಣದ ಬಿಜಿಎಸ್ ಶಿಕ್ಷಣ ಸಂಸ್ಥೆಯಲ್ಲಿ ಡಾ.ಬಾಲಗಂಗಾಧರನಾಥಸ್ವಾಮಿಗಳ ಪುತ್ಥಳಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಹೇಮಗಿರಿ ಶಾಖಾ ಮಠದ ಕಾರ್ಯದರ್ಶಿ ಡಾ.ಜೆ.ಎನ್. ರಾಮಕೃಷ್ಣೇಗೌಡ ನೇತೃತ್ವದಲ್ಲಿ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಅವರ ಪುತ್ಥಳಿಗೆ ವಿಶೇಷ ಅಭಿಷೇಕ ಹಾಗೂ ಪೂಜೆ ಸಲ್ಲಿಸಿದರು.

ಡಾ.ಜೆ.ಎನ್.ರಾಮಕೃಷ್ಣೇಗೌಡ ಮಾತನಾಡಿ, ಗುರು ಪೂರ್ಣಿಮೆಯ ಅಂಗವಾಗಿ ಗುರುಗಳಾದ ಡಾ.ಬಾಲಗಂಗಾಧರನಾಥ ಸ್ವಾಮೀಜಿಯವರ ಪುತ್ಥಳಿಗೆ ವಿಶೇಷ ಪೂಜೆ ಸಲ್ಲಿಸಲಾಗಿದೆ. ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಗುರುವಿನ ಪಾತ್ರ ಮಹತ್ತರದಾಗಿರುತ್ತದೆ. ಒಬ್ಬ ವ್ಯಕ್ತಿ ಜೀವನದಲ್ಲಿ ಯಶಸ್ಸು ಕಾಣಲು ಗುರುಗಳ ಆಶೀರ್ವಾದ ಪ್ರಮುಖವಾಗಿದೆ. ಮಕ್ಕಳು ಸಹ ಜೀವನದಲ್ಲಿ ಗುರುಗಳ ಬಗ್ಗೆ ಭಕ್ತಿ, ಗೌರವ ಪೂಜ್ಯನೀಯ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಇದೇ ವೇಳೆ ನಿವೃತ್ತ ಹೈಕೋರ್ಟ್ ನ್ಯಾಯಾಮೂರ್ತಿ ಶಿವಪ್ಪ ಅವರನ್ನು ಸನ್ಮಾನಿಸಲಾಯಿತು.



ಬಿಜಿಎಸ್ ಶಿಕ್ಷಣ ಸಂಸ್ಥೆಯಲ್ಲಿ ಡಾ.ಬಾಲಗಂಗಾಧರನಾಥ ಸ್ವಾಮಿಗಳ ಪುತ್ಥಳಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮನ್‌ಮುಲ್ ನಿರ್ದೇಶಕ ಕೆ.ರಾಮಚಂದ್ರು, ಎಸ್.ಎ.ಮಲ್ಲೇಶ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಚ್.ತ್ಯಾಗರಾಜು, ಬಿ.ಎಸ್.ಜಯರಾಮು, ಎಚ್.ಎನ್. ಮಂಜುನಾಥ್, ವಿಜಿಕುಮಾರ್, ಚಂದ್ರಶೇಖರಯ್ಯ, ಎಂ.ಗಿರೀಶ್, ದೀಪು, ಸಿ.ಆರ್. ರಮೇಶ್, ಸೇರಿದಂತೆ ಶಾಲಾ ಶಿಕ್ಷಕರು, ಸಿಬ್ಬಂದಿಗಳು ಇದ್ದರು.

ಒಂದನೇ ಪುಟದಿಂದ

ಇನ್ನೊಂದು ಅಡಿ ಮಾತ್ರ ಬಾಕಿ

ರಭಸಕ್ಕೆ ಜಲಾವೃತ್ತವಾಗುವ ಭೀತಿ ಎದುರಾಗಿದೆ. ಮಳೆಯಿಲ್ಲದೇ ಬರದಿಂದ ಕಂಗೆಟ್ಟಿದ್ದ ರೈತರಿಗೆ ಇದೀಗ ಅತಿವೃಷ್ಟಿಯ ಆತಂಕ ಎದುರಾಗಿದೆ.

ಪ್ರವಾಸಿ ತಾಣಗಳಲ್ಲಿ ನೀರಿಗಿಳಿಯಲು ನಿರ್ಬಂಧ: ಜಲಾಶಯದಿಂದ ಕಾವೇರಿ ನದಿಗೆ 50 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗುತ್ತಿರುವುದರಿಂದ ಕಾವೇರಿ ನದಿ ವ್ಯಾಪ್ತಿಯ ಪ್ರವಾಸಿ ತಾಣಗಳಲ್ಲಿ ಹೈ ಅಲರ್ಟ್ ಘೋಷಿಸಲಾಗಿದ್ದು, ಪ್ರವಾಸಿಗರು ನದಿಗೆ ಇಳಿಯುವುದನ್ನು ನಿರ್ಬಂಧಿಸಲಾಗಿದೆ. ಜೊತೆಗೆ ಹಲವೆಡೆ ಬೋಟಿಂಗ್‌ನ್ನು ಸಹ ಸ್ಥಗಿತಗೊಳಿಸಲಾಗಿದೆ. ಪ್ರವಾಸಿ ತಾಣಗಳಲ್ಲಿ ಹೆಚ್ಚಿನ ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು, ಪ್ರವಾಸಿಗರನ್ನು ನೀರಿನತ್ತ ತೆರಳದಂತೆ ಕ್ರಮ ವಹಿಸಲಾಗಿದೆ.

ಭಾನುವಾರವಾದ್ದರಿಂದ ಅದರಲ್ಲೂ ಕಾವೇರಿ ನದಿ ಉಕ್ಕಿ ಹರಿಯುತ್ತಿರುವುದರಿಂದ ಪ್ರವಾಸಿಗರ ಸಂಖ್ಯೆ ಪ್ರವಾಸಿ ತಾಣಗಳಲ್ಲಿ ಹೆಚ್ಚಾಗಿದ್ದು, ಶ್ರೀರಂಗಪಟ್ಟಣ ತಾಲೂಕಿನ ರಂಗನತಿಟ್ಟಿನಲ್ಲಿ ಬೋಟಿಂಗ್‌ನ್ನು ನಿನ್ನೆಯೇ ಸ್ಥಗಿತಗೊಳಿಸಲಾಗಿದ್ದು, ಇಂದು ಭಾನುವಾರ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬಂದರೂ ಸಹ ಪಕ್ಷಿ ವೀಕ್ಷಣೆಗಷ್ಟೇ ಅವಕಾಶ ನೀಡಲಾಗಿತ್ತು ಇನ್ನು ಬಲಮುರಿಯಲ್ಲೂ ಸಹ ನೀರಿನ ಬೋರ್ಗರೆತ ವೀಕ್ಷಿಸಲಷ್ಟೇ ಅವಕಾಶ ನೀಡಿದರೆ, ಶ್ರೀರಂಗಪಟ್ಟಣದ ಕಾವೇರಿ ಹಿನ್ನೀರು, ಸಂಗಮ, ಪಶ್ಚಿಮ ವಾಹಿನಿ, ಮಹದೇವಪುರ, ಮಂಡ್ಯ ಕೊಪ್ಪಲಿನಲ್ಲೂ ಕೇವಲ ವೀಕ್ಷಣೆಗಷ್ಟೇ ಅವಕಾಶ ನೀಡಿ, ನದಿಯತ್ತ ತೆರಳದಂತೆ ಬ್ಯಾರಿಕೇಟ್ ಅಳವಡಿಸಿ ನಿರ್ಬಂಧ ಹೇರಲಾಗಿತ್ತು.

ಪಾಂಡವಪುರ ತಾಲೂಕಿನ ಕೆರೆತೊಣ್ಣೂರು, ಕೆಆರ್‌ಎಸ್ ಹಿನ್ನೀರು, ವೇಣುಗೋಪಾಲಸ್ವಾಮಿ ದೇಗುಲ ಬಳಿಯ ಕಾವೇರಿ ನದಿಗೆ ಸಾವಿರಾರು ಮಂದಿ ಪ್ರವಾಸಿಗರು ಆಗಮಿಸಿದ್ದರಾದರೂ ಅಲ್ಲೂ ಸಹ ವೀಕ್ಷಣೆಗೆ ಅವಕಾಶ ನೀಡಿ, ನದಿಗಿಳಿಯದಂತೆ ಪ್ರವಾಸಿಗರನ್ನು ತಡೆಯಲಾಯಿತು. ಕೆ.ಆರ್.ಪೇಟೆಯ ಸೋಮನಹಳ್ಳಿ ಬಳಿ ಕಾವೇರಿ, ಲಕ್ಷ್ಮಣತೀರ್ಥ, ಹೇಮಾವತಿ ನದಿ ಸಂಗಮವಾಗುವ ಸ್ಥಳದಲ್ಲೂ ಸಹ ಪ್ರವಾಸಿಗರಿಗೆ ನಿರ್ಬಂಧ ಹೇರಲಾಗಿದೆ.

ಇನ್ನೂ ಮಳವಳ್ಳಿ ತಾಲ್ಲೂಕಿನ ಪ್ರಸಿದ್ಧ ಪ್ರವಾಸಿ ತಾಣವಾದ ಮುತ್ತತ್ತಿಯಲ್ಲಿ ಕಾವೇರಿ ನದಿಗೆ ಇಳಿಯದಂತೆ ಈಗಾಗಲೇ ಬ್ಯಾರಿಕೇಟ್ ಹಾಕಿ ಮೈಕ್‌ನಲ್ಲಿ ಸಾರಿ, ಅಗತ್ಯ ಮುಂಜಾಗೃತಾ ಕ್ರಮ ವಹಿಸಲಾಗಿದೆ. ಮುತ್ತತ್ತಿಯಲ್ಲಿ ನೀರಿನ ಸುಳಿಗೆ ಸಿಲುಕಿ ಹಲವು ಮಂದಿ ಪ್ರವಾಸಿಗರು ಹಾಗಾಗ್ಗೆ ಮೃತಪಡುವುದರಿಂದ ಇಲ್ಲಿ ವಿಶೇಷ ನಿಗಾ ವಹಿಸಲಾಗಿದೆ. ಇದಲ್ಲದೇ ಕರ್ನಾಟಕದ ನಯಾಗರಾ ಫಾಲ್ಸ್ ಎಂದೇ ಕರೆಯಲ್ಪಡುವ ಮಳವಳ್ಳಿಯ ಶಿಂಷಾದ ಗಗನಚುಕ್ಕಿ ಹಾಗೂ ಪಕ್ಕದ ಭರಚುಕ್ಕಿಯಲ್ಲಿ ಪ್ರವಾಸಿಗರನ್ನು ಕಣ್ಮನ ಸೆಳೆಯುವಂತೆ ನೀರಿನ ಬೋರ್ಗರೆತ ಹೆಚ್ಚಾಗಿದ್ದು, ಇಲ್ಲಿ ನೀರಿರುವ ಜಾಗಕ್ಕೆ ಪ್ರವಾಸಿಗರು ಹೋಗಲು ಸಾಧ್ಯವಿಲ್ಲವಾದರೂ ಸಾಹಸಕ್ಕೆ ಕೈ ಹಾಕುವ ಕೆಲ ಪ್ರವಾಸಿಗರು ಅಪಾಯಕ್ಕೆ ಸಿಲುಕಬಾರದೆಂಬ ಕಾರಣಕ್ಕೆ ಇಲ್ಲೂ ಸಹ ಹೆಚ್ಚಿನ ಭದ್ರತೆ ವಹಿಸಲಾಗಿದೆ.

ಮಳವಳ್ಳಿ ತಾಲೂಕಿನ ಹಲಗೂರು ಸಮೀಪದ ಗಾಣಾಳು ಫಾಲ್ಸ್‌ನಲ್ಲೂ ಅಗತ್ಯ ಮುಂಜಾಗೃತಾ ಕ್ರಮ ವಹಿಸಿದ್ದು, ಕಾವೇರಿ ಹಾಗೂ ಕಣ್ವಾ ನದಿಗಳಿಂದ ಹೆಚ್ಚಿನ ಪ್ರಮಾಣದ ನೀರು ಹರಿಯುತ್ತಿರುವುದರಿಂದ ಪ್ರವಾಸಿಗರು ಫಾಲ್ಸ್ ಬಳಿ ತೆರಳದಂತೆ ಕ್ರಮ ವಹಿಸಲಾಗಿದೆ. ಇದಲ್ಲದೇ ಪಕ್ಕದ ಕನಕಪುರ ತಾಲ್ಲೂಕಿನ ಸಂಗಮ, ಮೇಕೆದಾಟು ಹಾಗೂ ಹೊಗೇನಕಲ್‌ನಲ್ಲೂ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿರುವುದರಿಂದ ಕಾವೇರಿ ನದಿಗೆ ಜನರು ಇಳಿಯದಂತೆ ತಾಲೂಕು ಆಡಳಿತ ಕ್ರಮ ಕೈಗೊಂಡಿದೆ.

ದಿನಕ್ಕೆ 14 ಗಂಟೆ ಕೆಲಸ

ಕಾರ್ಮಿಕ ವರ್ಗದ ಮೇಲೆ ನಡೆದ ಇದುವರೆಗಿನ ಅತೀ ದೊಡ್ಡ ದಾಳಿ ಆಗಲಿದೆ ಎಂದು ಐಟಿ ಉದ್ಯೋಗಿಗಳ ಸಂಘ ಹೇಳಿದೆ. ಇದರ ಜೊತೆಗೆ ಪ್ರಸ್ತುತ ಅಸ್ತಿತ್ವದಲ್ಲಿರುವ ಮೂರು ಶಿಫ್ಟ್‌ಗಳ ವ್ಯವಸ್ಥೆಯ ಬದಲು ಕೇವಲ ಎರಡು ಶಿಫ್ಟ್‌ಗಳನ್ನು ಮಾತ್ರ ಜಾರಿಗೆ ತರಲು ಇದು ಐಟಿ ಸಂಸ್ಥೆಗಳಿಗೆ ಅವಕಾಶ ನೀಡುತ್ತದೆ ಹಾಗೂ ಹಾಗೆಯೇ 3ನೇ ಒಂದು ಭಾಗದಷ್ಟು ಉದ್ಯೋಗಿಗಳನ್ನು ಕೆಲಸದಿಂದ ತೆಗೆದು ಹಾಕಲಾಗುತ್ತದೆ ಎಂದು ಸಂಘ ಹೇಳಿದೆ. ರಾಜ್ಯದ ಕಾರ್ಮಿಕ ಸಚಿವ ಸಂತೋಷ್ ಲಾಡ್, ಐಟಿ ಸಂಸ್ಥೆಗಳು ಹಾಗೂ ಬಯೋಟೆಕ್ನಾಲಾಜಿ ಸಂಸ್ಥೆಗಳ ಅಧಿಕಾರಿಗಳು ಕಾರ್ಮಿಕ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದ ಈ ಸಭೆಯಲ್ಲಿ ಉದ್ಯೋಗಿಗಳ ಸಂಘದ ಸದಸ್ಯರು ಕೂಡ ಭಾಗಿಯಾಗಿದ್ದು, ಈ ರೀತಿಯ ಸುಧೀರ್ಘ ಅವಧಿಯ ಕೆಲಸದಿಂದ ಐಟಿ ಉದ್ಯೋಗಿಗಳ ಆರೋಗ್ಯದ ಮೇಲೆ ತೀವ್ರ ಪ್ರಭಾವ ಬೀರಲಿಸಿದೆ ಎಂದು ಸಲಹೆ ನೀಡಿದೆ ಎಂದು ಕೆಐಟಿಯು ಹೇಳಿದೆ.

ಕರ್ನಾಟಕದ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ವರದಿಯ ಪ್ರಕಾರ, ಐಟಿ ಸೆಕ್ಟರ್‌ನಲ್ಲಿ ಕೆಲಸ ಮಾಡುವ ಶೇಕಡಾ 45ರಷ್ಟು ಉದ್ಯೋಗಿಗಳು ಮಾನಸಿಕ ರೋಗ್ಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಹಾಗೆಯೇ ಶೇಕಡಾ 55ರಷ್ಟು ಜನ ದೈಹಿಕ ಆರೋಗ್ಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇದರ ಜೊತೆಗೆ ಕೆಲಸದ ಅವಧಿಯನ್ನು ಇನ್ನಷ್ಟು ಮುಂದುವರಿಸಿದಲ್ಲಿ ಇದು ಅವರ ಆರೋಗ್ಯ ಸ್ಥಿತಿಯನ್ನು ಮತ್ತಷ್ಟು ಬಿಗಾಡಾಯಿಸಲಿದೆ. ಡಬ್ಲ್ಯುಹೆಚ್‌ಓ ಐಎಲ್‌ಓ ಸ್ಟಡಿ ಪ್ರಕಾರ, ಕೆಲಸದ ಅವಧಿ ಹೆಚ್ಚು ಮಾಡುವುದರಿಂದ ಇದು ಸ್ಟ್ರೋಕ್(ಪಾರ್ಶ್ವವಾಯು) ಹಾಗೂ ಹೃದ್ರೋಗ, ಹೃದಯಾಘಾತದಂತಹ ಸಮಸ್ಯೆಯನ್ನು ಶೇಕಡಾ 35ರಷ್ಟು ಹೆಚ್ಚು ಮಾಡುತ್ತದೆ.

ಹೆಚ್ಚಿದ ಕೆಲಸದ ಸಮಯವು ಕೆಲಸದ ಸ್ಥಳದಲ್ಲಿ ಉತ್ಪಾದಕತೆಯ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತದೆ ಎಂಬುದನ್ನು ಅರಿತು ಹೆಚ್ಚಿನ ದೇಶಗಳು ಯಾವುದೇ ಉದ್ಯೋಗಿಯ ಮೂಲ ಹಕ್ಕನ್ನು ಕಡಿತಗೊಳಿಸದೇ ಅವರ ಹಕ್ಕನ್ನು ಸ್ವೀಕರಿಸುವಂತಹ ಹೊಸ ಕಾನೂನು ಗಳೊಂದಿಗೆ ಬರುತ್ತಿರುವ ಬೆನ್ನಲ್ಲೇ ಇತ್ತ ರಾಜ್ಯದಲ್ಲಿ ಕೆಲಸದ ಅವಧಿ ವಿಸ್ತರಿಸುವ ಕಾನೂನು ಜಾರಿಗೆ ಬರುತ್ತಿದೆ ಎಂದು ಐಟಿ ಉದ್ಯೋಗಿಗಳ ಯೂನಿಯನ್ ಹೇಳಿದೆ. ಅಲ್ಲದೇ ಕರ್ನಾಟಕ ರಾಜ್ಯದ ಐಟಿ ಉದ್ಯೋಗಿಗಳ ಸಂಘವೂ ಈ ವಿಚಾರವಾಗಿ ಮರು ಪರಿಶೀಲನೆ ಮಾಡುವಂತೆ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದೆ ಅಲ್ಲದೇ ಐಟಿ ಉದ್ಯೋಗಿಗಳ ಸಂಘವೂ ಕೂಡ ಐಟಿ ಸೆಕ್ಟರ್‌ನಲ್ಲಿ ಕೆಲಸ ಮಾಡುವ ಎಲ್ಲಾ ಉದ್ಯೋಗಿಗಳಿಗೆ ಈ ವಿಚಾರವಾಗಿ ಸಂಘಟಿತರಾಗಿ ಒಗ್ಗಟ್ಟಾಗಿ ಮುಂದೆ ಬಂದು ಇದನ್ನು ವಿರೋಧಿಸುವಂತೆ ಸೂಚಿಸಿದೆ.

ಮುಂಗಾರು ಅಧಿವೇಶನ

ವಿಶೇಷ ಸ್ಥಾನಮಾನಕ್ಕೆ ಪಟ್ಟು: ಸರ್ವಪಕ್ಷ ಸಭೆಯಲ್ಲಿ ಒಡಿಶಾ, ಬಿಹಾರ ಹಾಗೂ ಆಂಧ್ರಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡಬೇಕು ಎಂಬ ಕೂಗು ಕೇಳಿ ಬಂತು. ಬಿಹಾರ ಪರವಾಗಿ ಜೆಡಿಯು, ಎಲ್‌ಜೆಪಿ ಸಂಸದರು ಬೇಡಿಕೆ ಮುಂದಿಟ್ಟರೆ, ಆಂಧ್ರಪ್ರದೇಶ ಪರವಾಗಿ ವೈಎಸ್‌ಆರ್‌ಸಿಪಿ ಸಂಸದರು ಪ್ರಶ್ನೆ ಎತ್ತಿದರು. ಒಡಿಶಾಗೆ ವಿಶೇಷ ಸ್ಥಾನಮಾನ ನೀಡುವಂತೆ ಬಿಜೆಡಿ ಸಂಸದ ಸಸ್ಮಿತ್ ಪಾತ್ರಾ ಅಗ್ರಹಿಸಿದರು. ಮೂರು ರಾಜ್ಯಗಳ ಸಂಸದರ ವಿಶೇಷ ಆರ್ಥಿಕ ನೆರವು ನೀಡುವಂತೆ ಮನವಿ ಮಾಡಿದರು.

ಕನ್ವರ್ ಯಾತ್ರೆ ಕದನ: ಸಭೆಯಲ್ಲಿ ಉತ್ತರ ಪ್ರದೇಶ ಸರಕಾರದ ವಿವಾದಿತ ಕನ್ವರ್ ಯಾತ್ರೆ ಮಾರ್ಗದ ಮಾರ್ಗಸೂಚಿ ವಿಚಾರಗಳ ಬಗ್ಗೆ ಸಮಾಜವಾದಿ ಪಕ್ಷ ಹಾಗೂ ಆಮ್ ಆದ್ಮಿ ಪಕ್ಷಗಳು ಪ್ರಶ್ನೆ ಮಾಡಿದವು. ಊಟೋಪಾಚಾರದ ವಿಚಾರವಾಗಿ ಸರಕಾರ ಜಾರಿ ಮಾಡಿರುವ ಮಾರ್ಗಸೂಚಿ ಹಿಂಪಡೆಯುವಂತೆ ಒತ್ತಾಯಿಸಿದರು. ಅಧಿವೇಶನದಲ್ಲಿ ಈ ಬಗ್ಗೆ ಚರ್ಚೆಗೆ ಅವಕಾಶ ನೀಡುವಂತೆ ಮನವಿ ಮಾಡಿದರು.

ವಿಷಯುವಾರು ಚರ್ಚೆಗೆ ಆಗ್ರಹ: ಬೆಲೆ ಏರಿಕೆ, ಹಣದುಬ್ಬರ, ಗಡಿಯಲ್ಲಿನ ಸಂಘರ್ಷಗಳು, ನೀಟ್ ಅಕ್ರಮ, ಸಂಸತ್ ಆವರಣದಲ್ಲಿದ್ದ ಪ್ರತಿಮೆಗಳ ತೆರವು, ಮಣಿಪುರ ವಿಷಯ, ಸರಣಿ ರೈಲು ಅವಘಡಗಳು ಸೇರಿದಂತೆ ಪ್ರಮುಖ ವಿಚಾರಗಳ ಬಗ್ಗೆ ಚರ್ಚೆ ನಡೆಸಬೇಕು ಎಂದು ಪ್ರತಿಪಕ್ಷನಾಯಕರು ಆಗ್ರಹಿಸಿದರು.

19 ದಿನ ಕಲಾಪ, ಆರು ವಿಧೇಯಕ: ಜುಲೈ 22 ರಿಂದ ಆ.12 ರವರೆಗೆ ನಡೆಯಲಿರುವ ಅಧಿವೇಶನದಲ್ಲಿ 19 ದಿನ ಕಲಾಪ ನಡೆಯಲಿದೆ. ಆರು ವಿಧೇಯಕಗಳ ಮಂಡನೆ ಮಾಡಲಿರುವ ಸರಕಾರ, ಜಮ್ಮು ಮತ್ತು ಕಾಶ್ಮೀರದ ಆಯವ್ಯಯಕ್ಕೆ ಅಧಿವೇಶನದಲ್ಲಿ ಒಪ್ಪಿಗೆ ಪಡೆಯಲಿದೆ. 90 ವರ್ಷ ಹಳೆಯದಾದ 'ಏರ್‌ಕ್ರಾಫ್ಟ್ ಕಾಯಿದೆ'ಯನ್ನು ಬದಲಿಸುವ ಹೊಸ ವಿಧೇಯಕವನ್ನು ಸರಕಾರ ಮಂಡಿಸಲಿದೆ ಎಂದು ತಿಳಿದು ಬಂದಿದೆ.

ಕುಮಾರಸ್ವಾಮಿ ಘೋಷಣೆ

ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ಯಾರೂ ಮರೆಯುವಂತಿಲ್ಲ. ಎಲ್ಲರಿಗಿಂತ ಒಂದು ಹೆಜ್ಜೆ ಹೆಚ್ಚು ಅಭಿವೃದ್ಧಿ ಮಾಡಿದ್ದಾರೆ. ಬೆಂಗಳೂರಿನ ಮದರ್ ಡೈರಿ ಮೀರಿಸುವ ರೀತಿಯಲ್ಲಿ ಹಾಸನದಲ್ಲಿ ಮೆಗಾ ಡೈರಿ ನಿರ್ಮಾಣ ಮಾಡುತ್ತಿದ್ದಾರೆ. ರೈತರಿಗೆ ಆರ್ಥಿಕ ಶಕ್ತಿ ತುಂಬಲು ಮೆಗಾ ಡೈರಿ ಮಾಡುತ್ತಿದ್ದಾರೆ. ರೇವಣ್ಣ ಅವರ ನೇತೃತ್ವದಲ್ಲಿ, ಶಾಸಕರುಗಳನ್ನೊಳಗೊಂಡು ನಾನು ಸೇರಿದಂತೆ ಪಕ್ಷ ಸಂಘಟನೆ ಮಾಡುತ್ತೇವೆ. ಹಾಸನ ಜಿಲ್ಲೆಯ ಜನರ ಋಣವನ್ನು ತೀರಿಸುತ್ತೇವೆ ಎಂದು ತಿಳಿಸಿದರು.

ಹಾಸನ ಜಿಲ್ಲೆಯ ಜನತೆ ದೇವೇಗೌಡರಿಗೆ ಕೆಂಪುಕೋಟೆ ಮೇಲೆ ಬಾವುಟ ಹಾರಿಸುವ ಶಕ್ತಿ ಕೊಟ್ಟಿದ್ದಾರೆ. 60 ವರ್ಷಗಳ ಏಳು-ಬೀಳುಗಳಲ್ಲಿ ಅವರ ರಾಜಕೀಯ ಬೆಳವಣಿಗೆಗೆ ಪ್ರಮುಖ ಪಾತ್ರ ವಹಿಸಿರುವುದು ಹಾಸನ ಜಿಲ್ಲೆಯ ಜನ. ನಮ್ಮ ಬದುಕು ಇರುವವರೆಗೂ ನಾವು ಮರೆಯಲ್ಲ. ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ, ತಂದೆ ಹೆಚ್.ಡಿ. ದೇವೇಗೌಡ ಮತ್ತು ನನ್ನ ತಾಯಿ ಭಗವಂತನಲ್ಲಿ ಹೆಚ್ಚು ನಂಬಿಕೆ ಇಟ್ಟಿದ್ದಾರೆ, ಶಿವನನ್ನು ಆರಾಧಿಸುತ್ತಾರೆ. ಈ ಕುಟುಂಬವನ್ನು ಮುಗಿಸಲು ಹೊರಟಿದ್ದರು. ಆದರೆ ಆ ಭಗವಂತ ಎದುರಿಸುವ ಶಕ್ತಿ ಕೊಟ್ಟಿದ್ದಾನೆ ಎಂದು ಹೇಳಿದರು.

ತನಿಖೆ ಎದುರಿಸಲಿ

ಅದಕ್ಕೆ ಕಾವು ಕೊಡುತ್ತ ಬಂದಿದೆ. ಪಂಡಿತ ನೆಹರು ಅವರ ಕಾಲದಿಂದಲೂ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಹಗರಣ ನಡೆಯುತ್ತಲೇ ಬಂದಿವೆ ಎಂದು ದೂರಿದರು. ವಾಲ್ಮೀಕಿ ಅಭಿವೃದ್ಧಿ ನಿಗಮದ ವಿಚಾರವಾಗಿ ಸಿದ್ದರಾಮಯ್ಯ ಬಾಲಿಶವಾದ ಹೇಳಿಕೆ ಕೊಡುತ್ತಿದ್ದಾರೆ. ಒಂದು ವೇಳೆ ಅಧಿಕಾರಿಗಳೇ ಅಕ್ರಮ ಎಸಗಿದ್ದರೆ, ಸಚಿವರಾಗಿದ್ದ ಬಿ.ನಾಗೇಂದ್ರ ಅವರಿಂದ ರಾಜೀನಾಮೆ ಏಕೆ ಪಡೆದಿದ್ದೀರಿ? ನೀವು ತಪ್ಪೇ ಮಾಡಿರದಿದ್ದರೆ ಸಿಬಿಐ ತನಿಖೆಗೇಕೆ ಹೆದರುತ್ತಿದ್ದೀರಿ? ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಮಳೆಯಿಂದ ಹಾನಿಯಾದರೂ, ಸಂತ್ರಸ್ತರಿಗೆ ಕಾಂಗ್ರೆಸ್ ಸರ್ಕಾರ ಪರಿಹಾರ ಕೊಡುತ್ತಿಲ್ಲ. ಮನೆ ಬಿದ್ದರೆ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರ ರೂ. 5 ಲಕ್ಷ ಪರಿಹಾರ ಕೊಡುತ್ತಿತ್ತು. ಕಾಂಗ್ರೆಸ್‌ನವರು ಆ ಮೊತ್ತವನ್ನು ಈಗ 1 ಲಕ್ಷಕ್ಕೆ ಇಳಿಸಿದ್ದಾರೆ. ಮಳೆಯಿಂದ ಮನೆಗೆ ಹಾನಿಯಾದರೆ ನೀಡಲಾಗುತ್ತಿದ್ದ ಪರಿಹಾರವನ್ನು ಇಳಿಸಲಾಗಿದೆ ಎಂದು ಆರೋಪಿಸಿದರು.

ನೇಮಕ



ಮೈಸೂರು, ಜು. 20– ಭಾರತೀಯ ಜನತಾ ಪಾರ್ಟಿಯ ಸಹಕಾರ ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯರನ್ನಾಗಿ ಶ್ರೀನಿವಾಸ್ ಅವರನ್ನು ನೇಮಕ ಮಾಡಲಾಗಿದೆ.

ಸೆರೆ ಸಿಕ್ಕ 18 ತಿಂಗಳಲ್ಲೇ ದಸರಾಗೆ ಆಯ್ಕೆಯಾದ

'ಏಕಲವ್ಯ'



- 'ಮೂಡಿಗೆರೆಯ ಭೈರ'ನಾಗಿ ಮೂವರ ಸಾವಿಗೆ ಕಾರಣನಾಗಿದ್ದ
- ಕಡಿಮೆ ಅವಧಿಯಲ್ಲಿ ಪರಿವರ್ತನೆಗೊಂಡು ಅಚ್ಚರಿ
- ಭವಿಷ್ಯದಲ್ಲಿ ದಸರಾ ಮಹೋತ್ಸವದಲ್ಲಿ ಹೆಚ್ಚಿನ ಜವಾಬ್ದಾರಿ ನಿಭಾಯಿಸುವ ಭರವಸೆ

■ ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಜು.21– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗಿರುವ ಹೊಸ ಆನೆ 'ಏಕಲವ್ಯ' ತಯಾರಿ ರೋಚಕವಾಗಿದ್ದು, ಭವಿಷ್ಯದಲ್ಲಿ ದಸರಾ ಮಹೋತ್ಸವದಲ್ಲಿ ಮಹತ್ತರ ಜವಾಬ್ದಾರಿ ನಿಭಾಯಿಸುವ ಭರವಸೆ ಮೂಡಿಸಿದೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಆನೆಚೌಕೂರು ವಲಯದಲ್ಲಿರುವ ಮತ್ತಿಗೋಡು ಸಾಕಾನೆ ಶಿಬಿರದಲ್ಲಿ ರುವ 39 ವರ್ಷದ 'ಏಕಲವ್ಯ' ಈ ದಸರಾ ಮಹೋ ತ್ಸವದ ಆಕರ್ಷಣೀಯ ಕೇಂದ್ರಬಿಂದುವಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಆಲ್ದೂರು ಸುತ್ತಮುತ್ತಲಿನ ಪ್ರದೇಶದಲ್ಲಿ ಗ್ರಾಮಗಳಲ್ಲಿ ಉಪಟಳ ನೀಡುತ್ತಿದ್ದ 'ಮೂಡಿಗೆರೆ ಭೈರ' ಎಂದೇ ಸ್ಥಳೀಯರಿಂದ ಕರೆಸಿಕೊಳ್ಳುತ್ತಿದ್ದ. ಆದರೆ ಈಗ 'ಏಕಲವ್ಯ'ನಾಗಿ ಮಾರ್ಪಾಡಾಗಿ ಹೊಸ ಅಧ್ಯಾಯ ಬರೆಯಲು ಮುಂದಾ ಗಿದ್ದಾನೆ. ಮೊಟ್ಟ ಮೊದಲ ಬಾರಿಗೆ ದಸರಾ ಮಹೋ ತ್ಸವದಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗಿರುವ ಏಕಲವ್ಯ ಎಲ್ಲರ ಕೇಂದ್ರಬಿಂದುವಾಗಿ ಮಾರ್ಪಟ್ಟಿದೆ.

ಅಭಿಮನ್ಯು ಪಡೆಯಿಂದ ಕಾರ್ಯಾಚರಣೆ: ಸ್ಥಳೀಯರ ಒತ್ತಾಯಕ್ಕೆ ಮಣಿದ ಅರಣ್ಯ ಇಲಾಖೆ 2021ರ ಜ.25 ರಿಂದ ಮೂಡಿಗೆರೆಯ ಸುತ್ತ ಉಪಟಳ ನೀಡುತ್ತಿದ್ದ ಕಾಡಾನೆ ಸೆರೆ ಕಾರ್ಯಾಚರಣೆ ಆರಂಭಿಸಲಾಗಿತ್ತು. ದಸರಾ ಗಜಪಡೆ ನಾಯಕ ಅಭಿಮನ್ಯು, ಭೀಮ, ಧನಂಜಯ, ಪ್ರಶಾಂತ ಹಾಗೂ ಹರ್ಷನೊಂದಿಗೆ ಪಶು ವೈದ್ಯ ಡಾ.ರಮೇಶ ಹಾಗೂ ಇನ್ನಿತರರ ತಂಡ ಕಾರ್ಯಾಚರಣೆ ಆರಂಭಿಸಿತ್ತು. 6 ದಿನದಲ್ಲೇ ಭೈರ ನೊಂದಿಗೆ ಉಪಟಳ ನೀಡುತ್ತಿದ್ದ ಮತ್ತೊಂದು ಆನೆಯನ್ನು ಸೆರೆ ಹಿಡಿಯಲು ಮುಂದಾಗಿದ್ದ ಅರಣ್ಯ ಇಲಾಖೆಗೆ ಸ್ಥಳೀಯರು ವಿರೋಧ ವ್ಯಕ್ತಪಡಿಸಿ, ಭೈರನ ಸೆರೆಗೆ ಮಾತ್ರ ಒತ್ತಾಯಿಸಿದ್ದರು. ಮತ್ತೊಂದು ಆನೆಯಿಂದ ಯಾವುದೇ ತೊಂದರೆಯಾಗಿಲ್ಲ ಎಂದು ಪ್ರತಿಪಾದಿಸಿದ್ದರು.

ಕೊನೆಗೂ ಸೆರೆಯಾದ ಭೈರ: ಸ್ಥಳೀಯರ ಭಾವನೆಯನ್ನು ಗೌರವಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆ 'ಮೂಡಿಗೆರೆ ಭೈರ'ನ ಸೆರೆಗೆ ಟ್ರ್ಯಾಕ್ ಮಾಡಿ, 2022ರ ಫೆ.12ರಂದು ಮೂಡಿಗೆರೆ ಬಳಿ ಕಾರ್ಯಾ ಚರಣೆ ಆರಂಭಿಸಿದ ಅರಣ್ಯ ಇಲಾಖೆ, ಅರವಳಿಕೆ ಮದ್ದು ನೀಡಿ ಭೈರನ ಸೆರೆ ಹಿಡಿದಿತ್ತು. ಬಳಿಕ ಅದನ್ನು ಮತ್ತಿಗೋಡು ಕ್ಯಾಂಪ್‌ಗೆ ತಂದು ಕ್ರಾಲ್‌ನಲ್ಲಿಟ್ಟು ಪಳಗಿಸಲಾಗಿತ್ತು. ಸೆರೆ ಹಿಡಿದ ಒಂದೇ ವರ್ಷ ದೊಳಗೆ ಸೌಮ್ಯ ಸ್ವಭಾವಿಯಾಗಿ ಮಾರ್ಪಾಡಾದ ಮೂಡಿಗೆರೆ ಭೈರನಿಗೆ 'ಏಕಲವ್ಯ' ಎಂದು ನಾಮಕರಣ ಮಾಡಲಾಯಿತು. ಈಗಾಗಲೇ 8 ತಿಂಗಳ ಹಿಂದೆಯೇ ಕ್ರಾಲ್‌ನಿಂದ ಹೊರಗೆ ಬಂದಿರುವ ಮಾವುತ ಸೃಜನ್ ಹಾಗೂ ಎಸ್.ಇದಾಯತ್ ಆರೈಕೆಯಲ್ಲಿ ಪಳಗಿದೆ. ಹೇಳಿದಂತೆ ಕೇಳುವುದರೊಂದಿಗೆ ಮೃದು ಸ್ವಭಾವಿಯಾಗಿ ಮಾರ್ಪಟ್ಟಿದೆ. 18 ತಿಂಗಳ ಹಿಂದೆ ಕಾಡಾನೆ ಯಾಗಿದ್ದ ಆನೆ ಇದೀಗ ಸಾಕಾನೆಯಾಗಿ 'ಏಕಲವ್ಯ' ನಾಗಿ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗಿದೆ. ಹಳೆಯದನ್ನು ಮರೆತು ಹೊಸ ಅಧ್ಯಾಯ ಬರೆಯಲು ತವಕಿಸುತ್ತಿರುವ ಏಕಲವ್ಯ ಅಧಿಕಾರಿಗಳು ಮಾತ್ರವಲ್ಲದೆ, ಮತ್ತಿಗೋಡು ಕ್ಯಾಂಪ್ ನಲ್ಲಿರುವ ಎಲ್ಲಾ ಆನೆಗಳ ಮಾವುತ, ಕಾವಾಡಿಗಳ ಮೆಚ್ಚುಗೆಗೂ ಪಾತ್ರವಾಗಿದೆ. ಈ ಬಾರಿ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಮೊದಲ ತಂಡದಲ್ಲಿಯೇ ಕರೆತರಬೇಕೆಂದು ಏಕಲವ್ಯ ಆನೆಯನ್ನು ಗುರುತಿಸ ಲಾಗಿದೆ. ನಿರೀಕ್ಷೆಯಂತೆ ಮೊದಲ ತಂಡದಲ್ಲಿ ಆಗ ಮಿಸಿದರೆ, ಸುಮಾರು 50 ದಿನ ಮೈಸೂರು ಅರಮನೆ ಆವರಣದಲ್ಲಿ ಬೀಡುಬಿಡುವುದರೊಂದಿಗೆ ದಸರಾ ಮಹೋತ್ಸವದ ತರಬೇತಿ ಪಡೆಯುತ್ತದೆ. ಇಲ್ಲದಿದ್ದರೆ ಎರಡನೇ ತಂಡದಲ್ಲಿ ಬಂದರೂ ಮುಂಬರುವ ವರ್ಷದಲ್ಲಿ ದಸರಾ ಮಹೋತ್ಸವಕ್ಕೆ ಬೇಕಾದ ತರಬೇತಿ ಪಡೆಯಲು ಸಹಕಾರಿಯಾಗುತ್ತದೆ.



ಏಕಲವ್ಯನ ಬಯೋಡೇಟಾ

ಪ್ರಸ್ತುತ ಏಕಲವ್ಯನಿಗೆ 39 ವರ್ಷ ವಯಸ್ಸಾಗಿದೆ. 4,150 ಕೆಜಿ ತೂಕ, 2.83 ಮೀಟರ್ ಎತ್ತರ, 3.70 ಮೀಟರ್ ಉದ್ದವಿದೆ. ಸಮತಟ್ಟಾದ ಮೈ ಹೊಂದಿದ್ದು, ನಡಿಗೆಯಲ್ಲಿ ರಾಜಗಾಂಭೀರ್ಯವಿದೆ. ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲು ಬೇಕಾದ ಎಲ್ಲಾ ಅರ್ಹತೆ ಏಕಲವ್ಯನಿಗೆ ಇದೆ.

ಪ್ರವಾಹ ಸಂತ್ರಸ್ತರಿಗೆ ಶಾಶ್ವತ ಪರಿಹಾರ

• ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಭರವಸೆ • ಮಳೆ ಹಾನಿ ಪ್ರದೇಶಗಳಿಗೆ ಭೇಟಿ



ಮಡಿಕೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಳೆ ಹಾನಿ ಪ್ರದೇಶಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಭೇಟಿ ನೀಡಿ ಪರಿಶೀಲಿಸಿದರು.

ಮಡಿಕೇರಿ, ಜು.21–ಕೊಡಗಿನ ಪ್ರವಾಹ ಸಂತ್ರಸ್ತ ಕುಟುಂಬಗಳಿಗೆ ಮನೆ ನಿರ್ಮಾಣ ಹಾಗೂ ಜಂಬೂರು ಗ್ರಾಮದಲ್ಲಿ ಅಗತ್ಯ ಮೂಲಸೌಲಭ್ಯ ಸೇರಿದಂತೆ ಹಲವು ಯೋಜನೆಗಳಿಗೆ ಶಾಶ್ವತ ಪರಿಹಾರ ಒದಗಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಭರವಸೆ ನೀಡಿದರು.

ಮಡಿಕೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಳೆ ಹಾನಿ ಪ್ರದೇಶಗಳಿಗೆ ಭಾನುವಾರ ಭೇಟಿ ನೀಡಿ ಪರಿಶೀಲನೆ ನಡೆಸಿ, ಬಳಿಕ ಮುಕ್ಕೊಡ್ಲು, ಐಗೂರು, ಮಲ್ಲಳ್ಳಿ ಜಲಪಾತ ಬಳಿ ಸೇತುವೆ ಹಾನಿ ಹಾಗೂ ಇತರ ಹಾನಿ ಪ್ರದೇಶ ಹಾಗೂ ಮಾದಾಪುರ ಬಳಿಯ ಜಂಬೂರು ಗ್ರಾಮಕ್ಕೆ ಭೇಟಿ ನೀಡಿ ಅಲ್ಲಿನ ಜನರ ಕುಂದುಕೊರತೆ ಆಲಿಸಿ ಮಾತನಾಡಿದ ಸಚಿವರು, ಪ್ರಕೃತಿ ವಿಕೋಪ ಎದುರಿಸಲು ಜಿಲ್ಲಾಡಳಿತ ಸಜ್ಜಾಗಿದ್ದು, ಸರ್ಕಾರದಿಂದ ಎಲ್ಲಾ ನೆರವು ನೀಡಲಾಗುವುದು. ಮನೆ, ರಸ್ತೆ, ಸೇತುವೆ, ತಡೆಗೋಡೆ, ವಿದ್ಯುತ್ ಕಂಬ ಹಾಗೂ ಪರಿವರ್ತಕಗಳು, ಬೆಳೆ ಹಾನಿ ಸೇರಿದಂತೆ ಮಳೆಯಿಂದ ವಿವಿಧೆಡೆ ಹಾನಿಯಾಗಿದೆ. ಈ ನಷ್ಟದ ಅಂದಾಜು ಮಾಡಿ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರಿಗೆ ವರದಿ ನೀಡಿ ವಿಶೇಷ ಅನುದಾನ ಬಿಡುಗಡೆಗೆ ಪ್ರಯತ್ನಿಸಲಾಗುವುದು ಎಂದರು.

ಹಣದ ಕೊರತೆ ಇಲ್ಲ: ಪ್ರಕೃತಿ ವಿಕೋಪ ಎದುರಿಸಲು ಜಿಲ್ಲಾಡಳಿತ ಬಳಿ ಈಗಾಗಲೇ 30 ಕೋಟಿ ರೂ. ಇದೆ. ಪ್ರಕೃತಿ ವಿಕೋಪ ನಿರ್ವಹಣೆಗೆ ಹಣದ ಕೊರತೆ ಇಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

ಮನೆ ಹಾನಿ ಪ್ರಕರಣದಲ್ಲಿ ಎನ್‌ಡಿಆರ್‌ಎಫ್ ನಿರ್ದೇಶನದಂತೆ ಕ್ರಮ ವಹಿಸಲಾಗುತ್ತಿದೆ. ಸಂತ್ರಸ್ತರಿಗೆ ಯಾವುದೇ ತೊಂದರೆ ಆಗದಂತೆ ಗಮನ ಹರಿಸಲಾಗುವುದು. ಪ್ರಕೃತಿ ವಿಕೋಪ ಎದುರಿಸಲು ಈಗಾಗಲೇ ಎಲ್ಲಾ ಜಿಲ್ಲೆಗಳಿಗೆ ಸರ್ಕಾರ ಹೆಚ್ಚಿನ ಹಣ ಬಿಡುಗಡೆ ಮಾಡಿದೆ. ಇನ್ನೂ 200 ಕೋಟಿ ರೂ. ಬಿಡುಗಡೆ ಮಾಡಲಿದೆ. ವಿಧಾನಮಂಡಲ ಅಧಿವೇಶನ ನಡೆಯುತ್ತಿದ್ದು, ಜಿಲ್ಲೆಗೆ ಆಗಬೇಕಿರುವ ಕೆಲಸಗಳ ಕುರಿತು ಶಾಸಕರು ಹಾಗೂ ಅಧಿಕಾರಿಗಳ ಜತೆ ಚರ್ಚಿಸಿ, ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಹೇಳಿದರು.

ಶಾಸಕ ಡಾ.ಮಂತರ್‌ಗೌಡ ಮಾತನಾಡಿ, ಜಂಬೂರು ಗ್ರಾಮದ ನಿವಾಸಿಗಳಿಗೆ ಅಗತ್ಯ ಮೂಲಸೌಲಭ್ಯ ಕಲ್ಪಿಸಲಾಗುವುದು. ಜಂಬೂರಿನಲ್ಲಿ ವಿದ್ಯುತ್ ಉಪಕೇಂದ್ರ ನಿರ್ಮಿಸುತ್ತಿರುವುದರಿಂದ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಶೀಘ್ರ ಈ ಸಮಸ್ಯೆ ಪರಿಹರಿಸಲಾಗುವುದು. ಒಳಚರಂಡಿ ಕಾಮಗಾರಿ ಪೂರ್ಣಗೊಂಡಿಲ್ಲ. ಹಾಗಾಗಿ ಸಮಸ್ಯೆ ಆಗಿದ್ದು, ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಜಂಬೂರು ಗ್ರಾಮದಲ್ಲಿ ಇನ್ನೂ ಖಾಲಿ ಇರುವ ಮನೆ ಹಾಗೂ ಸಂತ್ರಸ್ತರಲ್ಲದವರೂ ವಾಸ ಮಾಡುತ್ತಿರುವ ಬಗ್ಗೆ ಗಮನ ಸೆಳೆದಾಗ ಈ ಸಂಬಂಧ ಉಪ ವಿಭಾಗಾಧಿಕಾರಿ ಫಲಾನುಭವಿಗಳ ಪಟ್ಟಿ ಪರಿಶೀಲಿಸಿ ವರದಿ ನೀಡಲಿದ್ದಾರೆ ಎಂದು ಶಾಸಕರು ಹೇಳಿದರು.

ಜಿಲ್ಲಾಧಿಕಾರಿ ವೆಂಕಟ್ ರಾಜಾ, ಮಳೆ ಹಾನಿ ಬಗ್ಗೆ ಮಾಹಿತಿ ನೀಡಿ, ಎನ್‌ಡಿಆರ್‌ಎಫ್ ನಿರ್ದೇಶನದಂತೆ ಸಂತ್ರಸ್ತರ ಬ್ಯಾಂಕ್ ಖಾತೆಗೆ ನೇರವಾಗಿ ಪರಿಹಾರ ಹಣ ಹಾಕಲಾಗುತ್ತದೆ ಎಂದರು.

ಇದೇ ವೇಳೆ ವಿಧಾನಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಉಪ ವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಮಡಿಕೇರಿ ಹಾಗೂ ಸೋಮವಾರಪೇಟೆ ತಹಸೀಲ್ದಾರ್‌ಗಳು, ಕಾಂಗ್ರೆಸ್ ಪ್ರಮುಖರಾದ ಎಂ.ಲಕ್ಷ್ಮಣ, ಕೆ.ಬಿ.ಶಾಂತಪ್ಪ, ಕೆ.ಎಂ.ಲೋಕೇಶ್, ಯಾಕುಬ್ ಮತ್ತಿತರರಿದ್ದರು.

ಕೊಡಗಿನ ಮಳೆ ಹಾನಿ ಸಮಗ್ರ ವರದಿ ನೀಡಲಿ

ಮಡಿಕೇರಿ: ಕೊಡಗಿನಲ್ಲಿ ಪ್ರವಾಹ ಮತ್ತು ಮಳೆ ಹಾನಿಗೆ ಸಂಬಂಧಿಸಿದಂತೆ ಜಿಲ್ಲಾಡಳಿತ ಮತ್ತು ವಿವಿಧ ಇಲಾಖೆಗಳಿಂದ ಸಮಗ್ರ ವರದಿ ಕೇಳಲಾಗಿದೆ. ಅಗತ್ಯವಿದ್ದಲ್ಲಿ ಜಿಲ್ಲೆಯ ಇಬ್ಬರು ಶಾಸಕರನ್ನೊಳಗೊಂಡು ಮುಖ್ಯಮಂತ್ರಿ ಬಳಿ ನಿಯೋಗ ತೆರಳಿ ವಿಶೇಷ ಅನುದಾನಕ್ಕೆ ಮನವಿ ಮಾಡುವುದಾಗಿ ಸಚಿವ ಎನ್.ಎಸ್.ಬೋಸ್ ರಾಜು ಹೇಳಿದರು.

ತಾಲೂಕಿನ ಮದೆನಾಡು ಸಮೀಪ ಗುಡ್ಡ ಕುಸಿತ ಸಾಧ್ಯತೆ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ ಮಾತನಾಡಿದ ಅವರು, ಜಿಲ್ಲೆಯ ವಿವಿಧೆಡೆ ಪ್ರವಾಹ, ಮನೆಗಳ ಹಾನಿ ಪರಿಶೀಲಿಸಲಾಗಿದೆ. ಈ ಬಾರಿ ಅಧಿಕ ಮಳೆಯಾಗಿರುವ ಕಾರಣ ಹಾನಿ ಸಂಭವಿಸಿದೆ. ಈ ಕುರಿತು ಜಿಲ್ಲಾಡಳಿತ ಮತ್ತು ವಿವಿಧ ಇಲಾಖೆಗಳಿಗೆ ಸಮಗ್ರ ವರದಿ ನೀಡುವಂತೆ ಸೂಚಿಸಲಾಗಿದೆ. ಜಿಲ್ಲಾಡಳಿತ ಬಳಿ ಅನುದಾನ ಲಭ್ಯವಿದೆ. ಅಗತ್ಯವಿದ್ದಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ವಿಶೇಷ ಅನುದಾನಕ್ಕೆ ಮನವಿ ಮಾಡಲಾಗುವುದು ಎಂದರು.

ಇದೇ ವೇಳೆ ಸಚಿವರು, ಗುಡ್ಡ ಕುಸಿತಕ್ಕೆ ಕಾರಣ, ಮುನ್ನೆಚ್ಚರಿಕೆ ಕ್ರಮ, ರಸ್ತೆ ಸಂಚಾರದ ಮಾರ್ಪಾಡು ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು. ಭೂ ಕುಸಿತದಿಂದ ಕೊಯನಾಡು ಸರ್ಕಾರಿ ಶಾಲಾ ಕಟ್ಟಡಕ್ಕೆ ಆಗಿರುವ ಹಾನಿ ಪರಿಶೀಲಿಸಿದರು. ಶಾಲೆಯ ಮಕ್ಕಳ ಸಂಖ್ಯೆ, ಕಟ್ಟಡದ ಹಾನಿ ಕುರಿತು ಶಿಕ್ಷಣಾಧಿಕಾರಿಗಳು ಮತ್ತು ಶಿಕ್ಷಕರಿಂದ ಮಾಹಿತಿ ಪಡೆದರು. ಇದೇ ವೇಳೆ ತಹಸೀಲ್ದಾರ್ ಪ್ರವೀಣ್, ಸ್ಥಳೀಯ ಗ್ರಾಪಂ ಅಧ್ಯಕ್ಷರು, ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

ಜನ–ಜಾನುವಾರು ರಕ್ಷಣೆಗೆ ಡಿಸಿ ಸೂಚನೆ

ಮಡಿಕೇರಿ, ಜು.21–ಕೊಡಗಿನಲ್ಲಿ ವರುಣನ ಆರ್ಭಟ ಮುಂದುವರಿದಿದ್ದು, ಜನ–ಜಾನುವಾರು ಹಾಗೂ ಸಾರ್ವಜನಿಕರ ಆಸ್ತಿ ರಕ್ಷಣೆಗೆ ಮುಂದಾಗುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚಿಸಿದರು.

ಪ್ರಕೃತಿ ವಿಕೋಪ ನಿರ್ವಹಣೆ ಸಂಬಂಧ ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಿ ಮಾತನಾಡಿದ ಅವರು, ಇನ್ನೂ 2–3 ದಿನ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ. ಆದ್ದರಿಂದ ನಿಯೋಜಿಸಿರುವ ನೋಡಲ್ ಅಧಿಕಾರಿಗಳು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಅಗತ್ಯ ಮುನ್ನೆಚ್ಚರ ವಹಿಸಬೇಕು. ಅಧಿಕಾರಿಗಳು ನಿಷ್ಠೆಯಿಂದ ಕಾರ್ಯ ನಿರ್ವಹಿಸಬೇಕು. ಜಿಲ್ಲೆಯ 103 ಗ್ರಾಪಂ ವ್ಯಾಪ್ತಿಯಲ್ಲಿ ಟಾಸ್ಕ್‌ಫೋರ್ಸ್ ಸಮಿತಿ ರಚಿಸಿ ಪ್ರವಾಹ, ಬರೆಕುಸಿತ ಮತ್ತಿತರ ಪ್ರದೇಶಗಳಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಇದೇ ವೇಳೆ ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರೊಂದಿಗೆ ನಡೆದ ವಿಡಿಯೋ ಸಂವಾದದಲ್ಲಿ ಪಾಲ್ಗೊಂಡ ಜಿಲ್ಲಾಧಿಕಾರಿ, ಕೊಡಗಿನ ಪ್ರಕೃತಿ ವಿಕೋಪ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. ಜಿಲ್ಲಾ ಎಸ್‌ಪಿ ಕೆ.ರಾಮರಾಜನ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸತೀಶ್ ಕುಮಾರ್, ತಾಪಂ ಇಓಗಳಾದ ಶೇಖರ್, ಅಪ್ಪಣ್ಣ, ತಹಸೀಲ್ದಾರ್‌ಗಳಾದ ಪ್ರವೀಣ್ ಕುಮಾರ್, ಕಿರಣ್‌ಗೌರಯ್ಯ, ರಾಮಚಂದ್ರ, ಸಾರಿಗೆ ಅಧಿಕಾರಿ ನಾಗರಾಜಾಚಾರಿ, ಡಿಡಿಪಿಐ ರಂಗಧಾಮಪ್ಪ ಭಾಗವಹಿಸಿದ್ದರು.

ಜು.24, ವಿರಾಜಪೇಟೆಯಲ್ಲಿ ಜನಜಾಗೃತಿ

ಮಡಿಕೇರಿ, ಜು.21–ಸಿದ್ದಾಪುರದ 2400 ಎಕರೆ ಕಾಫಿ ತೋಟ ಸೇರಿದಂತೆ ಕೊಡಗು ಜಿಲ್ಲೆಯ ವಿವಿಧೆಡೆ ನಡೆಯುತ್ತಿರುವ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿಯನ್ನು ಸ್ಥಗಿತಗೊಳಿಸಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ ಜು.24ರಂದು ವಿರಾಜಪೇಟೆ ಗಡಿಯಾರ ಕಂಬದ ಬಳಿ ಜನಜಾಗೃತಿ ಮಾನವ ಸರಪಳಿ ಕಾರ್ಯಕ್ರಮ ನಡೆಯಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.



ಎನ್.ಯು.ನಾಚಪ್ಪ

ಅಂದು ಬೆಳಗ್ಗೆ 10.30ಕ್ಕೆ ಮಾನವ ಸರಪಳಿ ನಿರ್ಮಿಸಿ, ಬೃಹತ್ ಭೂ ಪರಿವರ್ತನೆ ವಿರೋಧಿಸಿ ಹಕ್ಕೊತ್ತಾಯ ಮಂಡಿಸಲಾಗುವುದು. ಕೊಡವರ ಹಕ್ಕುಗಳನ್ನು ರಕ್ಷಿಸಲು 'ಕೊಡವ ಲ್ಯಾಂಡ್' ಸ್ವಯಂ ನಿರ್ಣಯದ ಭೂ ರಾಜಕೀಯ ಸ್ವಾಯತ್ತತೆ ಘೋಷಣೆ ಮತ್ತು ಎಸ್‌ಟಿ ಟ್ಯಾಗ್ ಅಗತ್ಯವಾಗಿದೆ. ಇದಕ್ಕಾಗಿ ಜನಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂಲಸೌಕರ್ಯ ಕಲ್ಪಿಸಲು ಸೂಚನೆ

ಕುಶಾಲನಗರ, ಜು.21– ತಾಲೂಕಿನ ಶಿರಂಗಾಲ, ತೊರೆನೂರು, ಹೆಬ್ಬಾಲೆ ವ್ಯಾಪ್ತಿಯ ಪ್ರವಾಹ ಪೀಡಿತ ಪ್ರದೇಶಗಳಿಗೆ ಶಾಸಕ ಡಾ.ಮಂತರ್‌ಗೌಡ ಭೇಟಿ ನೀಡಿ, ಸಂತ್ರಸ್ತ ಕುಟುಂಬಗಳಿಗೆ ಧೈರ್ಯ ತುಂಬಿದರು.

ಮನೆ ಕಳೆದುಕೊಂಡ ಸಂತ್ರಸ್ತರಿಗೆ ಅಗತ್ಯ ಮೂಲ ಸೌಕರ್ಯ ಹಾಗೂ ಪರ್ಯಾಯವಾಗಿ ವಾಸಿಸಲು ತಕ್ಷಣ ಸೌಕರ್ಯ ಕಲ್ಪಿಸಲು ಅಧಿಕಾರಿಗಳಿಗೆ ಸೂಚಿಸಿದರು.

ನಂತರ ಕೂಡಿಗೆ, ಕೂಡುಮಂಗಳೂರು, ಮಾದಪಟ್ಟಣ, ಅತ್ತೂರು, ಗುಡ್ಡೆಹೊಸೂರು, ನಂಜರಾಯಪಟ್ಟಣ ಗ್ರಾಮಗಳಲ್ಲಿ ಹಾನಿ ಮನೆಗಳನ್ನು ವೀಕ್ಷಣೆ ಮಾಡಿದರು. ತಹಸೀಲ್ದಾರ್ ಕಿರಣ್ ಗೌರಯ್ಯ, ಡಿವೈಎಸ್ಪಿ ಗಂಗಾಧರ್, ಪುರಸಭೆ ಮುಖ್ಯಾಧಿಕಾರಿ ಕೃಷ್ಣಪ್ರಸಾದ್, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ಕೆಪಿಸಿಸಿ ಸದಸ್ಯರಾದ ಮಂಜುನಾಥ್ ಗುಂಡೂರಾವ್, ಕಂದಾಯ ನಿರೀಕ್ಷಕ ಸಂತೋಷ್, ಪಿಡಿಓ ಹೇಮಲತಾ, ಅಧಿಕಾರಿಗಳು ಇದ್ದರು.

ರಾಜಕಾಲುವೆ ಒತ್ತುವರಿ ತೆರವುಗೊಳಿಸಿ

ಅಧಿಕಾರಿಗಳಿಗೆ ಸಚಿವ ಬೋಸರಾಜು ಸೂಚನೆ

ವಿರಾಜಪೇಟೆ, ಜು.21–ವಿರಾಜಪೇಟೆ ಪುರಸಭೆ ವ್ಯಾಪ್ತಿಯ ವಿವಿಧೆಡೆ ರಾಜಕಾಲುವೆ ಒತ್ತುವರಿ ಮಾಡಿ ಕಟ್ಟಡ ನಿರ್ಮಿಸಿರುವರಿಗೆ ಕೂಡಲೇ ನೋಟಿಸ್ ನೀಡಿ, ಒತ್ತುವರಿ ತೆರವುಗೊಳಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ಮಳೆ ಹಾನಿ ಪ್ರದೇಶಗಳಿಗೆ ಶಾಸಕ ಎ.ಎಸ್.ಪೊನ್ನಣ್ಣ ಮತ್ತು ಪುರಸಭೆ ಸದಸ್ಯರು, ಅಧಿಕಾರಿಗಳೊಂದಿಗೆ ಭೇಟಿ ನೀಡಿ ಮಾತನಾಡಿದ ಅವರು, ಮೊಗರಗಲ್ಲಿ ರಸ್ತೆಯ ರಾಜಕಾಲುವೆ ಚರಂಡಿಗಳ ಮೇಲೆ ಕೆಲವರು ಕಟ್ಟಡ ನಿರ್ಮಿಸಿದ್ದಾರೆ. ಅಂತಹವರಿಗೆ ನೋಟಿಸ್ ನೀಡಿ, ರಾಜಕಾಲುವೆ ಒತ್ತುವರಿ ತೆರವುಗೊಳಿಸಬೇಕು ಎಂದು ಪುರಸಭೆ ಅಧಿಕಾರಿಗಳಿಗೆ ಆದೇಶಿಸಿದರು.

ಪಟ್ಟಣದ ಮಟನ್ ಮಾರ್ಕೆಟ್ ಬಳಿಯ ಮುಖ್ಯ ರಸ್ತೆಯಲ್ಲಿ ಮಳೆ ನೀರು ತುಂಬಿ ವಾಹನ ಸವಾರರು ಪ್ರತಿವರ್ಷ ಪರದಾಡುವಂತಾಗುತ್ತದೆ. ಶಾಂತಿ ನಗರದಲ್ಲಿ ಕಿರಿದಾದ ಚರಂಡಿಗಳಲ್ಲಿ ನೀರು ಸರಾಗವಾಗಿ ಹೋಗಲು ಸ್ವಚ್ಛಗೊಳಿಸಬೇಕು ಎಂದರು.

ನಂತರ ಕೊಡಗು ದಂತ ವೈದ್ಯಕೀಯ ಕಾಲೇಜು ಬಳಿ ರಸ್ತೆಬದಿ ಕುಸಿದ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಇದೇ ವೇಳೆ ಸುಂಕದಕಟ್ಟೆ ನಿವಾಸಿ ಜನಾರ್ಧನ, ತಮ್ಮ ಮನೆ ಬಳಿ ಬರೆ ಕುಸಿದಿರುವುದರಿಂದ ತಡೆಗೋಡೆ ನಿರ್ಮಿಸುವಂತೆ ಸಚಿವರಿಗೆ ಮನವಿ ಸಲ್ಲಿಸಿದರು.



ವಿರಾಜಪೇಟೆ ಮೊಗರಗಲ್ಲಿ ರಸ್ತೆಯ ರಾಜಕಾಲುವೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು ಪರಿಶೀಲಿಸಿದರು. ಶಾಸಕ ಎ.ಎಸ್.ಪೊನ್ನಣ್ಣ, ಪುರಸಭೆ ಸದಸ್ಯರು, ಅಧಿಕಾರಿಗಳು ಇದ್ದರು.

ಇದಕ್ಕೆ ಉತ್ತರಿಸಿದ ಸಚಿವರು, ಬೆಟ್ಟ ಪ್ರದೇಶದ ನಿವಾಸಿಗಳಿಗೆ ಪುನರ್ವಸತಿ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರಕ್ಕೆ ಅಧಿಕಾರಿಗಳು ಪ್ರಸ್ತಾವನೆ ಕಳುಹಿಸಿದರೆ, ಸದ್ಯದಲ್ಲೇ ಪುನರ್ವಸತಿ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ಈಗಾಗಲೇ ಪುನರ್ವಸತಿಗೆ ಜಾಗ ಗುರುತಿಸಲಾಗಿದೆ. ನದಿ ತೀರ ಹಾಗೂ ಗುಡ್ಡ ಪ್ರದೇಶದ ನಿವಾಸಿಗಳಿಗೆ ಯಾವುದೇ ಸಮಸ್ಯೆಗಳಾಗದ ರೀತಿ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳಲಾಗುವುದು. ಹಾನಿಯಾದ ರಸ್ತೆಗಳನ್ನು ಶೀಘ್ರ ಕಾಮಗಾರಿ ನಡೆಸಲಾಗುವುದು ಎಂದರು.

ಇದೇ ವೇಳೆ ಜಿಲ್ಲಾಧಿಕಾರಿ ವೆಂಕಟರಾಜ್, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಎಸ್ಪಿ ರಾಮರಾಜನ್, ತಹಸೀಲ್ದಾರ್ ರಾಮಚಂದ್ರ, ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್, ಕಂದಾಯ ಪರಿವೀಕ್ಷಕ ಎಂ.ಹರೀಶ್, ಕಾಂಗ್ರೆಸ್ ನಗರಾಧ್ಯಕ್ಷ ಮಾದಂಡ ತಿಮ್ಮಯ್ಯ, ಮುಖಂಡರಾದ ಲಕ್ಷ್ಮಣ, ಕೆ.ಬಿ.ಶಾಂತಪ್ಪ, ಧರ್ಮಜ ಉತ್ತಪ್ಪ, ವಕೀಲ ನರೇಂದ್ರ ಕಾಮತ್, ಪುರಸಭೆ ಸದಸ್ಯರಾದ ಡಿ.ಪಿ.ರಾಜೇಶ್, ಎಸ್.ಹೆಚ್.ಮತೀನ್, ಮಹ್ಮದ್ ರಾಫಿ, ಎಂ.ಕೆ.ದೇಚಮ್ಮ, ರಜನಿಕಾಂತ್, ಕೆ.ಸಿ.ಶಭರೀಶ್, ಪಸಿಯ ತಬಸುಂ, ಸಬಸೀನ್ ಬೇನ್ನಿ, ಜಲೀಲ್, ಅಧಿಕಾರಿಗಳು ಹಾಜರಿದ್ದರು.

ಪತ್ರಕರ್ತರ ಭವನ ಮುಂದುವರಿದ ಕಾಮಗಾರಿಗೆ 10 ಲಕ್ಷ

• ಶಾಸಕ ಸಿ.ಪುಟ್ಟರಂಗಶೆಟ್ಟಿ ಘೋಷಣೆ • ಪತ್ರಿಕಾ ದಿನಾಚರಣೆ, ದತ್ತಿ ಪ್ರಶಸ್ತಿ ಪ್ರದಾನ

ಚಾಮರಾಜನಗರ, ಜು.21–ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದ ಮುಂದುವರೆದ ಕಾಮಗಾರಿಗೆ ಶಾಸಕರ ನಿಧಿಯಿಂದ 10 ಲಕ್ಷ ರೂ. ನೀಡುವುದಾಗಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಘೋಷಿಸಿದರು.

ನಗರದ ವರ್ತಕರ ಭವನದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ನಡೆದ ಪತ್ರಿಕಾ ದಿನಾಚರಣೆ ಹಾಗೂ ದತ್ತಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಿವೇಶನ ನೀಡುವಂತೆ ಜಿಲ್ಲೆಯ ಪತ್ರಕರ್ತರ ಬಹಳ ದಿನಗಳ ಬೇಡಿಕೆಯಾಗಿದೆ. ಇದನ್ನು ಈಡೇರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಈಗಾಗಲೇ ಜಿಲ್ಲಾಧಿಕಾರಿಗೆ ಸೂಚನೆ ನೀಡಿದ್ದೇನೆ. ಕ್ಷೇತ್ರದಲ್ಲಿ ಬಡವರಿಗೆ ಒಂದು ಸಾವಿರಕ್ಕೂ ನಿವೇಶನ ಕೊಡಿಸುವ ಚಿಂತನೆ ಮಾಡಲಾಗಿದೆ. ಜಿಲ್ಲಾ ಕೇಂದ್ರದಲ್ಲಿ ಒಳಚರಂಡಿ ಮುಂದುವರೆದ ಕಾಮಗಾರಿಗೆ 42 ಕೋಟಿ ರೂ. ಹಾಗೂ ನೂತನ ಸರ್ಕಾರಿ ಬಸ್ ನಿಲ್ದಾಣಕ್ಕೆ 120 ಕೋಟಿ ರೂ. ಬಿಡುಗಡೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಚಾಮರಾಜನಗರದಲ್ಲಿ ಉತ್ತಮ ಪತ್ರಕರ್ತರು ಇದ್ದಾರೆ. ಸ್ವಾಭಿಮಾನದ ಪತ್ರಿಕೋದ್ಯಮದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಚಾಮರಾಜನಗರ ಕ್ಷೇತ್ರದ ಸಮಸ್ಯೆಗಳ ಕುರಿತು ಬೆಳಕು ಚೆಲ್ಲಿ, ಜಿಲ್ಲೆಯ ಅಭಿವೃದ್ಧಿಗೆ ಸಹ ಕಾರಣೀಭೂತರಾಗಿದ್ದಾರೆ. ನಾನು ನಾಲ್ಕನೇ ಬಾರಿ ಶಾಸಕನಾಗಲು ಪತ್ರಕರ್ತರ ಸೇವೆಯು ಇದೆ. ಕ್ಷೇತ್ರದ ಅಭಿವೃದ್ಧಿಯಲ್ಲಿ ವಸ್ತುನಿಷ್ಠೆ ವರದಿಗಳನ್ನು ಮಾಡುತ್ತಿದ್ದಾರೆ. ಸಮಾಜಕ್ಕೆ ಪತ್ರಕರ್ತರ ಸೇವೆ ಅತ್ಯಗತ್ಯವಾಗಿದೆ. ನಮ್ಮನ್ನು ಎಚ್ಚರಿಸುವ ಕೆಲಸವನ್ನು ಪತ್ರಕರ್ತರು ಸದಾ ಮಾಡುತ್ತಿದ್ದಾರೆ ಎಂದು ತಿಳಿಸಿದರು.



ಚಾಮರಾಜನಗರದ ವರ್ತಕರ ಭವನದಲ್ಲಿ ನಡೆದ ಪತ್ರಿಕಾ ದಿನಾಚರಣೆಯಲ್ಲಿ ಪತ್ರಕರ್ತರಿಗೆ ವಿವಿಧ ದತ್ತಿ ಪ್ರಶಸ್ತಿ ನೀಡಲಾಯಿತು.

ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ಪತ್ರಕರ್ತರು ವಿಶ್ವಾಸಾರ್ಹತೆ ಉಳಿಕೊಂಡು ಹೋಗುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ಸಾಮಾಜಿಕ ಹಾಗೂ ದೃಶ್ಯ ಮಾಧ್ಯಮಗಳಿಗಿಂತ ಮುದ್ರಣ ಮಾಧ್ಯಮ ಇನ್ನು ಹೆಚ್ಚಿನ ವಿಶ್ವಾಸ ಉಳಿಸಿಕೊಂಡಿದೆ. ಜನರಲ್ಲಿ ಇನ್ನು ಸಹ ಪತ್ರಿಕೆಗಳ ಬಗ್ಗೆ ಗೌರವ ಹೆಚ್ಚಾಗುತ್ತಿದೆ. ಈ ನಿಟ್ಟಿನಲ್ಲಿ ಮುದ್ರಣ ಮಾಧ್ಯಮ ಮತ್ತಷ್ಟು ಹೆಚ್ಚು ಪ್ರಚಲಿತವಾಗಲಿದೆ ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಧ್ಯಮ ಸ್ನೇಹಿಯಾಗಿದ್ದು, ಬಹಳಷ್ಟು ಪತ್ರಕರ್ತರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದಾರೆ. ಗ್ರಾಮೀಣ ಪತ್ರಕರ್ತರಿಗೆ ಬಸ್‌ಪಾಸ್ ಕಲ್ಪಿಸಲು ಬಜೆಟ್‌ನಲ್ಲಿ ಘೋಷಿಸಿದ್ದಾರೆ. ವಿವಿಧ ಜಿಲ್ಲೆಗಳ ಪತ್ರಕರ್ತರ ಭವನಗಳ ನಿರ್ಮಾಣಕ್ಕೆ ಹೆಚ್ಚಿನ ಒತ್ತು ನೀಡುತ್ತಿದ್ದಾರೆ ಎಂದರು.

ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಲ್ಲೆಯ ಪತ್ರಕರ್ತರಿಗೆ ಈಗಾಗಲೇ ನಿವೇಶನಕ್ಕಾಗಿ ಜಾಗ ಗುರುತಿಸಲಾಗಿದೆ. ಆದರೆ, ಕೆಲ ಸಮಸ್ಯೆಯಿಂದಾಗಿ ವಿಳಂಬವಾಗುತ್ತಿದೆ. 15 ದಿನಗಳೊಳಗೆ ಸರ್ಕಾರಕ್ಕೆ ಅಂತಿಮ ವರದಿ ಸಲ್ಲಿಸಿ, ನಿವೇಶನ ಕೊಡಿಸುವುದಾಗಿ ತಿಳಿಸಿದರು.

ಪತ್ರಕರ್ತ ಶಿವಕುಮಾರ್ ಬೆಳ್ಳಿತಟ್ಟೆ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ದೇವರಾಜ್ ಕಪ್ಪಸೋಗೆ ಅಧ್ಯಕ್ಷತೆ ಮಾತನಾಡಿದರು. ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯದರ್ಶಿ ಸೋಮಶೇಖರ್ ಕೆರೆಗೋಡು, ವರ್ತಕರ ಸಂಘದ ಅಧ್ಯಕ್ಷ ಎಚ್.ಬಿ.ರಾಜಶೇಖರ್, ರಾಜ್ಯ ಪರಿಷತ್ ಸದಸ್ಯ ಗೂಳಿಪುರ ನಂದೀಶ್ ಉಪಸ್ಥಿತರಿದ್ದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್ ಸ್ವಾಗತಿಸಿದರು. ಕೆ.ಎಸ್.ಬನಶಂಕರ ಆರಾಧ್ಯ ನಿರೂಪಿಸಿದರು.

ದತ್ತಿ ಪ್ರಶಸ್ತಿ ಪ್ರದಾನ: ಕಾರ್ಯಕ್ರಮದಲ್ಲಿ ಪತ್ರಕರ್ತರಿಗೆ ವಿವಿಧ ದತ್ತಿ ಪ್ರಶಸ್ತಿ ನೀಡಲಾಯಿತು. ಎಸ್ಪಿ ಡಾ.ಬಿ.ಟಿ.ಕವಿತಾ ಪತ್ರಕರ್ತರು ಹಾಗೂ ಕುಟುಂಬದವರಿಗೆ ಬಹುಮಾನ ವಿತರಿಸಿದರು.

ಸಚಿವ ಸೋಮಣ್ಣಗೆ ಅಭಿನಂದನೆ...



ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಅವರ ಹುಟ್ಟುಹಬ್ಬದ ಅಂಗವಾಗಿ ಅವರನ್ನು ಬಿಜೆಪಿ ಮುಖಂಡರು ಅಭಿನಂದಿಸಿದರು. ಎಸ್.ಪಿ.ಮಧು, ಆಲನಹಳ್ಳಿ ಮಹದೇವಸ್ವಾಮಿ, ಜೇಮಾರಳ್ಳಿ ಕೆ.ಜೈಶಂಕರ್, ಎನ್.ರವಿಶಂಕರ್, ಬಿಲ್ವ ಮಹೇಶ್, ದೇವನೂರು ಪ್ರತಾಪ್, ವಿಶ್ವನಾಥ್ ಮುಡಗೂರು ಸುನೀಲ್, ಶರತ್ ಪುಟ್ಟಬುದ್ಧಿ, ಖಂಡೇಶ್ ಇದ್ದರು.

ಮಹದೇವಕುಮಾರ್ ಚಿಕ್ಕಾಟಿ ಗ್ರಾಪಂ ಅಧ್ಯಕ್ಷ



ಚಿಕ್ಕಾಟಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಆಯ್ಕೆಯಾದ ಮಹದೇವಕುಮಾರ್ ಅವರನ್ನು ಅಭಿನಂದಿಸಲಾಯಿತು.

ಚಿಕ್ಕಾಟಿ, ಜು.21–ಗುಂಡ್ಲುಪೇಟೆ ತಾಲೂಕಿನ ಚಿಕ್ಕಾಟಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಮಹದೇವ ಕುಮಾರ್ ಆಯ್ಕೆಯಾದರು.

ಒಟ್ಟು 15 ಸದಸ್ಯರು ಇರುವ ಗ್ರಾಪಂ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ನಾಲ್ವರು ಸ್ಪರ್ಧಿಸಿದ್ದರು. ಈ ಪೈಕಿ ಮಹದೇವ ಕುಮಾರ್‌ಗೆ 8, ರಾಚಪ್ಪಗೆ 7 ಮತ ಲಭಿಸಿದರೆ, ಉಳಿದ ಜಯಣ್ಣ ಮತ್ತು ವೆಂಕಟ ನಾಯಕ ಅವರು ಶೂನ್ಯ ಮತ ಗಳಿಸಿದರು. ಉಪಾಧ್ಯಕ್ಷರಾಗಿ ಹೆಚ್.ಎನ್.ಭಾಗ್ಯ ಅವಿರೋಧವಾಗಿ ಆಯ್ಕೆಯಾದರು. ಇದೇ ವೇಳೆ ಗ್ರಾಪಂ ಸದಸ್ಯರಾದ ಸಿ.ಎಸ್.ಶಿವಣ್ಣ, ಪದ್ಮಾ, ಮಾಜಿ ಅಧ್ಯಕ್ಷರಾದ ಬಸವರಾಜು, ಮಹದೇವನಾಯಕ, ವರದ ನಾಯಕ ಇದ್ದರು.

ಹುಟ್ಟುಹಬ್ಬ ಆಚರಣೆ...



55ನೇ ಹುಟ್ಟುಹಬ್ಬ ಆಚರಿಸಿಕೊಂಡ ಉದ್ಯಮಿ ಎನ್. ಶ್ರೀಕಂಠಮೂರ್ತಿ ಅವರನ್ನು ಕೊತ್ತಲವಾಡಿ ಕುಮಾರ್, ಸಂತೋಷ್, ಕುಮಾರ್, ಅನಿಲ್, ಗುರು, ಕುಮಾರ್, ಸುಚೇಂದ್ರ ಸನ್ಮಾನಿಸಿದರು.

ರಾಜ್ಯ ಸಮ್ಮೇಳನ ಲೋಗೋ ಬಿಡುಗಡೆ...



ಚಾಮರಾಜನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ನಡೆದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಸೆ.8ರಂದು ಚಿತ್ರದುರ್ಗದಲ್ಲಿ ನಡೆಯುವ ಪತ್ರಿಕಾ ವಿತರಕರ ರಾಜ್ಯ ಸಮ್ಮೇಳನ ಲೋಗೋವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಬಿಡುಗಡೆಗೊಳಿಸಿದರು. ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವನಂದ ತಗಡೂರು, ಜಿಲ್ಲಾಧಿಕಾರಿ ಶಿಲ್ಪನಾಗ್, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ. ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ದೇವರಾಜು ಕಪ್ಪಸೋಗೆ, ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್, ಬೆಂಗಳೂರು ಪ್ರೆಸ್‌ಕ್ಲಬ್ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಬೆಳ್ಳಿತಟ್ಟೆ, ಜಿಲ್ಲಾ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಸಿ.ಪುರುಷೋತ್ತಮ್, ಪ್ರಧಾನ ಕಾರ್ಯದರ್ಶಿ ಎನ್.ಅಕ್ಷಯ್, ಗೌರವಾಧ್ಯಕ್ಷ ಎಚ್.ಎಸ್.ಚಂದ್ರಶೇಖರ್, ನಿರ್ದೇಶಕರಾದ ಆರ್.ಎನ್.ಸಿದ್ದಲಿಂಗಸ್ವಾಮಿ, ಎಂ. ರೇಣುಕೇಶ್, ಎಂ.ಲಿಂಗಪ್ಪ ಇದ್ದರು.

ಉಪ್ಪಿನಮೋಳೆ ರಸ್ತೆ ಕೆಸರುಮಯ



ಯಳಂದೂರು, ಜು.21–ಶಾಸಕ ಪುಟ್ಟರಂಗಶೆಟ್ಟಿ ಸ್ವಗ್ರಾಮ ತಾಲೂಕಿನ ಉಪ್ಪಿನಮೋಳೆ ಮುಖ್ಯರಸ್ತೆ ಮಳೆಯಿಂದ ಕೆಸರುಮಯವಾಗಿದ್ದು, ವಾಹನ ಹಾಗೂ ಜನರ ಸಂಚಾರಕ್ಕೆ ತೊಂದರೆಯಾಗಿದೆ.

ಯಳಂದೂರು–ಬಿಳಿಗಿರಿರಂಗನಬೆಟ್ಟ ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುವ ಗ್ರಾಮದ ಈ ರಸ್ತೆ ಸಂಪೂರ್ಣವಾಗಿ ಹಾಳಾಗಿದೆ. ಎರಡು ಮೂರು ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ಮತ್ತಷ್ಟು ಹಾಳಾಗಿದೆ. ಇದರಿಂದ ಗ್ರಾಮದ ಜನರು ಓಡಾಡಲು ಭಯ ಪಡುವಂತಹ ಸ್ಥಿತಿ ನಿರ್ಮಾಣವಾಗಿದೆ.

ಸ್ವಲ್ಪ ಎಚ್ಚರ ತಪ್ಪಿದರು ಬೈಕ್ ಸವಾರರು ಬಿದ್ದು ಪೆಟ್ಟಾಗಲಿದೆ. ಮಳೆಗಾಲದಲ್ಲಿ ಕೆಸರುಮಯವಾಗುವ ಈ ರಸ್ತೆಯಲ್ಲಿ ತಿರುಗಾಡಲು ತೊಂದರೆಯಾಗುತ್ತಿದೆ. ಆದ್ದರಿಂದ ಸ್ಥಳೀಯ ಜನಪ್ರತಿನಿಧಿಗಳು ಸಂಬಂಧಪಟ್ಟ ಅಧಿಕಾರಿಗಳು ಇತ್ತಕಡೆ ಗಮನಹರಿಸಿ ರಸ್ತೆ ಸರಿಪಡಿಬೇಕು ಎಂದು ಉಪ್ಪಿನಮೋಳೆ ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಹೊಸಪುರದಲ್ಲಿ ಮಳೆಗೆ ಮನೆ ಗೋಡೆ ಕುಸಿತ

ಬೇಗೂರು, ಜು.21–ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ಹೊಸಪುರ ಗ್ರಾಮದಲ್ಲಿ ಮಳೆಗೆ ಮನೆ ಗೋಡೆ ಕುಸಿದಿದೆ.

ಹೊಸಪುರ ಗ್ರಾಮದ ಮಹದೇವಯ್ಯ ಅವರ ಮನೆ ಗೋಡೆ ಕುಸಿದು ಬಿದ್ದು, ಛಾವಣಿ ಗಾಳಿಗೆ ಹಾರಿಹೋಗಿದೆ. ಇದರಿಂದ ಮನೆಯಲ್ಲಿದ್ದ ದವಸ–ಧಾನ್ಯ, ಪೀಠೋಪಕರಣಗಳಿಗೆ ಹಾನಿಯಾಗಿದೆ.

ಮಹದೇವಯ್ಯಗೆ ವಾಸಿಸಲು ಮನೆ ಇಲ್ಲದಂತಾಗಿ, ಜೀವನ ನಡೆಸಲು ಕಷ್ಟಕರವಾಗಿದೆ. ಆದ್ದರಿಂದ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲಿಸಿ, ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.



ಬೇಗೂರು ಸಮೀಪದ ಹೊಸಪುರ ಗ್ರಾಮದಲ್ಲಿ ಮಳೆಗೆ ಮನೆ ಗೋಡೆ ಕುಸಿದಿರುವುದು.

ಮೈಸೂರು ಮಿತ್ರ

ಸೋಮವಾರ 22 ಜುಲೈ 2024

ಕಬಿನಿಯಿಂದ ತಮಿಳುನಾಡಿಗೆ 25 ಟಿಎಂಸಿ ನೀರು ಬಿಡುಗಡೆ

ಶಾಸಕ ಅನಿಲ್ ಮಾಹಿತಿ



ಕಬಿನಿ ಜಲಾಶಯಕ್ಕೆ ಶಾಸಕ ಅನಿಲ್ ಭೇಟಿ ನೀಡಿ ವೀಕ್ಷಿಸಿದರು.

ಹೆಚ್.ಡಿ.ಕೋಟೆ, ಜು.21– ಕಬಿನಿ ಜಲಾಶಯದಿಂದ ತಮಿಳುನಾಡಿಗೆ ಈವರೆಗೆ 25 ಟಿಎಂಸಿ ನೀರು ಬಿಡುಗಡೆ ಮಾಡಲಾಗಿದೆ ಎಂದು ಶಾಸಕ ಅನಿಲ್ ತಿಳಿಸಿದರು.

ತಾಲೂಕಿನ ಕಬಿನಿ ಜಲಾಶಯಕ್ಕೆ ಭೇಟಿ ನೀಡಿ ವೀಕ್ಷಣೆ ಮಾಡಿ ಮಾತನಾಡಿದ ಅವರು, ರಾಜ್ಯದಲ್ಲೇ ಮೊಟ್ಟ ಮೊದಲು ಭರ್ತಿಯಾಗುವ ಜಲಾಶಯ ಎಂದೇ ಹೆಸರಾಗಿರುವ ಕಬಿನಿ ಜಲಾಶಯ ಜುಲೈ ಮೊದಲ ವಾರ ಭರ್ತಿಯಾಗಿದೆ. ಹೀಗಾಗಿ ತಮಿಳುನಾಡಿಗೆ ಕಾವೇರಿ ಜಲಾನಯನ ಪ್ರದೇಶದಿಂದ ಜುಲೈ ತಿಂಗಳ ನೀರಿನ ಪೈಕಿ ಕಬಿನಿ ಜಲಾಶಯ ಒಂದರಲ್ಲೇ 25 ಟಿಎಂಸಿ ನೀರನ್ನು ಬಿಡುವ ಮೂಲಕ ರಾಜ್ಯದ ಗೌರವವನ್ನು ಕಾಪಾಡಲಾಗಿದೆ ಎಂದರು.

ಕಬಿನಿ ಜಲಾಶಯಕ್ಕೆ ಮುಖ್ಯಮಂತ್ರಿಗಳು ಬಾಗಿನ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜು.27ರಂದು ಕಬಿನಿ ಜಲಾಶಯಕ್ಕೆ ಆಗಮಿಸಿ ಬಾಗಿನ ಅರ್ಪಿಸಲಿದ್ದಾರೆ ಎಂದ ಅವರು ಈ ವೇಳೆ ಕೆಆರ್‌ಎಸ್ ಮಾದರಿ ಜಲಾಶಯದ ಮುಂಭಾಗ ಉದ್ಯಾನವನ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಗುವುದು ಎಂದರು. ಕಬಿನಿ ಜಲಾಶಯ ನಿರ್ಮಾಣವಾಗಿ 50 ವರ್ಷ ತುಂಬಿದ ಹಿನ್ನಲೆಯಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ಕಬಿನಿ ಉತ್ಸವ ನಡೆಸಲಾಗುವುದು. ಜಲಾಶಯ ಮತ್ತು ನಾಲ್ಕು ಕ್ರಸ್ಟ್ ಗೇಟ್‌ಗಳಿಂದ ನೀರು ಬೀಳುತ್ತಿರುವ ಜಾಗಕ್ಕೆ ಶಾಶ್ವತ ದೀಪಾಲಂಕಾರ ಮಾಡಲು ಕ್ರಮ ವಹಿಸಲಾಗುವುದು ಎಂದರು. ಇನ್ನೂ 6 ತಿಂಗಳೊಳಗೆ ಜಲಾಶಯದ ಮುಂಭಾಗದ ಸೇತುವೆ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದ ಅವರು, ಪ್ರವಾಹದಿಂದ ಜಲಾಶಯದ ಮುಂಭಾಗ ವಾಸಿಸುವ ಮನೆಗಳು ಮುಳುಗಡೆಯಾಗಿ ನಿರಾಶ್ರಿತರಾದ 47 ಕುಟುಂಬಗಳಿಗೆ ಈಗಾಗಲೇ ನಿವೇಶನ ನೀಡಲಾಗಿದೆ. ಇದೀಗ ಅವರಿಗೆ ಮನೆ ಕಟ್ಟಿಕೊಡಲು ಕ್ರಮ ವಹಿಸಲಾಗುತ್ತದೆ ಎಂದರು.

ಇದೇ ಸಂದರ್ಭ ಕೇರಳಕ್ಕೆ ದೋಣಿ ಮೂಲಕ ತೆರಳುವುದನ್ನು ಸಂಪೂರ್ಣ ಬಂದ್ ಮಾಡಿರುವ ಜಾಗ ಪರಿಶೀಲಿಸಿದರು. ತಹಸೀಲ್ದಾರ್ ಶ್ರೀನಿವಾಸ್, ಇಓ ಧರಣೇಶ್, ಎಸಿಎಫ್ ರಂಗಸ್ವಾಮಿ, ಆರ್‌ಎಫ್‌ಓ ಮಧು, ನೀರಾವರಿ ಅಧಿಕಾರಿ ಇಇ ಚಂದ್ರಶೇಖರ್, ಎಇಇ ಗಣೇಶ್, ಗೋವಿಂದನಾಯಕ, ಬೋರೇಗೌಡ, ಚಂದುಕುಮಾರ್, ಜಯರಾಮ್, ಮಂಜುನಾಥ್, ಶ್ರೀಧರ್, ಮಹೇಶ್, ಎಸ್‌ಐ ಚಂದ್ರಹಾಸ, ವಿಎ ಗೌಸ್, ಗ್ರಾಪಂ ಅಧ್ಯಕ್ಷ ಸುಬ್ರಮಣಿ, ಸದಸ್ಯರಾದ ವೆಂಕಟೇಗೌಡ, ಪುರುಷೋತ್ತಮ್, ಮುಖಂಡರಾದ ಸತೀಶ್‌ಗೌಡ, ಹೆಚ್.ಸಿ.ನರಸಿಂಹಮೂರ್ತಿ, ಮಧುಕುಮಾರ್, ಚಿಕ್ಕವೀರ ನಾಯಕ, ಶಂಭುಲಿಂಗ ನಾಯಕ, ಅಶೋಕ್, ಅಂಕಪ್ಪ ತಿರುಪತಿ, ನಂದಿನಿ ಅಬ್ದುಲ್ ಇದ್ದರು.

ಡಿ.ಬಿ.ಕುಪ್ಪೆ ನಿರಾಶ್ರಿತರ ಕಾಳಜಿ ಕೇಂದ್ರಕ್ಕೆ

ಮೂಲ ಸೌಕರ್ಯ ಒದಗಿಸದಿದ್ದರೆ ಸೂಕ್ತ ಕ್ರಮ

ಅಧಿಕಾರಿಗಳಿಗೆ ಶಾಸಕ ಅನಿಲ್ ಎಚ್ಚರಿಕೆ



ಡಿ.ಬಿ.ಕುಪ್ಪೆ ಗ್ರಾಮದ ನಿರಾಶ್ರಿತರ ಕಾಳಜಿ ಕೇಂದ್ರವನ್ನು ಶಾಸಕ ಅನಿಲ್ ಪರಿಶೀಲಿಸಿದರು.

ಹೆಚ್.ಡಿ.ಕೋಟೆ, ಜು.21– ಇನ್ನೇರಡು ದಿನಗಳಲ್ಲಿ ನಿರಾಶ್ರಿತರ ಕಾಳಜಿ ಕೇಂದ್ರಕ್ಕೆ ಮೂಲ ಸೌಕರ್ಯ ಒದಗಿಸದಿದ್ದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳಿಗೆ ಶಾಸಕ ಅನಿಲ್ ಎಚ್ಚರಿಕೆ ನೀಡಿದರು.

ತಾಲೂಕಿನ ಕೇರಳ ಗಡಿ ಭಾಗ ಡಿ.ಬಿ.ಕುಪ್ಪೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ತೆರೆಯಲಾಗಿರುವ ನಿರಾಶ್ರಿತರ ಕಾಳಜಿ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾತನಾಡಿದ ಅವರು, ಕಾಳಜಿ ಕೇಂದ್ರ ಎಂದು ಬೋರ್ಡ್ ಹಾಕಿಕೊಂಡರೆ ಯಾರು ಬರುವುದಿಲ್ಲ. ಎಲ್ಲಾ ತಯಾರಿ ಮಾಡಿಕೊಂಡಾಗ ಮಾತ್ರ ನಿರಾಶ್ರಿತರು ಬರಲು ಸಾಧ್ಯ ಎಂದು ಅಧಿಕಾರಿಗಳಿಗೆ ತರಾಟೆ ತೆಗೆದುಕೊಂಡರು.

ಇಲ್ಲಿ ಚಾಪೆ ಇಲ್ಲ, ದಿಂಬಿಲ್ಲ, ಹೊದಿಕೆ ಇಲ್ಲ, ನೀರಿಗೆ ಒಂದು ಲೋಟವಿಲ್ಲ, ಹೀಗಿದ್ದಾಗ ಕಾಳಜಿ ಕೇಂದ್ರ ಎಂದು ಹೇಗೆ ಹೇಳುವುದು. ಇಲ್ಲಿನ ಸಿಬ್ಬಂದಿ ಕೊಠಡಿ ತೆರೆದರೆ ಮಾತ್ರ ಕಾಳಜಿ ಕೇಂದ್ರ ಎಂದು ಅಂದುಕೊಂಡಿದ್ದೀರಾ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದ ಅವರು ಇನ್ನೆರಡು ದಿನಗಳಲ್ಲಿ ಕಾಳಜಿ ಕೇಂದ್ರಕ್ಕೆ ಮೂಲ ಸೌಕರ್ಯ ಒದಗಿಸದಿದ್ದಲ್ಲಿ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗುವುದು ಎಂದರು.

ಗ್ರಾಮಸ್ಥರ ದೂರು: ಇದೇ ವೇಳೆ ಡಿ.ಬಿ.ಕುಪ್ಪೆ ಗ್ರಾಮಸ್ಥರು ಆರೋಗ್ಯ ಇಲಾಖೆ ನಮಗೆ ಸ್ಪಂದಿಸುತ್ತಿಲ್ಲ. ಡೆಂಗ್ಯೂ ಸಂಬಂಧ ಯಾವುದೇ ಜಾಗೃತಿ ಮೂಡಿಸಿಲ್ಲ. ಗ್ರಾಮದ ಸ್ವಚ್ಛತೆ ಬಗ್ಗೆ ಯಾರು ಗಮನ ಹರಿಸುತ್ತಿಲ್ಲ. ನಾವು ಗಡಿಭಾಗದಲ್ಲಿದ್ದೇವೆ ಎಂದು ನಮ್ಮನ್ನು ಕಡೆಗಣಿಸುತ್ತಿದ್ದಾರೆ. ಪಡಿತರ ಆಹಾರ ಬಂದರೂ ನೀಡುತ್ತಿಲ್ಲ. ತಿಂಗಳ ಕೊನೆ 3 ದಿನ ಮಾತ್ರ ಆಹಾರ ಪದಾರ್ಥ ನೀಡುತ್ತಿದ್ದು, ಅಲ್ಲಿವರೆಗೂ ನಾವು ಕಾಯಬೇಕು. ಗ್ರಾಪಂ ಆಡಳಿತ ನಮಗೆ ಸ್ಪಂದಿಸುತ್ತಿಲ್ಲ. ವಿದ್ಯುತ್ ಸಮಸ್ಯೆ ಇರುವುದರಿಂದ ನಮಗೆ ಸೀಮೆಎಣ್ಣೆ ನೀಡಬೇಕು. ಇತ್ಯಾದಿ ಸಮಸ್ಯೆಗಳ ಬಗ್ಗೆ ಶಾಸಕರ ಗಮನಕ್ಕೆ ತಂದರು.

ಈ ವೇಳೆ ಮಾತನಾಡಿದ ಶಾಸಕ ಅನಿಲ್, ಗ್ರಾಮದಲ್ಲಿ ಶೇ.60ರಷ್ಟು ಅಭಿವೃದ್ಧಿ ಕಾಮಗಾರಿ ಮಾಡಿದ್ದೇವೆ. ಇನ್ನುಳಿದ ಅಭಿವೃದ್ಧಿ ಕೆಲಸಗಳನ್ನು ಮುಂದಿನ ದಿನಗಳಲ್ಲಿ ಮಾಡಲಾಗುವುದು. ಇಲ್ಲಿನ ಸಮಸ್ಯೆಗಳನ್ನು ನಿವಾರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ ಅವರು ಈ ಭಾಗದಲ್ಲಿ ಹಕ್ಕುಪತ್ರ ವಿತರಣೆ ಕಾರ್ಯ ಪ್ರಗತಿಯಲ್ಲಿದ್ದು, ಮುಂದಿನ ದಿನಗಳಲ್ಲಿ ಅದರ ಬಗ್ಗೆಯೂ ಸಹ ಗಮನಹರಿಸುತ್ತೇನೆ ಎಂದರು. ಇದೇ ಸಂದರ್ಭ ನದಿ ಪ್ರವಾಹದಿಂದ ಮುಳುಗಡೆಯಾಗಿದ್ದ ಮನೆಗಳನ್ನು ವೀಕ್ಷಿಸಿದರು.

ಆಕಸ್ಮಿಕ ಬೆಂಕಿಗೆ ತಂಬಾಕು ಬ್ಯಾರನ್ ಭಸ್ಮ



ತಂಬಾಕು ಹದಗೊಳಿಸುವ ಬ್ಯಾರನ್‌ಗೆ ಬೆಂಕಿ ಬಿದ್ದಿರುವುದು

ಹಿರೀಕ್ಯಾತನಹಳ್ಳಿ, ಜು.21– ಆಕಸ್ಮಿಕ ಬೆಂಕಿ ಬಿದ್ದು ತಂಬಾಕು ಹದ ಮಾಡುವ ಬ್ಯಾರನ್ ಸಂಪೂರ್ಣ ಸುಟ್ಟು ಹೋಗಿರುವ ಘಟನೆ ಇಲ್ಲಿಗೆ ಸಮೀಪದ ಹರವೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಕುಚಲೇಗೌಡರಿಗೆ ಸೇರಿದ ತಂಬಾಕು ಬ್ಯಾರನ್ ಸುಟ್ಟು ಹೋಗಿರುವುದು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹುಣಸೂರು ಅಗ್ನಿಶಾಮಕ ಠಾಣೆ ಸಿಬ್ಬಂದಿ ಬೆಂಕಿ ನಂದಿಸುವ ಮೂಲಕ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ.

ನಂ.ಗೂಡು ಲಯನ್ಸ್ ಕ್ಲಬ್ ಅಧ್ಯಕ್ಷ, ಕಾರ್ಯದರ್ಶಿ ಅಧಿಕಾರ ಸ್ವೀಕಾರ



ನಂಜನಗೂಡಲ್ಲಿ ಲಯನ್ಸ್ ಅಧ್ಯಕ್ಷ, ಕಾರ್ಯದರ್ಶಿ ಪದಗ್ರಹಣ ಕಾರ್ಯಕ್ರಮ ನಡೆಯಿತು.

ನಂಜನಗೂಡು, ಜು.21– ನಗರದ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಎಸ್.ಮಹದೇವ, ಕಾರ್ಯದರ್ಶಿಯಾಗಿ ಹೆಚ್.ಜೆ.ವರದ ನಾಯಕ ಅಧಿಕಾರ ಸ್ವೀಕರಿಸಿದರು.

ನಗರದ ಮಹದೇಶ್ವರ ಸಭಾಂಗಣದಲ್ಲಿ ನಡೆದ ಪದಗ್ರಹಣ ಸಮಾರಂಭದಲ್ಲಿ ಲಯನ್ಸ್ ಸಂಸ್ಥೆ ಜಿಲ್ಲಾ ರಾಜ್ಯಪಾಲ ಡಾ.ಪಿ.ಆರ್.ಎಸ್.ಚೇತನ್ ಅವರು ನಿರ್ಗಮಿತ ಅಧ್ಯಕ್ಷ ಗೋಪಾಲಕೃಷ್ಣ ಅವರಿಂದ ಪದಕ ಪಡೆದು ನೂತನ ಅಧ್ಯಕ್ಷರಿಗೆ ವಿತರಿಸುವ ಮೂಲಕ ಅಧಿಕಾರ ಹಸ್ತಾಂತರಿಸಿದರು.

ನೂತನ ಅಧ್ಯಕ್ಷ ಎಸ್.ಮಹದೇವ ಮಾತನಾಡಿ, ಲಯನ್ಸ್ ಸಂಸ್ಥೆ ಕಳೆದ 5 ದಶಕಗಳಿಂದ ಸೇವಾ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಮೂಲಕ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರವಾಗಿದೆ. ನನ್ನ ಅಧಿಕಾರಾವಧಿಯಲ್ಲಿ ಲಯನ್ಸ್ ಸಂಸ್ಥೆ ಘನತೆಯನ್ನು ಇನ್ನಷ್ಟು ಹೆಚ್ಚಿಸುವ ಸೇವಾ ಕಾರ್ಯಕ್ರಮ ರೂಪಿಸುತ್ತೇನೆ. ಮುಖ್ಯವಾಗಿ ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯ ಒದಗಿಸುವ ಜೊತೆಗೆ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗುವ ಕಾರ್ಯಕ್ರಮ ರೂಪಿಸುತ್ತೇನೆ. ಜೊತೆಗೆ ಆರೋಗ್ಯ ಅರಿವು, ಆರೋಗ್ಯ ಶಿಬಿರ ಆಯೋಜನೆ, ಕ್ಯಾನ್ಸರ್ ಜಾಗೃತಿ ಮೂಡಿಸುವಂತಹ ಕಾರ್ಯಕ್ರಮ ರೂಪಿಸುವ ಧ್ಯೇಯ ಹೊಂದಿದ್ದೇನೆ. ಅಲ್ಲದೆ ಮುಖ್ಯವಾಗಿ ಹಸಿವು ಮುಕ್ತ ಸಮಾಜ ನಿರ್ಮಾಣ ಮಾಡಲು ಶಕ್ತಿ ಮೀರಿ ದುಡಿಯುತ್ತೇನೆ. ಪ್ರಮುಖವಾಗಿ ಪರಿಸರ ಸಂರಕ್ಷಣೆ, ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದರು.

ಜಿಲ್ಲಾ ರಾಜ್ಯಪಾಲ ಡಾ.ಪಿ.ಆರ್.ಎಸ್.ಚೇತನ್ ಮಾತನಾಡಿ, ಸಾಮಾನ್ಯ ಕುಟುಂಬದಿಂದ ಬಂದ ನನ್ನಂತವರು ಜನಸೇವೆ ಮಾಡಲು ಲಯನ್ಸ್ ಅವಕಾಶ ಕಲ್ಪಿಸಿದೆ. ಲಯನ್ಸ್‌ಕ್ಲಬ್ ನಾಯಕತ್ವ ಗುಣ ಬೆಳೆಸುತ್ತದೆ. ಪ್ರಪಂಚದಾದ್ಯಂತ ಲಯನ್ಸ್ ಮಾಡಿರುವ ಸೇವೆಯನ್ನು ಯಾವುದೇ ಸರ್ಕಾರ ಮಾಡಲು ಸಾಧ್ಯವಿಲ್ಲ. ರಕ್ತನಿಧಿ, ಆರೋಗ್ಯ ಶಿಬಿರ, ಕಣ್ಣಿನ ಶಸ್ತ್ರ ಚಿಕಿತ್ಸೆ, ಅಂಗವಿಕಲರ ಸೇವೆಯಲ್ಲಿ ಸಂಸ್ಥೆ ಮುಂದಿದೆ. ಲಯನ್ಸ್ ಕ್ಲಬ್ 53 ವರ್ಷಗಳ ಭವ್ಯ ಇತಿಹಾಸ ಹೊಂದಿದೆ. ಸಮಾಜಕ್ಕೆ ನೀವು ನೀಡಿದ ಸೇವೆ, ನಿಮ್ಮ ಬದುಕಿನಲ್ಲಿ ಬೇರೆ ರೂಪದಲ್ಲಿ ಪಡೆದುಕೊಳ್ಳುತ್ತೀರಿ. ನಿಮ್ಮ ಮಾತೃ ಭಾಷೆ ಯಾವುದೇ ಆಗಿರಲಿ ಮಕ್ಕಳಿಗೆ ಕನ್ನಡ ಕಲಿಸಿ ಮಕ್ಕಳಿಗೆ ಕನ್ನಡ ಪುಸ್ತಕ ಉಡುಗೊರೆಗಳನ್ನು ನೀಡಿ ಎಂದ ಅವರು ನಿಮ್ಮ ಸೇವಾ ಕಾರ್ಯಗಳ ಮೂಲಕ ಬಡ ಜನರಿಗೆ ಉತ್ತಮ ಸೇವೆ ಒದಗಿಸಿ ಎಂದು ಕಿವಿಮಾತು ಹೇಳಿದರು. ಕಾರ್ಯಕ್ರಮದಲ್ಲಿ ಡಾ.ಸುನಂದಾ, ಜಯದೇವ ಆಸ್ಪತ್ರೆ ಡಾ.ಪಿ.ಕುಮಾರ್, ಡಾ.ಸೃಜನ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಅಂಗವಿಕಲರಿಗೆ ವೀಲ್ ಚೇರ್‌ಗಳನ್ನು ಉಡುಗೊರೆಯಾಗಿ ನೀಡಲಾಯಿತು. ಸಮಾರಂಭದಲ್ಲಿ ಗೋಪಾಲ ಕೃಷ್ಣ ಜಿ.ಮಹೇಶ್, ಬಸವರಾಜು, ಎನ್.ಎಂ. ಮಂಜುನಾಥ್, ಎನ್.ಜಯರಾಮು, ಎನ್.ಆರ್. ಕೃಷ್ಣಪ್ಪಗೌಡ, ಎನ್.ಉಮೇಶ್, ಎಸ್.ನಾಗರಾಜು, ಹೆಚ್.ಎಸ್.ರಾಜು, ಎನ್.ಶ್ರೀನಿವಾಸ್, ನಂಜುಂಡಸ್ವಾಮಿ, ಮಧುಸೂಧನ್, ವಿಜಯ್ ಕುಮಾರ್, ತಮ್ಮಣ್ಣೇಗೌಡ ಹಲವರಿದ್ದರು.

ಹಕ್ಕುಪತ್ರ ವಿತರಿಸಲು ಅಧಿಕಾರಿಗಳು ನಿರ್ಲಕ್ಷ್ಯ: ಆರೋಪ



ಸಭೆಯಲ್ಲಿ ಶಿವಲಿಂಗಯ್ಯ ಮಾತನಾಡಿದರು.

ಸರಗೂರು, ಜು.21– ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ವಿತರಿಸದೆ ಅಧಿಕಾರಿಗಳು ಸತಾಯಿಸುತ್ತಿದ್ದಾರೆ ಎಂದು ಕರ್ನಾಟಕ ಭೂ ಹಕ್ಕುದಾರರ ವೇದಿಕೆ ಸಂಚಾಲಕ ಶಿವಲಿಂಗಯ್ಯ ಆರೋಪಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ನಮ್ಮ ಸಂಘಟನೆ ಕಳೆದ 10 ವರ್ಷದಿಂದ ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ವಿತರಿಸುವಂತೆ ಹೋರಾಟ ನಡೆಸುತ್ತಿದೆ. ಕಳೆದ 50 ವರ್ಷದಿಂದ ಸ್ವಾಧೀನಾನುಭವದಲ್ಲಿರುವ ಜಮೀನಿಗೆ ರೈತರು ಸರ್ಕಾರದ ಆದೇಶದಂತೆ ಅರ್ಜಿ ಸಲ್ಲಿಸಿ ಸಾಗುವಳಿ ಚೀಟಿ ವಿತರಿಸುವಂತೆ ಒತ್ತಾಯಿಸಿದರೂ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಸಾಗುವಳಿ ಚೀಟಿ ಸಿಗದಿರುವುದರಿಂದ ಪ್ರಕೃತಿ ವಿಕೋಪ, ಕಾಡುಪ್ರಾಣಿಗಳಿಂದ ಬೆಳೆ ನಷ್ಟವಾದಾಗ ಪರಿಹಾರ ಪಡೆಯಲು ಸಾಧ್ಯವಾಗದೆ ಹಾಗೂ ಬೆಳೆದ ಬೆಳೆಗೆ ಸೂಕ್ತ ಬೆಂಬಲ ಬೆಲೆ ಪಡೆಯಲು ಸಾಧ್ಯವಾಗದಂತಾಗಿದೆ. ಹೀಗಾಗಿ ನೊಂದ ರೈತರು ನಮ್ಮ ವೇದಿಕೆ ಜೊತೆಗೂಡಿ ಪಾದಯಾತ್ರೆ, ಧರಣಿ ನಡೆಸುತ್ತಾ ಬಂದಿದ್ದಾರೆ ಎಂದರು.

ಪ್ರಸ್ತುತ ಕಂದಾಯ ಸಚಿವ ಕೃಷ್ಣಬೈರೇಗೌಡರು ಕ್ರಿಯಾಶೀಲರಾಗಿದ್ದು ನಮ್ಮ ಮನವಿಗೆ ಸ್ಪಂದಿಸುತ್ತಿದ್ದು, ಸಂಘಟನೆ ಅವರನ್ನು ಅಭಿನಂದಿಸುತ್ತದೆ. ಶಾಸಕ ಅನಿಲ್ ಕಳೆದ ಬಾರಿ ಶಾಸಕರಾಗಿದ್ದ ವೇಳೆ ಹಲವು ರೈತರಿಗೆ ಹಕ್ಕುಪತ್ರ ವಿತರಿಸಿರುವುದನ್ನು ನಮ್ಮ ವೇದಿಕೆ ಸ್ವಾಗತಿಸುತ್ತದೆ. ಹೀಗಾಗಿ ಶಾಸಕರು ಈ ಬಾರಿಯೂ ಹಕ್ಕುಪತ್ರ ವಿತರಣೆಗೆ ಮುಂದಾಗಬೇಕು ಎಂದು ಒತ್ತಾಯಿಸಿದರು. ಈ ವೇಳೆ ಸಮಿತಿ ಸದಸ್ಯರಾದ ನಾಗೇಶ್, ಮಲ್ಲರಾಜು, ನಾಗರಾಜಚಾರ್, ಕಾಳಸ್ವಾಮಿ, ಶಿವಪ್ಪ ಗಣೇಶ್, ಶಿವರಾಜ್ ಇತರರಿದ್ದರು.

ಗ್ಯಾರಂಟಿಗಳನ್ನು ಸಮರ್ಪಕವಾಗಿ ಜನರಿಗೆ ತಲುಪಿಸಿ

ಸಂಸದ ಸುನೀಲ್ ಬೋಸ್ ಕರೆ

ತಿ.ನರಸೀಪುರ, ಜು.21– ರಾಜ್ಯದ ಜನತೆ ಕಾಂಗ್ರೆಸ್ ಪಕ್ಷದ ಮೇಲೆ ನಂಬಿಕೆ ಇಟ್ಟು ಅಧಿಕಾರ ನೀಡಿರುವುದರಿಂದ ಕಾರ್ಯಕರ್ತರು ಚುನಾವಣೆ ಪೂರ್ವದಲ್ಲಿ ನೀಡಿದ್ದ 5 ಗ್ಯಾರಂಟಿ ಗಳನ್ನು ಜನರಿಗೆ ಸಮರ್ಪಕವಾಗಿ ತಲುಪಿಸಲು ಶ್ರಮಿಸಬೇಕು ಎಂದು ಸಂಸದ ಸುನೀಲ್ ಬೋಸ್ ಕಾರ್ಯಕರ್ತರಿಗೆ ಕರೆ ನೀಡಿದರು.

ತಾಲೂಕಿನ ಅತ್ತಹಳ್ಳಿ ಗ್ರಾಮದಲ್ಲಿ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟ ನಾಗರಾಜು(ಮಾಚ) ಅವರ ಪತ್ನಿಗೆ ಸೆಸ್ಕ್ ವತಿಯಿಂದ ನೀಡಲಾದ 5 ಲಕ್ಷ ರೂ.ಗಳ ಚೆಕ್ ವಿತರಿಸಿ ಮಾತ ನಾಡಿದ ಅವರು, ಬಡವರ ಬದುಕನ್ನು ಹಸನುಗೊಳಿಸುವ ಸರ್ಕಾರದ ಗ್ಯಾರಂಟಿ ಯೋಜನೆಗಳ ಬಗ್ಗೆ ವಿಪಕ್ಷಗಳು ಗೊಂದಲ ಸೃಷ್ಟಿಸಿದ್ದು, ಪಕ್ಷದ ಕಾರ್ಯಕರ್ತರು ಜನರ ಸಂಪರ್ಕದೊಂದಿಗೆ ಯೋಜನೆಗಳು ಅವರಿಗೆ ತಲುಪುವಂತೆ ನೋಡಿಕೊಳ್ಳಬೇಕು ಎಂದು ಮನವಿ ಮಾಡಿದರು. ನಾನೂ ಕೂಡ ಗ್ರಾಪಂ ಮಟ್ಟದಲ್ಲಿ ಭೇಟಿ ಕೊಟ್ಟು ಜನರು ಹಾಗೂ ಕಾರ್ಯಕರ್ತರ ಅಹವಾಲು ಆಲಿಸುತ್ತಿದ್ದೇನೆ. ಕ್ಷೇತ್ರದ ಜನರ ಜೊತೆ ನಿರಂತರ ಸಂಪರ್ಕದಲ್ಲಿದ್ದುಕೊಂಡು ಸಮಸ್ಯೆಗಳಿಗೆ ಸ್ಪಂದಿಸೋಣ ಎಂದರು.

ಸೆಸ್ಕ್ ಇಂಜಿನಿಯರ್‌ಗಳಾದ ಸುಕುಮಾರ್, ಬಸವರಾಜು, ಪೈಲ್ವಾನ್ ಯಾಚೇನಹಳ್ಳಿ ಅಶೋಕ್, ಅತ್ತಹಳ್ಳಿ ಗ್ರಾಪಂ ಅಧ್ಯಕ್ಷ ಸುನೀಲ್ ಕುಮಾರ್, ಸದಸ್ಯರಾದ ಮಹೇಶ್, ಆಪ್ತ ಸಹಾಯಕ ಬಸವರಾಜು ಹಾಜರಿದ್ದರು.



ವಿದ್ಯುತ್ ಸ್ಪರ್ಶದಿಂದ ಮೃತಪಟ್ಟ ನಾಗರಾಜು ಅವರ ಪತ್ನಿಗೆ ಸಂಸದ ಸುನೀಲ್ ಬೋಸ್ ಚೆಕ್ ವಿತರಿಸಿದರು.

ಬ್ಯಾಂಕ್ ಆಫ್ ಬರೋಡಾ ಸಂಸ್ಥಾಪನಾ ದಿನಾಚರಣೆ



ಹುಣಸೂರಲ್ಲಿ ಬ್ಯಾಂಕ್ ಆಫ್ ಬರೋಡಾ ಸಂಸ್ಥಾಪನಾ ದಿನಾಚರಣೆ ನಡೆಯಿತು.

ಹುಣಸೂರು, ಜು.21– ನಗರದ ಬ್ಯಾಂಕ್ ಆಫ್ ಬರೋಡಾ ಬ್ಯಾಂಕ್‌ನ 117ನೇ ಸಂಸ್ಥಾಪನಾ ದಿನಾಚರಣೆಯನ್ನು 100 ಸಸಿಗಳನ್ನು ನೆಡುವ ಮೂಲಕ ವಿಜೃಂಭಣೆಯಿಂದ ಆಚರಿಸಲಾಯಿತು.

ಬ್ಯಾಂಕ್ ಆವರಣದಲ್ಲಿ ಬ್ಯಾಂಕ್ ಸಂಸ್ಥಾಪಕರ ಫೋಟೋಗಳಿಗೆ ಪೂಜೆ ಮಾಡಿ ನಂತರ ಬ್ಯಾಂಕ್ ಗ್ರಾಹಕರಿಂದ ಕೇಕ್ ಕತ್ತರಿಸುವ ಮೂಲಕ ಸಂಸ್ಥಾಪನಾ ದಿನಾಚರಣೆ ಆಚರಿಸಲಾಯಿತು.

ಬ್ಯಾಂಕ್ ಸೀನಿಯರ್ ಮ್ಯಾನೇಜರ್ ಎನ್.ಎಂ.ಮೋಹನ್ ಮಾತನಾಡಿ, ನಮ್ಮ ಬ್ಯಾಂಕ್ 117 ವರ್ಷಗಳಿಂದ ಜನಸ್ನೇಹಿಯಾಗಿ ನಡೆದುಕೊಂಡು ಬಂದಿದ್ದು ಗ್ರಾಹಕರ ಅಗತ್ಯಕ್ಕೆ ತಕ್ಕಂತೆ ಪ್ರಾದೇಶಿಕತೆಗೆ ಅನುಗುಣವಾಗಿ ಸ್ಪಂದಿಸುತ್ತಿದ್ದೇವೆ. ಹಾಗಾಗಿ ನಮಗೆ ಗ್ರಾಹಕರೆ ಅಮೂಲ್ಯವಾಗಿದ್ದು ಅವರೊಟ್ಟಿಗೆ ಆಚರಿಸುತ್ತಿದ್ದೇವೆ ಎಂದರು.

ಅಸಿಸ್ಟೆಂಟ್ ಮ್ಯಾನೇಜರ್ ರವಿಕುಮಾರ್ ಮಾತನಾಡಿ, ನಮ್ಮ ಬ್ಯಾಂಕ್ ಸಿಬ್ಬಂದಿ ವರ್ಗ ಈ ದಿನವನ್ನು ಪ್ರಕೃತಿ ಉಳಿವಿಗಾಗಿ ಮೀಸಲಿಡಲು ತೀರ್ಮಾನಿಸಿ ಇಂದು ನಗರದ ಡಿ.ದೇವರಾಜು ಅರಸು ಪದವಿಪೂರ್ವ ಕಾಲೇಜಿನ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳೊಡಗೂಡಿ 100 ಸಸಿಗಳನ್ನು ನೆಡುವ ಮೂಲಕ ಸಾರ್ಥಕತೆಗೆ ಸಾಕ್ಷಿಯಾಗಿದ್ದೇವೆ ಎಂದರು.

ಬ್ಯಾಂಕ್ ಗ್ರಾಹಕರಾದ ಶಿವಕುಮಾರ್, ಸಂತೋಷ, ನಾಗರಾಜೇಗೌಡ್ರು ಕೇಕ್ ಕತ್ತರಿಸುವ ಮೂಲಕ ಬ್ಯಾಂಕ್ ಮತ್ತು ಗ್ರಾಹಕರ ನಡುವಿನ ಸೌಹಾರ್ದತೆಗೆ ಸಾಕ್ಷಿಯಾದರು.

ಕಾರ್ಯಕ್ರಮದಲ್ಲಿ ಅಗ್ರಿಕಲ್ಚರಲ್ ಆಫೀಸರ್ ಸಿ.ರೇವಂತ್, ಕೃಷ್ಣ ತೇಜ, ಶಿವಕುಮಾರ್, ಶಿವರಾಂ ಮತ್ತು ನಾರಾಯಣ್ ಹಾಗೂ ಸಿಬ್ಬಂದಿ ವರ್ಗ, ಮಹಿಳಾ ಸಂಘಗಳ ನಿರ್ದೇಶಕಿಯರು, ತಂಬಾಕು ಬೆಳೆಗಾರರು, ವ್ಯಾಪಾರಸ್ಥರು, ಉದ್ಯಮಿಗಳು ಉಪಸ್ಥಿತರಿದ್ದರು.

ಗಾವಡಗೆರೆ ಗ್ರಾಪಂಗೆ ಪುಟ್ಟಶೋಭಾ ಅಧ್ಯಕ್ಷೆ



ಗಾವಡಗೆರೆ ಗ್ರಾಪಂ ಅಧ್ಯಕ್ಷೆ ಪುಟ್ಟ ಶೋಭಾ ಹಾಗೂ ಸದಸ್ಯರನ್ನು ಅಭಿನಂದಿಸಲಾಯಿತು.

ಹಿರೀಕ್ಯಾತನಹಳ್ಳಿ, ಜು.21– ಹುಣಸೂರು ತಾಲೂಕಿನ ಗಾವಡಗೆರೆ ಗ್ರಾಪಂ ಅಧ್ಯಕ್ಷೆಯಾಗಿ ಪುಟ್ಟ ಶೋಭಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಂತರಿಕ ಒಪ್ಪಂದದಂತೆ ನಿಕಟ ಪೂರ್ವ ಅಧ್ಯಕ್ಷೆ ಧನಲಕ್ಷ್ಮಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ಪುಟ್ಟಶೋಭಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಹಾರಂಗಿ ವಿಭಾಗದ ಎಇಇ ಸಂತೋಷ್ ಕುಮಾರ್ ಘೋಷಿಸಿದರು. ಚುನಾವಣೆಯಲ್ಲಿ 7 ಸದಸ್ಯರು ಹಾಜರಾದರೇ, 6 ಸದಸ್ಯರು ಗೈರು ಹಾಜರಾಗಿದ್ದರು. ಈ ವೇಳೆ ಉಪಾಧ್ಯಕ್ಷೆ ಸವಿತಾ, ಸದಸ್ಯರಾದ ಶ್ರೀನಾಥ್, ಲೋಕೇಶ್, ರುಕ್ಮಾಂಗದ, ಪ್ರದೀಪ್, ಪಿಡಿಓ ಮಂಜುಳಾ, ಕಾರ್ಯದರ್ಶಿ ರಮೇಶ್ ಸೇರಿದಂತೆ ಹಲವರಿದ್ದರು.

ಎ.ಪಾಷ ನಿಧನ



ತಿ.ನರಸೀಪುರ, ಜು.21– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅನುಯಾಯಿ, ಪಟ್ಟಣದ ವಿವೇಕಾನಂದ ನಗರ ನಿವಾಸಿಯೂ ಆದ ಮುಸ್ಲಿಂ ಜನಾಂಗದ ಹಿರಿಯ ಮುಖಂಡ ಎ.ಪಾಷ(77) ಶನಿವಾರ ರಾತ್ರಿ ನಿಧನರಾದರು. ತಿ.ನರಸೀಪುರಕ್ಕೆ ಪ್ರಪ್ರಥಮ ಬಾರಿಗೆ ಮೋದಿ ಜೆರಾಕ್ಸ್ ಅನ್ನು ತಂದು ಯಶಸ್ವಿಯಾಗಿದ್ದರು. ವರುಣ ಕ್ಷೇತ್ರ ಉದಯವಾದ ನಂತರ 2008ರಲ್ಲಿ ಸಿದ್ದರಾಮಯ್ಯನವರಿಗೆ ಚುನಾವಣೆಗೆ ನಾಮಪತ್ರ ಸಲ್ಲಿಸುವಾಗ ಸೂಚಕರಾಗಿದ್ದರು.

ಮೃತರು ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ಮುಸ್ಲಿಂ ಸಮುದಾಯದ ರುದ್ರಭೂಮಿ ಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೋರಮ್ಮ



ತಿ.ನರಸೀಪುರ, ಜು.21– ತಾಲೂಕಿನ ಹೆಳವರಹುಂಡಿ ಗ್ರಾಮದ ಬೋರಮ್ಮ(80) ಶನಿವಾರ ನಿಧನರಾದರು. ಮೃತರು ಓರ್ವ ಪುತ್ರ, ಸೊಸೆ, ಮೂವರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಯಶಸ್ಸು ಸಾಧಿಸಿ

ಆದಾಯ ತೆರಿಗೆ ಇಲಾಖೆ ಹೆಚ್ಚುವರಿ ಆಯುಕ್ತ ಎಂ.ಎಸ್ ನೇತ್ರಪಾಲ್ ಸಲಹೆ



ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಜು.21– ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳ ಜೀವನದ ಪ್ರಮುಖ ಘಟ್ಟವಾಗಿದ್ದು, ಇಲ್ಲಿ ಯಶಸ್ಸು ಸಾಧಿಸಿದರೆ ಮುಂದೆ ಸುಲಭವಾಗಿ ಗುರಿ ಮುಟ್ಟಬಹುದು ಎಂದು ಆದಾಯ ತೆರಿಗೆ ಇಲಾಖೆ ಹೆಚ್ಚುವರಿ ಆಯುಕ್ತ ಎಂ.ಎಸ್ ನೇತ್ರಪಾಲ್ ತಿಳಿಸಿದರು.

ಪಟ್ಟಣದ ಜಗಜೀವನರಾಂ ಸಮುದಾಯ ಭವನದಲ್ಲಿ ಕರ್ನಾಟಕ ರಾಜ್ಯ ಅರುಂಧತಿ ನೌಕರರ ಸಂಘ ಹಾಗೂ ಅರುಂಧತಿ ಸಹಕಾರ ಸಂಘಗಳ ಸಂಯುಕ್ತಾಶ್ರಯದಲ್ಲಿ ಭಾನುವಾರ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸಾಧಕ ಅಧಿಕಾರಿಗಳು ಹಾಗೂ ನೌಕರರಿಗೆ ಏರ್ಪಡಿಸಿದ್ದ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸಾಧನೆಯ ಹಾದಿ ಸುಗಮವಲ್ಲ. ಛಲವಿದ್ದವರು ಮಾತ್ರ ಆ ಹಾದಿಯಲ್ಲಿ ಸಾಗಲು ಸಾಧ್ಯ. ನಮ್ಮ ಕ್ರಿಯೆಗಳಿಗೆ ಪೂರಕ ಪ್ರತಿಕ್ರಿಯೆ ಇರುತ್ತದೆ. ಅದೇ ರೀತಿ ನಾವು ಅಪೇಕ್ಷೆ ಪಟ್ಟ ಫಲಿತಾಂಶ ಪಡೆಯಲು ಅತೀ ವೇಗವಾಗಿ ಸಾಧನೆ ಹಾದಿಯಲ್ಲಿ ಸಾಗಬೇಕಾಗಿದೆ. ಪ್ರತಿಭೆ ಎಲ್ಲರಲ್ಲೂ ಇದೆ. ಆದರೆ ಆಧುನಿಕ ಜಗತ್ತಿನಲ್ಲಿ ಸ್ಪರ್ಧೆ ಅನಿವಾರ್ಯ ಎಂದರು.

ಬೆಂಗಳೂರಿನಂತಹ ನಗರ ಪ್ರದೇಶದಲ್ಲಿ ಶೈಕ್ಷಣಿಕ ಪ್ರಗತಿ ಸಾಮಾನ್ಯ. ಆದರೆ ಗ್ರಾಮೀಣ ಪ್ರದೇಶದಲ್ಲಿ ಉತ್ತಮ ಸಾಧನೆ ತೋರುವುದು ಸಾಮಾನ್ಯದ ಮಾತಲ್ಲ. ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕ ಬಂದಿದೆ ಎಂದರೆ ಅವರ ಶೈಕ್ಷಣಿಕ ಮಟ್ಟ ಉತ್ತಮವಾಗಿದೆ ಎಂದರ್ಥ. ಉನ್ನತ ಶಿಕ್ಷಣಕ್ಕೆ ಅವರು ಈಗಿನಿಂದಲೇ ತಯಾರಾಗಬೇಕು. ಕಠಿಣ ಪರಿಶ್ರಮದ ಮೂಲಕ ಸ್ಪರ್ಧಾತ್ಮಕ ಪರೀಕ್ಷೆ ಬರೆದು ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದ ಅವರು ಪೋಷಕರು ಮಕ್ಕಳಿಗೆ ಉತ್ತಮ ಕೋಚಿಂಗ್ ಕೊಡಿಸಲು ಮುಂದಾಗಬೇಕು ಎಂದರು.

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರ ಆಪ್ತ ಕಾರ್ಯದರ್ಶಿ ಡಾ.ಹೆಚ್.ನಟರಾಜು ಮಾತನಾಡಿ, ಶಿಕ್ಷಣಕ್ಕೆ ಬಡತನ, ಸಿರಿತನದ ತಾರತಮ್ಯವಿಲ್ಲ. ಪರಿಶ್ರಮ ಮತ್ತು ಸತತ ಪ್ರಯತ್ನ ಅಗತ್ಯ. ಗ್ರಾಮೀಣ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪ್ರತಿಯೊಬ್ಬರೂ ಪ್ರೋತ್ಸಾಹ ನೀಡಬೇಕು. ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಪೋಷಕರ ಸಹಕಾರ ಅಗತ್ಯವಾಗಿದೆ ಎಂದರು.

> ನಮ್ಮ ಜನಾಂಗದಲ್ಲಿ ಯಾರೂ ಆಸ್ತಿವಂತರಲ್ಲ. ಶಿಕ್ಷಣವನ್ನೇ ಆಸ್ತಿ ಮಾಡಿಕೊಳ್ಳುವ ನಿಟ್ಟಿನಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿದಲ್ಲಿ ಮಕ್ಕಳೇ ಅವರ ಜೀವನ ರೂಪಿಸಿಕೊಳ್ಳುವುದರ ಜೊತೆಗೆ ನಿಮ್ಮನ್ನು ಸಲಹುತ್ತಾರೆ. - **ಎಂ.ವೆಂಕಟೇಶ್,**
> *ಆಹಾರ ಮತ್ತು ನಾಗರಿಕ ಸರಬರಾಜು ಸಚಿವರ ವಿಶೇಷ ಕರ್ತವ್ಯಾಧಿಕಾರಿ.*

ಗ್ರಾಮೀಣ ಭಾಗದಲ್ಲಿ ಮಕ್ಕಳ ಪೋಷಕರ ಅನಕ್ಷರತೆ, ಜೀವನ ನಡೆಸಲು ಕಷ್ಟದ ಪರಿಸ್ಥಿತಿಯಲ್ಲಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂದೇಟು ಹಾಕುತ್ತಾರೆ. ಇಂತಹ ಕೆಲಸ ಮಾಡಬಾರದು. ಸರ್ಕಾರವು ಸಾಕಷ್ಟು ಕಾರ್ಯಕ್ರಮ ಜಾರಿಗೆ ತಂದಿದೆ. ಇದನ್ನು ಸಮರ್ಪಕವಾಗಿ ಬಳಸಿಕೊಂಡು ತಮ್ಮ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪ್ರೋತ್ಸಾಹ ನೀಡಬೇಕು ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಅಂಕ ಪಡೆದ 200 ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಅರುಂಧತಿ ನೌಕರರ ಸಂಘದ ಅಧ್ಯಕ್ಷ ಮಹದೇವ ಸ್ವಾಮಿ, ಉಪಾಧ್ಯಕ್ಷ ಕೆ.ಎಂ.ರವೀಂದ್ರ, ಕಾರ್ಯದರ್ಶಿ ಲಿಂಗಣ್ಣ, ಸಹ ಕಾರ್ಯದರ್ಶಿ ನಾಗರಾಜು, ಅರುಂಧತಿ ಸಹಕಾರ ಸಂಘದ ತಾಲೂಕು ಅಧ್ಯಕ್ಷ ಕೆ.ಕೆಂಚಯ್ಯ, ಕಾರ್ಯದರ್ಶಿ ಸ್ವಾಮಿ, ಚಾಮರಾಜನಗರ ಜಿಲ್ಲಾ ಕಾರ್ಮಿಕ ಅಧಿಕಾರಿ ಡಾ. ಸವಿತಾ, ಪಿರಿಯಾಪಟ್ಟಣ ಪ್ರೊಬೇಷನರಿ ತಹಸೀಲ್ದಾರ್ ಬಿ.ಭೀಮರಾಯ, ಸಹಾಯಕ ಲೆಕ್ಕಾಧಿಕಾರಿ ಸುರೇಖಾ, ತಾಲೂಕು ಯೋಜನಾಧಿಕಾರಿ ಡಾ.ರಂಗಸ್ವಾಮಿ, ಸಹಕಾರ ಸಂಘದ ಉಪಾಧ್ಯಕ್ಷ ಲಕ್ಷ್ಮಿ, ಶಿಕ್ಷಕರಾದ ಹರಳಯ್ಯ, ಟಿ.ಪಿ.ಕೆಂಪ ರಾಜು, ಪುರಸಭೆ ಸದಸ್ಯ ಎಲ್.ಮಂಜುನಾಥ್, ಗೋಪಾಲಪುರ ಮಂಜುನಾಥ್, ಶಾಗ್ಯ ಸಿದ್ದು, ಆರೋಗ್ಯ ಇಲಾಖೆ ಅಧಿಕಾರಿ ಮಹೇಶ್, ತಾಲೂಕು ಬಾಬು ಜಗಜೀವನ್ ರಾಂ ಸಂಘದ ಅಧ್ಯಕ್ಷ ಪುಟ್ಟಯ್ಯ, ಶಂಕರ್, ರಾಚಪ್ಪ, ಭಾನು ಪ್ರಕಾಶ್, ಮಾದಪ್ಪ ಮಾದಿಗರ್, ಎಎಸ್‌ಐ ಲಿಂಗರಾಜು, ಎಂ.ಕೆ.ಸಿದ್ದರಾಜು ಇದ್ದರು.

ಡಾ. ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿ ಪ್ರದಾನ

ಮೈಸೂರು, ಜು.21(ಎಂಟಿವೈ)- ಜಗತ್ತಿನ ಅತ್ಯಂತ ಪ್ರಭಾವಶಾಲಿ ಸ್ತ್ರೀವಾದಿಗಳು ಹಾಗೂ ಸ್ತ್ರೀ ಪರ ಹೋರಾಟಗಾರರಲ್ಲಿ ಅಗ್ರಪಂಕ್ತಿಯಲ್ಲಿ ಡಾ. ವಿಜಯಾ ದಬ್ಬೆ ನಿಲ್ಲುತ್ತಾರೆ ಎಂದು ಪುಣೆಯ ಸಿಂಬಯಾಸಿಸ್ ಕಾನೂನು ಕಾಲೇಜಿನ ಡೀನ್ ಡಾ.ಶಶಿಕಲಾ ಗುರುಪುರ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸರಸ್ವತಿಪುರಂನಲ್ಲಿರುವ ರೋಟರಿ ಮೈಸೂರು ಪಶ್ಚಿಮ ಸಭಾಂಗಣದಲ್ಲಿ ಸಮತಾ ಅಧ್ಯಯನ ಕೇಂದ್ರದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಭಾಷಾಂತರ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ.ಎಂ.ಉಷಾ ಅವರಿಗೆ 'ಡಾ.ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿ' ಪ್ರದಾನ ಮಾಡಿ ಮಾತನಾಡಿದ ಅವರು, ಸ್ತ್ರೀ ವಾದದ ಒಳನೋಟವನ್ನು ಸರಳವಾಗಿ, ಶಿಸ್ತುಬದ್ಧವಾಗಿ ಅಳವಡಿಸಿಕೊಂಡಿರುವವರ ಸಂಖ್ಯೆ ಕಡಿಮೆ. ಅಂತಹವರ ಸಾಲಿನಲ್ಲಿ ಡಾ.ವಿಜಯಾ ದಬ್ಬೆ ಪ್ರಮುಖರಾಗಿದ್ದಾರೆ. ಇಂದು ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಭಾಷೆಯಲ್ಲಿ, ಅದರಲ್ಲೂ ಮುಖ್ಯವಾಗಿ ಸಾಹಿತ್ಯದ ಹಾಗೂ ಅಂತರಶಾಸ್ತ್ರೀಯ ನೆಲೆಯಿಂದ ಸಂಶೋಧನೆ ನಡೆಯುತ್ತಿವೆ. ಆದರೆ, ದಬ್ಬೆ ಅವರ ಬರಹ, ವ್ಯಕ್ತಿತ್ವದಲ್ಲಿ ಹೋರಾಟದಲ್ಲಿ ಗಟ್ಟಿತನವಿತ್ತು. ಅವರ ಉಪಸ್ಥಿತಿಯಲ್ಲಿದ್ದ ಶಕ್ತಿ ಸಂಚಾರಕ್ಕೆ ಪ್ರತಿಯಾಗಿ ಮತ್ತೊಂದನ್ನು ನೋಡಲು ಸಾಧ್ಯವೇ ಇಲ್ಲ. ದಬ್ಬೆ ಅವರು ಸ್ತ್ರೀ ವಾದವನ್ನು ಬದುಕಿನ ಸಕ್ರಿಯವಾದ ಕಾಲದುದ್ದಕ್ಕೂ ಅಳವಡಿಸಿಕೊಂಡಿದ್ದರು. ಅವರ ನುಡಿ, ನಡೆ, ತತ್ವದಲ್ಲಿ, ಆಚರಣೆಯಲ್ಲಿ ಸ್ತ್ರೀವಾದ ಬೇರೂರಿತ್ತು. ಅಲ್ಲದೆ ದೊಡ್ಡ ಮಟ್ಟದ ಸಮುದಾಯ ಕಟ್ಟುವುದಕ್ಕಾಗಿ ಇತರರನ್ನು ಹುರಿದುಂಬಿಸುವ ವ್ಯಕ್ತಿತ್ವ ಹೊಂದಿದ್ದರು ಎಂದು ತಿಳಿಸಿದರು.

ಪ್ರಶಸ್ತಿ ಪುರಸ್ಕೃತರಾದ ಡಾ. ಎಂ.ಉಷಾ ಮಾತನಾಡಿ, ಕೆಲಸದಿಂದ ನಿವೃತ್ತಿ ಪಡೆದ ನಂತರ ಏನನ್ನಾದರೂ ಮಾಡಬೇಕು ಎಂಬ ಹುಡುಕಾಟದಲ್ಲಿದ್ದಾಗ ಆಧುನಿಕತೆಯನ್ನು ಹೆಣ್ಣು ಮಕ್ಕಳು ಹೇಗೆ ಎದುರಿಸಿದರು ಎಂಬುದರ ಕುರಿತು ಬರೆಯಲು ಆರಂಭಿಸಿದೆ. ಕಾಲೇಜಿನಲ್ಲಾಗಿದ್ದಾರೆ ಈ ಕುರಿತು ಪ್ರಾಜೆಕ್ಟ್ ಮಾಡುತ್ತಿದ್ದೆ. ಆದರೆ ಮನೆಯಲ್ಲಿದ್ದ ಕಾರಣ ಕಾದಂಬರಿ ರೂಪದಲ್ಲಿ ಅದನ್ನು ಹೊರ ತಂದೆ. ಪಾತ್ರಗಳನ್ನು ಯಥಾವತ್ತಾಗಿ ಬರೆದಿಲ್ಲ. ಅವರು ತಮ್ಮ ಕಷ್ಟವನ್ನು ದಾಟಿದ ರೀತಿಯನ್ನು ಕುರಿತು ಬರೆದಿದ್ದೇನೆ. ಇಂತವರು ನನ್ನ ಕಾದಂಬರಿ ಉಸಿರಾಡಲು ಕಾರಣಕರ್ತರಾಗಿದ್ದಾರೆ. ಡಾ. ವಿಜಯಾ ದಬ್ಬೆ ಅವರು ಸಮಾಜದಲ್ಲಿನ ಅಸಮಾನತೆ, ಅಸಮಧಾನ, ಲಿಂಗ ತಾರತಮ್ಯದ ಬಗ್ಗೆ ಸ್ಪಷ್ಟತೆ ನೀಡಿದರು. ಅವರ ಹೆಸರಿನಲ್ಲಿ ಪ್ರಶಸ್ತಿ ದೊರೆತಿರುವುದು ಸಂತೋಷದ ವಿಷಯ ಎಂದು ತಿಳಿಸಿದರು.

ನಿವೃತ್ತ ಪ್ರಾಂಶುಪಾಲ ಡಾ. ಟಿ.ಎಸ್. ಸುಬ್ರಹ್ಮಣ್ಯ ಮಾತನಾಡಿ, ಕವಯತ್ರಿ ಡಾ. ವಿಜಯಾದಬ್ಬೆ ಬಾಳು ವಿಸ್ಮಯದ ಜತೆಗೆ ಹೆಮ್ಮೆ. ವಿಜಯಾ ಕಾಲೇಜು ದಿನಗಳಲ್ಲಿಯೇ ಯಾವುದಕ್ಕೂ ಯಾರಿಗೂ ಹೆದರದ ಹೆಣ್ಣು ಅಪಾರ ಕನಸುಗಳು. ನಿರಂತರ ಓದು, ಏಕಾಂಗಿತನ, ಮೌನಿಯಾಗಿರುತ್ತಿದ್ದರು. ಆರ್ಥಿಕವಾಗಿ ಸದೃಢರಾಗಲು ಉದ್ಯೋಗ ಹಿಡಿಯಲು ಯತ್ನಿಸಿದರು. ಉದ್ಯೋಗ ಸಿಗದಿದ್ದಾಗ ಪ್ರಾಮಾಣಿಕವಾಗಿದ್ದರೆ ಸಮಾಜದಲ್ಲಿ ಬೆಲೆ ಇಲ್ಲವೇ? ಎಂದು ಪ್ರಶ್ನಿಸುತ್ತಿದ್ದರು. ಸ್ತ್ರೀವಾದಿ ಚಳವಳಿಯಲ್ಲಿ ಪುರುಷರು ಭಾಗವಹಿಸಬೇಕು. ಅವರೂ ಮಾನಸಿಕ ಗುಲಾಮಗಿರಿಯಿಂದ ಬಿಡುಗಡೆ ಪಡೆಯಬೇಕು. ಸ್ತ್ರೀ ವಾದಿಗಳು ಪುರುಷರ ವಿರುದ್ಧವಲ್ಲ. ಪುರುಷರ ಕೆಟ್ಟ ವ್ಯವಸ್ಥೆಯ ವಿರುದ್ಧವೆಂದು ಹೇಳುತ್ತಿದ್ದರು ಎಂದು ಅಭಿಪ್ರಾಯಪಟ್ಟರು.

ಪ್ರಪಂಚವನ್ನು ಗೆಲ್ಲುತ್ತೇನೆ ಎಂದು ದಬ್ಬೆಯಿಂದ ಬಂದ ವಿಜಯಾ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ನೆನಪಿನ ಶಕ್ತಿ ಕಳೆದುಕೊಂಡರು. ಮರಳಿ ದಬ್ಬೆಗೆ ಹೋದರು. ನಾಗಚಂದ್ರನ ಬಗ್ಗೆ ಸಂಶೋಧನೆ ಮಾಡಿ ಪಿಹೆಚ್.ಡಿ ಪದವಿ ಪಡೆದವರು, ಮತ್ತೆ ಅಆಇಈ ಕಲಿಯಬೇಕಾಯಿತು. ವೈದ್ಯ ಲೋಕವೇ ಅಚ್ಚರಿಪಡುವಂತೆ ಓದಲು, ಮಾತಾಡಲು ಶುರು ಮಾಡಿದರು. ವಿಜಯಾರ ಅಪಾರವಾದ ಚೈತನ್ಯ ಶಕ್ತಿ, ಕುಟುಂಬದವರು, ಸ್ನೇಹಿತರ ಸಹಕಾರದಿಂದ ಎರಡನೇ ಜೀವನ ಆರಂಭಿಸಿದರು. ಹಳೆಯದನ್ನು ನೆನಪು ಮಾಡಿಕೊಳ್ಳುತ್ತಿದ್ದರು. ಆಗ ಹೃದಯಾಘಾತವಾಯಿತು. ನಮ್ಮಿಂದ ನಿರ್ಗಮಿಸಿದರು ಎಂದು ವಿಷಾದಿಸಿದರು.

ಪ್ರಶಸ್ತಿ ಪ್ರದಾನ: ಹಂಪಿ ಕನ್ನಡ ವಿವಿ ನಿವೃತ್ತ ಪ್ರಾಧ್ಯಾಪಕಿ ಡಾ. ಎಂ.ಉಷಾ ಅವರ ಶಿವಮೊಗ್ಗದ 'ಅಹರ್ನಿಶಿ' ಪ್ರಕಾಶನ ಪ್ರಕಟಿಸಿರುವ ಉಷಾ ಅವರ 'ಬಾಳ ಬಟ್ಟೆ' ಕಾದಂಬರಿಗೆ 2024ನೇ ಸಾಲಿನ ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿಯನ್ನು ನೀಡಲಾಯಿತು. 25 ಸಾವಿರ ರೂ. ನಗದು ಬಹುಮಾನ, ಫಲಕ ನೀಡಿ ಸನ್ಮಾನಿಸಲಾಯಿತು.


ಕಾವ್ಯ ವಿಭಾಗದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಅಭಿಷೇಕ್ ವೈ.ಎಸ್.(ಪ್ರಥಮ), ದಾವಣಗೆರೆ ವಿವಿ ರುಜುವಾನ ಕೆ.(ದ್ವಿತೀಯ), ಅಮಿತ ಎಂ.ಕುಡಚಿ (ತೃತೀಯ). ಲಲಿತಪ್ರಬಂಧ ವಿಭಾಗದಲ್ಲಿ ಕಾಸರಗೋಡು ಕೇರಳ ಕೇಂದ್ರೀಯ ವಿವಿ ಕನ್ನಡ ವಿಭಾಗದ ನವ್ಯಾ ಅರ್.(ಪ್ರಥಮ), ಕೊಡಗಿನ ಡಾ. ಕೆ.ಎಸ್. ಮುಸ್ತಫಾ(ದ್ವಿತೀಯ), ಮಂಗಳೂರು ವಿವಿಯ ವಿವಿಯ ಎಸ್.ಸಂಧ್ಯಾ ತೃತೀಯ ಬಹುಮಾನಗಳನ್ನು ಸ್ವೀಕರಿಸಿದರು. ತೀರ್ಪುಗಾರರ ಮೆಚ್ಚುಗೆ ಪಡೆದ ಕವಿಗಳು, ಪ್ರಬಂಧ ಲೇಖಕರನ್ನು ಸನ್ಮಾನಿಸಲಾಯಿತು.

ಡಾ.ಸಬೀಹಾ ಭೂಮಿಗೌಡ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸ್ಪರ್ಧೆಯ ತೀರ್ಪುಗಾರರಾಗಿದ್ದ ಕನ್ನಡ ಸಹ ಪ್ರಾಧ್ಯಾಪಕ ಡಾ. ಆನಂದ್ ಗೋಪಾಲ್ ಕಾವ್ಯದ ಕುರಿತು ಮಾತನಾಡಿದರೆ, ಡಾ. ಅಶ್ವಿನಿ ಆರ್.ಎಸ್. ಪ್ರಬಂಧಗಳ ಬಗ್ಗೆ ಮಾತನಾಡಿದರು. ಸಮತಾ ಅಧ್ಯಯನ ಕೇಂದ್ರದ ಧರ್ಮದರ್ಶಿ ಡಾ. ರಾಮಕೃಷ್ಣ ಜೋಷಿ ಆಶಯ ನುಡಿಗಳನ್ನಾಡಿದರು. ಉಪಾಧ್ಯಕ್ಷೆ ಬಿ.ಸಿ. ಮಂಜುಳಾ, ಕಾರ್ಯದರ್ಶಿ ಆರ್.ಸುನಂದಮ್ಮ, ಸಹ ಕಾರ್ಯದರ್ಶಿ ಪಿ.ಓಂಕಾರ್, ಖಜಾಂಚಿ ವಿಜಯಾರಾವ್ ಇದ್ದರು.



ಮೈಸೂರಿನ ಸರಸ್ವತಿಪುರಂನಲ್ಲಿರುವ ರೋಟರಿ ಮೈಸೂರು ಪಶ್ಚಿಮ ಸಭಾಂಗಣದಲ್ಲಿ ಸಮತಾ ಅಧ್ಯಯನ ಕೇಂದ್ರದ ವತಿಯಿಂದ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಭಾಷಾಂತರ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ. ಎಂ.ಉಷಾ ಅವರಿಗೆ 'ಡಾ.ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿ' ಪ್ರದಾನ ಮಾಡಿ ಗೌರವಿಸಲಾಯಿತು.

23 ವರ್ಷದೊಳಗಿನ ಮೈಸೂರು ವಲಯ ಕ್ರಿಕೆಟ್ ತಂಡಕ್ಕೆ ಆಟಗಾರರ ಆಯ್ಕೆ



ಮೈಸೂರು, ಜು.21(ಎಂಟಿವೈ)- ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರಿಕೆಟ್ ಮೈದಾನದಲ್ಲಿ ಭಾನುವಾರ ನಡೆದ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ಮೈಸೂರು ವಲಯದ 23 ವರ್ಷದೊಳಗಿನ ತಂಡದ ಸದಸ್ಯರ ಆಯ್ಕೆಗಾಗಿ ನಡೆದ ಸಂದರ್ಭದಲ್ಲಿ ವಿವಿಧ ಕ್ಲಬ್‌ಗಳ 93 ಕ್ರಿಕೆಟ್ ಪಟುಗಳು ಪಾಲ್ಗೊಂಡಿದ್ದರು.

ರಣಜಿ ಮಾಜಿ ಕ್ರಿಕೆಟಿಗ ರವೀಂದ್ರ ವೀಕ್ಷಕರಾಗಿ ಪಾಲ್ಗೊಂಡು ನಡೆಸಿದ ಆಯ್ಕೆ ಪ್ರಕ್ರಿಯೆಯಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯಲ್ಲಿ ವಿವಿಧ ಕ್ಲಬ್‌ಗಳಲ್ಲಿ ಅಭ್ಯಾಸ ಮಾಡುತ್ತಿರುವ 19ರಿಂದ 23 ವರ್ಷದೊಳಗಿನ ಉದಯೋನ್ಮುಖ ಕ್ರಿಕೆಟ್‌ಗಳು ಪಾಲ್ಗೊಂಡು ತಮ್ಮ ಸಾಮರ್ಥ್ಯ ಪ್ರದರ್ಶಿಸಿದರು. ಬ್ಯಾಟಿಂಗ್, ಬೌಲಿಂಗ್, ವಿಕೆಟ್ ಕೀಪಿಂಗ್, ಫೀಲ್ಡಿಂಗ್ ವಿಭಾಗದಲ್ಲಿ ಆಯ್ಕೆ ಸಮಿತಿ ಸದಸ್ಯರ ಸಮ್ಮುಖದಲ್ಲಿ ನಡೆಸಿದ ಪರೀಕ್ಷೆಯಲ್ಲಿ ಗಮನಾರ್ಹ ಪ್ರದರ್ಶನ ನೀಡಿದರು.

ಆಯ್ಕೆ ಪ್ರಕ್ರಿಯೆಯಲ್ಲಿ 15 ಆಟಗಾರರ ತಂಡ ಹಾಗೂ ಐವರು ಕಾಯ್ದಿರಿಸಿ ಆಟಗಾರರನ್ನು ಆಯ್ಕೆ ಮಾಡಲಾಗುತ್ತದೆ. ಜು.25ರಿಂದ ಬೆಂಗಳೂರಲ್ಲಿ ಆರಂಭವಾಗುವ 23 ವರ್ಷದೊಳಗಿನ ಅಂತರ ವಲಯ ಕ್ರಿಕೆಟ್ ಪಂದ್ಯಾವಳಿಗೆ ಮೈಸೂರು ವಲಯದ ತಂಡವನ್ನು ಕಳುಹಿಸಲಾಗುತ್ತದೆ.

ಈ ಸಂದರ್ಭದಲ್ಲಿ ಸೆಲೆಕ್ಷನ್ ಕಮಿಟಿ ಛೇರ್ಮನ್ ಗುರುಪ್ರಸಾದ್, ಸೆಲೆಕ್ಷನ್ ಕಮಿಟಿ ಸದಸ್ಯರಾದ ದೀಪಕ್ ಶ್ರೀನಿವಾಸನ್, ಶರತ್ ಬಾಬು, ಮಧು ಪ್ರಸಾದ್, ಕೆಎಸ್‌ಸಿಎ ಮೈಸೂರು ವಲಯದ ಛೇರ್ಮನ್ ಬಾಲಚಂದರ್, ಸಂಚಾಲಕ ಹರಿಕೃಷ್ಣ ಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಭಾರತದಲ್ಲಿ ಬೌದ್ಧ ಧಮ್ಮಕ್ಕೆ ನೆಲೆ ಇಲ್ಲದಂತಾಗಿದೆ

ವಿಚಾರವಾದಿ ಎನ್.ಬಿ.ಶಿವರುದ್ರಪ್ಪ ವಿಷಾದ

ಮೈಸೂರು, ಜು.21(ಎಂಟಿವೈ)- ಜಗತ್ತಿನ ಎಲ್ಲೆಡೆ ಬೌದ್ಧ ಧಮ್ಮ ಪಸರಿಸುತ್ತಿದ್ದರೂ, ಭಾರತದ ಮಣ್ಣಿನಲ್ಲಿ ಹುಟ್ಟಿದ ಈ ಧಮ್ಮಕ್ಕೆ ನೆಲೆ ಇಲ್ಲದಂತಾಗಿದೆ ಎಂದು ವಿಚಾರವಾದಿ, ಹಿರಿಯ ವಕೀಲ ಎನ್.ಬಿ.ಶಿವರುದ್ರಪ್ಪ ವಿಷಾದಿಸಿದ್ದಾರೆ.

ಮೈಸೂರಿನ ವಿಜಯನಗರ 1ನೇ ಹಂತದ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆಯ ಆವರಣದಲ್ಲಿರುವ ಬುದ್ಧವಿಹಾರದಲ್ಲಿ ಕರ್ನಾಟಕ ಬುದ್ಧಧಮ್ಮ ಸಮಿತಿ ವತಿಯಿಂದ ಭಾನುವಾರ ನಡೆದ ಧಮ್ಮ ಚಕ್ಕಪವತ್ತನ ದಿನಾಚರಣೆಯಲ್ಲಿ ಬುದ್ಧರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ದೇವರು ಮತ್ತು ಆತ್ಮ ಈ ಎರಡೂ ವಿಚಾರಗಳಿಂದ ಜನರನ್ನು ಹಿಡಿದಿಟ್ಟುಕೊಳ್ಳಲಾಗಿದೆ. ಇದು ಇಂದಿನ ದೊಡ್ಡ ಸವಾಲಾಗಿ ಕಾಡುತ್ತಿದ್ದು, ಇದಕ್ಕೆ ಸರಿಯಾದ ಉತ್ತರ ಕಂಡುಕೊಳ್ಳಲಾಗದೆ ಜನರು ಪರಿತಪಿಸುತ್ತಿದ್ದಾರೆ. ಮಾನವನ ಬದುಕನ್ನು ಬಂಧನದಿಂದ ಬಿಡಿಸಿ, ಜ್ಞಾನವನ್ನು ಸಾರಿದ ದಿನವೇ ಧಮ್ಮ ಚಕ್ಕಪವತ್ತನ ದಿನ. ಮನಸ್ಸಿನಲ್ಲಿರುವ ಕಳೆಯನ್ನು ತೆಗೆದು ಪರಿಶುದ್ಧ ಮಾಡಿಕೊಳ್ಳಬೇಕಾಗಿದೆ. ಇಂದಿನ ಯುವಪೀಳಿಗೆಗೆ ಜ್ಞಾನವನ್ನು ತುಂಬುವ ಕೆಲಸವಾಗಬೇಕಿದೆ. ಪ್ರತಿಯೊಬ್ಬರೂ ಬುದ್ಧರ ಮಾರ್ಗದಲ್ಲಿ ನಡೆಯಬೇಕು. ಈ ಮೂಲಕ ಬದುಕಿನಲ್ಲಿ ಬದಲಾವಣೆಯನ್ನು ಕಾಣಬೇಕು ಎಂದು ಹೇಳಿದರು.

ಸಮಿತಿಯ ಪ್ರಧಾನ ಕಾರ್ಯದರ್ಶಿ ಆರ್.ಮಹದೇವಪ್ಪ ಮಾತನಾಡಿ, ಶುದ್ಧವಾದ ನೀರಿನಲ್ಲಿ ಪ್ರತಿಬಿಂಬ ಕಾಣುವಂತೆ ಬುದ್ಧರ ವಿಚಾರದಲ್ಲಿ ಅಷ್ಟೇ ಸ್ಪಷ್ಟತೆ ಇದೆ. ಬುದ್ಧಧಮ್ಮವು ಸರಳ ಮತ್ತು ಕ್ಲಿಷ್ಟಕರವಾಗಿದೆ. ಮೊಟ್ಟ ಮೊದಲು ಜಗತ್ತಿನ ಜ್ಞಾನದ ಬಾಗಿಲನ್ನು ತೆರೆದವರು ಬುದ್ಧ ಗುರು. ಜಗತ್ತಿನ ಎಲ್ಲ ಜೀವಿಗಳೂ ಒಂದನ್ನೊಂದು ಪರಸ್ಪರ ಅವಲಂಬಿಸಿವೆ ಆದ್ದರಿಂದ ಆಷಾಢದ ಕತ್ತಲೆಗೆ ಹುಣ್ಣಿಮೆಯ ಬೆಳಕಿನ ಸ್ಪರ್ಶ ನೀಡಿದ ಕರುಣಾಮೂರ್ತಿ ಬುದ್ಧರು ಎಂದರು.

ಕಾರ್ಯಕ್ರಮದಲ್ಲಿ ಸಮಿತಿ ಅಧ್ಯಕ್ಷ ಪ್ರೊ.ಡಿ.ನಂಜುಂಡಯ್ಯ, ಎಸ್‌ಸಿ, ಎಸ್‌ಟಿ ನೌಕರರ ಸಂಘದ ರಾಜ್ಯಾಧ್ಯಕ್ಷ ಡಾ.ಡಿ. ಚಂದ್ರಶೇಖರಯ್ಯ, ಎಂ.ಸಾವಕಯ್ಯ , ನಿವೃತ್ತ ಇಂಜಿನಿಯರ್ ಆರ್.ನಟರಾಜು, ಸಮಿತಿಯ ಸಹ ಕಾರ್ಯದರ್ಶಿ ಹೆಚ್. ಶಿವರಾಜ್, ಡಾ.ಎಸ್.ಪ್ರೇಮ್‌ಕುಮಾರ್, ವಕೀಲ ರಾಜು ಹಂಪಾಪುರ, ನಿಸರ್ಗ ಸಿದ್ದರಾಜು, ಪಿ.ನಿರಂಜನ್, ಡಾ.ವಿಷಣ್ಣುಗಂ, ಮಲ್ಲಿಕಾರ್ಜುನ ಸ್ವಾಮಿ, ಡಾ.ಮಂಜು ಸತ್ತಿಗೆಹುಂಡಿ, ಕೃಷ್ಣಮೂರ್ತಿ, ಬಿ.ಎಂ.ಲಿಂಗರಾಜು, ಮಹಾದೇವಸ್ವಾಮಿ, ಮಾ.ನಾಗಯ್ಯ, ಲಿಂಗಣ್ಣಯ್ಯ, ಬಿ.ಗಾಯತ್ರಿದೇವಿ, ಎಂ.ಆರ್. ಪ್ರೇಮಲತಾ, ವೆಂಕಟೇಶ್, ವಿಶಾಲ್, ಸಚಿನ್ ಗುಂಡ್ಲುಪೇಟೆ, ಸಮಿತಿಯ ಪದಾಧಿಕಾರಿಗಳು, ದಲಿತ ಸಂಘಟನೆಗಳ ಮುಖಂಡರು, ಸಂಶೋಧಕರು ಪಾಲ್ಗೊಂಡಿದ್ದರು.




ಮೈಸೂರಿನ ವಿಜಯನಗರದ ಬುದ್ಧವಿಹಾರದಲ್ಲಿ ಕರ್ನಾಟಕ ಬುದ್ಧ ಧಮ್ಮ ಸಮಿತಿ ವತಿಯಿಂದ ಭಾನುವಾರ ಧಮ್ಮ ಚಕ್ಕಪವತ್ತನ ದಿನ ಆಚರಿಸಲಾಯಿತು.

ಕಸದ ರಾಶಿ ಬೀಳುತ್ತಿದ್ದ ಸ್ಥಳವೀಗ ಕಂಗೊಳಿಸುತ್ತಿದೆ

ಪಾಲಿಕೆ ಸಿಬ್ಬಂದಿಯ ಪ್ರಯತ್ನಕ್ಕೆ ಸಾರ್ವಜನಿಕರ ಪ್ರಶಂಸೆ



ಕೆಲ ದಿನಗಳ ಹಿಂದೆ ತ್ಯಾಜ್ಯದ ರಾಶಿಯಿಂದ ಗಬ್ಬುನಾರುತ್ತಿದ್ದ ಸ್ಥಳ



ಇದೀಗ ಆಕರ್ಷಕ ತಾಣವಾಗಿ ಕಂಗೊಳಿಸುತ್ತಿರುವುದು.

ಮೈಸೂರು, ಜು.21(ಎಸ್‌ಬಿಡಿ)- ಮೈಸೂರಿನ ಎನ್.ಆರ್.ಮೊಹಲ್ಲಾದಲ್ಲಿ ಕಸದ ರಾಶಿಯಿಂದ ಗಬ್ಬೆದ್ದು ನಾರುತ್ತಿದ್ದ ಸ್ಥಳ ಸುಂದರತಾಣವಾಗಿ ಬದಲಾಗಿದೆ.

ಎನ್.ಆರ್.ಮೊಹಲ್ಲಾ, 29ನೇ ವಾರ್ಡ್ ವ್ಯಾಪ್ತಿಯ ದೊಡ್ಡಮ್ಮ ತಾಯಿ ದೇವಸ್ಥಾನದ ಸಮೀಪವಿರುವ ಖಾಲಿ ನಿವೇಶನದ ಕಾಂಪೌಂಡ್ ಬಳಿ ತ್ಯಾಜ್ಯದ ರಾಶಿ ಬಿದ್ದಿತ್ತು. ಸ್ವಚ್ಛತಾ ಕಾರ್ಮಿಕರು ನಿತ್ಯ ವಿಲೇವಾರಿ ಮಾಡಿದರೂ ಕಸ ಸುರಿಯುತ್ತಿದ್ದರು. ಹಳೇ ಸೋಫಾಗಳು, ಕಸ ತುಂಬಿದ್ದ ದೊಡ್ಡ ಪ್ಲಾಸ್ಟಿಕ್ ಚೀಲಗಳು, ಕಟ್ಟಡ ತ್ಯಾಜ್ಯ, ಪ್ಲಾಸ್ಟಿಕ್ ಡಬ್ಬಿಗಳು, ಗಾಜಿನ ಬಾಟಲಿಗಳು ಸೇರಿದಂತೆ ನಿರುಪಯುಕ್ತ ವಸ್ತುಗಳ ರಾಶಿ ಬೀಳುತ್ತಿತ್ತು. ಇಲ್ಲಿನ ತ್ಯಾಜ್ಯ ವಿಲೇವಾರಿಯೇ ಕಾರ್ಮಿಕರಿಗೆ ಸವಾಲಾಗಿತ್ತು. ಹೀಗೆ ಗಬ್ಬೆದ್ದು ನಾರುತ್ತಿದ್ದ ಸ್ಥಳವೀಗ ಸ್ವಚ್ಛ-ಸುಂದರ ತಾಣವಾಗಿ ರೂಪುಗೊಂಡಿದ್ದು, ಈ ಮೂಲಕ ಸಾರ್ವಜನಿಕರಿಗೂ ಪರಿಣಾಮಕಾರಿಯಾಗಿ ಅರಿವು ಮೂಡಿಸಿದಂತಾಗಿದೆ.

ತಂಡದ ಪರಿಶ್ರಮ: ಮೈಸೂರು ನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಶರೀಫ್ ಅವರ ನಿರ್ದೇಶನದ ಮೇರೆಗೆ ವಲಯ ಕಚೇರಿ 8ರ ಆಯುಕ್ತ ಆನಂದ್, ಪರಿಸರ ಇಂಜಿನಿಯರ್ ನಾಜಿಯಾ ಇಫತ್, ಆರೋಗ್ಯ ನಿರೀಕ್ಷಕಿ ರಾಜೇಶ್ವರಿ ಬಾಯಿ, ಮೇಸ್ತ್ರಿ ಆಂಜನಪ್ಪ, ಸ್ವಚ್ಛತಾ ವಾಹನ ಸಂಘದ ಪದಾಧಿಕಾರಿಗಳು ಸೇರಿದಂತೆ ಪೌರಕಾರ್ಮಿಕರು ಹಾಗೂ ಆಟೋ ಟಿಪ್ಪರ್‌ಗಳ ಚಾಲಕರು, ಕಸದ ಗುಂಡಿಗೆ ಹೊಸ ರೂಪ ನೀಡಿದ್ದಾರೆ.

ಕಸದಿಂದ ರಸ: ಪಾಲಿಕೆ ಅಧಿಕಾರಿಗಳ ಸಹಕಾರದೊಂದಿಗೆ ಪೌರಕಾರ್ಮಿಕರು ಹಾಗೂ ಆಟೋ ಟಿಪ್ಪರ್ ಚಾಲಕರು ಸೇರಿ ಒಟ್ಟು 12 ಮಂದಿ ತಂಡ ಮೂರು ದಿನ ಪರಿಶ್ರಮಿಸಿದ ಫಲವಾಗಿ ಈ ಸುಂದರ ತಾಣ ನಿರ್ಮಾಣವಾಗಿದೆ. ಮೊದಲು ಟನ್‌ಗಟ್ಟಲೆ ಬಿದ್ದಿದ್ದ ತ್ಯಾಜ್ಯವನ್ನು ವಿಲೇವಾರಿ ಮಾಡಿ, ಸ್ಥಳವನ್ನು ಸ್ವಚ್ಛಗೊಳಿಸಿದ್ದಾರೆ. ಕಾಂಪೌಂಡ್ ಶುಚಿಗೊಳಿಸಿ, ಅದಕ್ಕೆ ಆಕರ್ಷಕ ಬಣ್ಣ ಬಳಿದು ಹೊಸ ರೂಪ ನೀಡಿದ್ದಾರೆ. ಬಳಿಕ ತ್ಯಾಜ್ಯದ ರಾಶಿಯಲ್ಲೇ ಸಿಕ್ಕಿದ್ದ ಪ್ಲಾಸ್ಟಿಕ್ ಡಬ್ಬಗಳನ್ನು ಪಾಟ್ ಮಾದರಿಯಲ್ಲಿ ಕತ್ತರಿಸಿ, ಅವುಗಳನ್ನು ಅಲಂಕೃತಗೊಳಿಸಿ, ಮಣ್ಣು ತುಂಬಿ ವಿಭಿನ್ನ ಗಿಡಗಳನ್ನು ನೆಟ್ಟು ಕಾಂಪೌಂಡ್‌ನ ಇಟ್ಟಿಗೆಗಳ ಮೇಲಿಟ್ಟಿದ್ದಾರೆ. ಕಸವನ್ನೇ ರಸ ಮಾಡಿ, ಕಸದ ಗುಂಡಿಯಾಗಿದ್ದ ಜಾಗವನ್ನು ಕಂಗೊಳಿಸುವಂತೆ ರೂಪಿಸಿ, ಸ್ಥಳೀಯರು ನಿಬ್ಬೆರಗಾಗುವಂತೆ ಮಾಡಿದ್ದಾರೆ.

ಸೃಜನಾತ್ಮಕ ಹೆಜ್ಜೆ: ಈ ಬಗ್ಗೆ ಆರೋಗ್ಯ ನಿರೀಕ್ಷಕಿ ರಾಜೇಶ್ವರಿ ಬಾಯಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಎಷ್ಟೇ ಸ್ವಚ್ಛಗೊಳಿಸಿದರೂ ರಾತ್ರೋರಾತ್ರಿ ಕಸದ ರಾಶಿ ಬೀಳುತ್ತಿತ್ತು ನಗರದಲ್ಲಿ ಈ ರೀತಿ ಕಸ ಹಾಕುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಪರಿಣಾಮಕಾರಿ ಕ್ರಮ ವಹಿಸಲು ಪಾಲಿಕೆ ಆಯುಕ್ತರು ಸೂಚನೆ ನೀಡಿದ್ದರು. ಯಾರಿಗೋ ಟೆಂಡರ್ ನೀಡಿದರೆ ಕಾಂಪೌಂಡ್‌ಗೆ ಸಿಮೆಂಟ್ ಪ್ಲಾಸ್ಟರಿಂಗ್ ಮಾಡಿ, ಬಣ್ಣ ಬಳಿಯಬಹುದು. ಕೆಲ ದಿನಗಳ ನಂತರ ಯಥಾಸ್ಥಿತಿ ನಿರ್ಮಾಣವಾಗಬಹುದು ಎಂದು ಯೋಚಿಸಿ, ಸೃಜನಾತ್ಮಕ ಉಪಕ್ರಮಕ್ಕೆ ಮುಂದಾದೆವು. ಅಧಿಕಾರಿಗಳು, ಸಿಬ್ಬಂದಿ, ಕಾರ್ಮಿಕರೆಲ್ಲಾ ಸೇರಿ ಕಸದ ಗುಂಡಿಯನ್ನು ಸೌಂದರ್ಯೀಕರಣಗೊಳಿಸಿದ್ದೇವೆ. ತ್ಯಾಜ್ಯದ ರಾಶಿಯಲ್ಲಿ ಸಿಕ್ಕ ವಸ್ತುಗಳನ್ನೂ ಬಳಸಿಕೊಳ್ಳಲಾಗಿದೆ. ರಾತ್ರಿಯಲ್ಲೂ ಕಾವಲಿದ್ದು ಸಾರ್ವಜನಿಕರಿಗೆ ಕಸ ಹಾಕದಂತೆ ಜಾಗೃತಿ ಮೂಡಿಸಲಾಗಿದೆ. ಜನರೂ ಸಹಕಾರ ನೀಡುತ್ತಿದ್ದಾರೆ ಎಂದರು.

ಹಲವೆಡೆ ಇದೇ ಕ್ರಮ: ಎಲ್ಲೆಂದರಲ್ಲಿ ಕಸ ಸುರಿಯುವುದನ್ನು ಸಂಪೂರ್ಣವಾಗಿ ತಡೆಯಬೇಕು ಎಂಬುದು ಆಯುಕ್ತರ ಆಶಯವಾಗಿದೆ. ಮನೆ ಬಳಿ ತೆರಳಿ ಕಸ ಸಂಗ್ರಹಣೆ ಜೊತೆಗೆ ವಾಣಿಜ್ಯ ತ್ಯಾಜ್ಯವನ್ನೂ ಸಮರ್ಪಕವಾಗಿ ಸಂಗ್ರಹಿಸಲಾಗುತ್ತಿದೆ ಆದಾಗ್ಯೂ ತ್ಯಾಜ್ಯ ಹಾಕುತ್ತಿರುವ ಸ್ಥಳಗಳನ್ನು ಗುರುತಿಸಿ, ಕಸಮುಕ್ತಗೊಳಿಸುವ ನಿಟ್ಟಿನಲ್ಲಿ ಪಾಲಿಕೆ ಮುಂದಾಗಿದ್ದು, ಎನ್.ಆರ್. ಮೊಹಲ್ಲಾದಲ್ಲಿ ಹೊಸ ಹೆಜ್ಜೆ ಇಡಲಾಗಿದೆ. ವಲಯ ಕಚೇರಿ 8ರ ವ್ಯಾಪ್ತಿಯ 29, 16, 13ನೇ ವಾರ್ಡ್‌ಗಳ ಹಲವು ಸ್ಥಳಗಳನ್ನು ಈ ರೀತಿ ಸೌಂದರ್ಯೀಕರಣಗೊಳಿಸುವ ಕಾರ್ಯವನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.



ಮೈಸೂರಿನ ಎನ್.ಆರ್.ಮೊಹಲ್ಲಾದ 29ನೇ ವಾರ್ಡ್‌ನಲ್ಲಿ ಕಸದ ಗುಂಡಿಗೆ ಹೊಸ ರೂಪ ನೀಡಿದ ಪಾಲಿಕೆ ತಂಡ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಇಂಡಿಯನ್ 2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಿಲ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ನಾಟ್‌ಔಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಟ್ವಿಸ್ಟರ್ (ಇಂ)	4 ಪ್ರದರ್ಶನಗಳು
ಸಂಗಂ	
ಹೆಜ್ಜಾರು (ಕ)	2 ಪ್ರದರ್ಶನಗಳು
ಇಂಡಿಯನ್ 2 (ತ)	2 ಪ್ರದರ್ಶನಗಳು
ಲಿಡೋ	
ಶಾಸ್ತ್ರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಇಂಡಿಯನ್ 2 (ತ)	4 ಪ್ರದರ್ಶನಗಳು
ಪ್ರಭಾ	
ನಾಟ್‌ಔಟ್ (ಕ)	2 ಪ್ರದರ್ಶನಗಳು
ಹಿರಣ್ಯ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10.10ಕ್ಕೆ, ಮ.1ಕ್ಕೆ, ಆಕ್ಸಿಡೆಂಡ್ ಆರ್ ಕಾನ್ಸ್‌ಪಿರೆಸಿ ಗೋದ್ರಾ (ಹಿಂ): ಮ.3.45ಕ್ಕೆ, ಸಂ.4.35ಕ್ಕೆ, ಕಲ್ಕಿ 2898 ಎಡಿ (ಕ): ಸಂ.6.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.10ಕ್ಕೆ
ಸ್ಕ್ರೀನ್ 2	ಟ್ವಿಸ್ಟರ್ಸ್ (ಇಂ): ಬೆ.10.30ಕ್ಕೆ, ಹೆಜ್ಜಾರು (ಕ): ಮ.1.10ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.40ಕ್ಕೆ, ಆಕ್ಸಿಡೆಂಡ್ ಆರ್ ಕಾನ್ಸ್‌ಪಿರೆಸಿ ಗೋದ್ರಾ (ಹಿಂ): ರಾ.7.05ಕ್ಕೆ, ಕಲ್ಕಿ 2898 ಎಡಿ(3ಡಿ) (ಹಿಂ): ರಾ.10.05ಕ್ಕೆ.
ಸ್ಕ್ರೀನ್ 3	ನಾಟ್‌ಔಟ್ 2024 (ಕ): ಬೆ.10.15ಕ್ಕೆ, ಕಲ್ಕಿ 2898 ಎಡಿ (ಕ): ಮ.1ಕ್ಕೆ, ಬ್ಯಾಡ್ ನ್ಯೂಸ್ (ಹಿಂ): ಸಂ.4.30ಕ್ಕೆ, ಟ್ವಿಸ್ಟರ್ಸ್ (ಇಂ): ರಾ.7.25ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಇನ್‌ಸೈಡ್ ಔಟ್ 2 (3ಡಿ) (ಇಂ): ಬೆ.10.55ಕ್ಕೆ, ಬ್ಯಾಕ್ ಬೆಂಚರ್ಸ್ (ಕ): ಮ.1ಕ್ಕೆ, ಇಂಡಿಯನ್ 2 (ತ): ಮ.3.30ಕ್ಕೆ, ಬ್ಯಾಡ್ ನ್ಯೂಸ್ (ಹಿಂ): ರಾ.7ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821-2973519

ಸ್ಕ್ರೀನ್ 1	ಕಲ್ಕಿ 2898 ಎಡಿ (ಕ): ಬೆ.10.30ಕ್ಕೆ, ಸಂ.6ಕ್ಕೆ, ಲವ್ ಲಿ (ಕ): ಮ.1.55ಕ್ಕೆ.
ಸ್ಕ್ರೀನ್ 2	ಇಂಡಿಯನ್ 2 (ತ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (3ಡಿ)(ತೆ): ಬೆ.11.10ಕ್ಕೆ, ಮ.2.40ಕ್ಕೆ, ಇಂಡಿಯನ್ 2 (ತ): ಸಂ.6.05ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಇಂಡಿಯನ್ 2 (ತ): ಬೆ.10ಕ್ಕೆ, ಕಲ್ಕಿ 2898 ಎಡಿ (ಕ): ಮ.1.25ಕ್ಕೆ, ರಾ.7.45ಕ್ಕೆ, ಖಾಲಿ ಕುಡುಕರು (ಕ): ಸಂ.4.50ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.


ಇಂದು ಪ್ಲೇಯರ್ ಸೆಲೆಕ್ಷನ್ ಕ್ಯಾಂಪ್

MYSORE WARRIORS Powered by CYCLE PURE AGARBATHI

ಮೈಸೂರು,ಜು.21(ಪಿಎಂ)- ಮೈಸೂರು ವಾರಿಯರ್ಸ್ ಕ್ರಿಕೆಟ್ ತಂಡದ ಮಾಲೀಕತ್ವ ಹೊಂದಿರುವ ಎನ್.ಆರ್.ಗ್ರೂಪ್ ವತಿಯಿಂದ ಜು.22ರಂದು ಉದಯೋನ್ಮುಖ ಕ್ರಿಕೆಟ್ ಆಟಗಾರರಿಗೆ ಅವಕಾಶ ಕಲ್ಪಿಸಲು 'ಟ್ಯಾಲೆಂಟ್ ಹಂಟ್' ಶೀರ್ಷಿಕೆಯಡಿ ಪ್ಲೇಯರ್ ಸೆಲೆಕ್ಷನ್ ಕ್ಯಾಂಪ್ ಆಯೋಜಿಸಲಾಗಿದೆ.

ಮೈಸೂರಿನ ಮಾನಸ ಗಂಗೋತ್ರಿಯ ಎಸ್‌ಡಿಎನ್‌ಆರ್ ಸ್ಟೇಡಿಯಂನಲ್ಲಿ ಅಂದು ಬೆಳಗ್ಗೆ 11.30ಕ್ಕೆ ಸೆಲೆಕ್ಷನ್ ಕ್ಯಾಂಪ್ ನಡೆಯಲಿದ್ದು, ಮೈಸೂರು ವಾರಿಯರ್ಸ್ ವ್ಯವಸ್ಥಾಪಕ ಎಂ.ಆರ್. ಸುರೇಶ್, ಸಹಾಯಕ ತರಬೇತುದಾರ ವಿಜಯ್ ಮಾದ್ಯಾಲ್ಕರ್ ಶಿಬಿರದಲ್ಲಿ ಉಪಸ್ಥಿತರಿರಲಿದ್ದಾರೆ. ಈ ಶಿಬಿರದ ಮೂಲಕ ಮೈಸೂರು ವಾರಿಯರ್ಸ್ ತಂಡದವು ಯುವ ಆಟಗಾರರಿಗೆ ವೃತ್ತಿಪರ ಕ್ರಿಕೆಟ್‌ಗೆ ಪ್ರವೇಶಿಸುವ ಅವಕಾಶ ಒದಗಿಸುತ್ತಿದೆ. ಇಲ್ಲಿ ಆಯ್ಕೆಯಾದ ಆಟಗಾರರರು ಮುಂದೆ ನಡೆಯಲಿರುವ 2024ರ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ-20 ಪಂದ್ಯಾವಳಿಯಲ್ಲಿ ಭಾಗವಹಿಸುವ ಅವಕಾಶ ಪಡೆಯಲಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ.ಸಂ. 70225 48894 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಭಾನುವಾರ	123.10 ಅಡಿ
ಒಳಹರಿವು	70850 ಕ್ಯೂಸೆಕ್
ಹೊರಹರಿವು	52162 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಭಾನುವಾರ	2281.89 ಅಡಿ
ಒಳಹರಿವು	29855 ಕ್ಯೂಸೆಕ್
ಹೊರಹರಿವು	20000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ




ಗರಿಷ್ಠ ಮಟ್ಟ	2859 ಅಡಿ
ಭಾನುವಾರ	2854.95 ಅಡಿ
ಒಳಹರಿವು	9520 ಕ್ಯೂಸೆಕ್
ಹೊರಹರಿವು	4000 ಕ್ಯೂಸೆಕ್

ಹಸಿರು ನಮ್ಮ ಉಸಿರು

ಭಾರತ ಜಾಗತಿಕ ಪೈಪೋಟಿ ಎದುರಿಸಲು ಸಂಶೋಧನೆ, ಅಭಿವೃದ್ಧಿಗೆ ಹೆಚ್ಚಿನ ಹಣ ನೀಡುವುದು ಅತ್ಯವಶ್ಯ

ಡಿಆರ್‌ಡಿಒ ನಿವೃತ್ತ ಮಹಾ ನಿರ್ದೇಶಕ ಡಾ.ವಾಸುದೇವ ಕೆ.ಆತ್ರೆ ಅಭಿಮತ




ಮೈಸೂರಿನ ವಿಜಯನಗರದಲ್ಲಿರುವ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಮೈಸೂರು ಓಪನ್ ಫೋರಂ ಭಾನುವಾರ ಆಯೋಜಿಸಿದ್ದ 'ತಂತ್ರಜ್ಞಾನ ಬದಲಾವಣೆಯ ದೃಷ್ಟಿಕೋನ ಮತ್ತು ಭಾರತದ ಪ್ರಸ್ತುತ ಸನ್ನಿವೇಶ' ಕುರಿತ ಉಪನ್ಯಾಸದಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ನಿವೃತ್ತ ಮಹಾ ನಿರ್ದೇಶಕ ಪದ್ಮ ವಿಭೂಷಣ ಪ್ರಶಸ್ತಿ ಪುರಸ್ಕೃತ ಡಾ.ವಾಸುದೇವ್ ಕೆ.ಆತ್ರೆ ಮಾತನಾಡಿದರು(ಎಡಚಿತ್ರ). ಉಪನ್ಯಾಸದಲ್ಲಿ ಭಾಗವಹಿಸಿರುವ ಸಭಿಕರನ್ನು (ಬಲಚಿತ್ರ) ಕಾಣಬಹುದು.

ಮೈಸೂರು, ಜು.21(ಬಿಎಲ್‌ಯು)– ಭಾರತ ಜಾಗತಿಕವಾಗಿ ಪೈಪೋಟಿ ಎದುರಿಸಿ ಅಗ್ರಸ್ಥಾನದಲ್ಲಿ ನಿಲ್ಲಲು ಸಂಶೋಧನೆ ಮತ್ತು ಅಭಿವೃದ್ಧಿ (ಆರ್ ಅಂಡ್ ಡಿ) ಕಾರ್ಯಕ್ಕೆ ಬಜೆಟ್‌ನಲ್ಲಿ ಸರ್ಕಾರ ಹೆಚ್ಚಿನ ಹಣ ನೀಡುವುದು ಅತ್ಯವಶ್ಯ ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ನಿವೃತ್ತ ಮಹಾ ನಿರ್ದೇಶಕ ಪದ್ಮ ವಿಭೂಷಣ ಪ್ರಶಸ್ತಿ ಪುರಸ್ಕೃತ ಡಾ.ವಾಸುದೇವ್ ಕೆ.ಆತ್ರೆ ಅಭಿಪ್ರಾಯಪಟ್ಟರು.

ಮೈಸೂರಿನ ವಿಜಯನಗರದಲ್ಲಿರುವ ಕಲ್ಪ ಕ್ಷೇತ್ರ ಸಭಾಂಗಣದಲ್ಲಿ ಮೈಸೂರು ಓಪನ್ ಫೋರಂ ಆಯೋಜಿಸಿದ್ದ ತಂತ್ರಜ್ಞಾನ ಬದಲಾವಣೆಯ ದೃಷ್ಟಿಕೋನ ಮತ್ತು ಭಾರತದ ಪ್ರಸ್ತುತ ಸನ್ನಿವೇಶ ಕುರಿತ ಉಪನ್ಯಾಸದಲ್ಲಿ ಮಾತನಾಡಿದ ಅವರು, ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಪ್ರಗತಿ ಸಾಧಿಸಿದರೆ ಸಹಜವಾಗಿ ದೇಶ ಇತರೆ ಕ್ಷೇತ್ರಗಳು ಅಭಿವೃದ್ಧಿ ಪಥದತ್ತ ಸಾಗಲಿದೆ ಎಂದರು.

ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಚೈನಾ ಒಟ್ಟಾರೆ ಜಿಡಿಪಿಯಲ್ಲಿ ಶೇಕಡ 4ರಷ್ಟು ಹಣ ಖರ್ಚು ಮಾಡಿದರೆ, ಅಮೇರಿಕಾ ಶೇಕಡ 2.5ರಷ್ಟು ಹಣ ವಿನಿಯೋಗಿಸಲಿದೆ. ಜರ್ಮನಿ ಶೇಕಡ 3ರಷ್ಟು ಸಂಶೋಧನೆ ಮತ್ತು ಅಭಿವೃದ್ಧಿಗೆ ವೆಚ್ಚ ಮಾಡಲಿದೆ. ಆದರೆ ಭಾರತ ಒಟ್ಟಾರೆ ಜಿಡಿಪಿಯಲ್ಲಿ ಶೇಕಡ 0.6ರಷ್ಟು ಮಾತ್ರ ಹಣ ನೀಡಲಿದೆ. ಈ ಪ್ರಮಾಣ ಹೆಚ್ಚಾಗಬೇಕು. ಆಗ ಭಾರತ ವಿಶ್ವದ ಇತರೆ ರಾಷ್ಟ್ರಗಳ ಜೊತೆ ಪೈಪೋಟಿ ನೀಡಲು ಸಾಧ್ಯವಾಗುತ್ತದೆ ಎಂದು ಡಾ.ವಾಸುದೇವ ಕೆ.ಆತ್ರೆ ಅಭಿಪ್ರಾಯ ವ್ಯಕ್ತಪಡಿಸಿದರು.

ಇಷ್ಟಾದರೂ ವಿಶ್ವದ ಹಲವು ರಾಷ್ಟ್ರಗಳ ಪೈಪೋಟಿ ಎದುರಿಸುತ್ತಿರುವ ಭಾರತದ ಅಭಿವೃದ್ಧಿ ಇತ್ತೀಚೆಗೆ ಹಂತ ಹಂತವಾಗಿ ಏಕಮುಖವಾಗಿ ಏರುತ್ತಿದೆ. ಇದು ಒಳ್ಳೆಯ ಬೆಳವಣಿಗೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಭಾರತದಲ್ಲಿ ಶೇಕಡ 30ರಷ್ಟು ಯುವ ಜನರಿದ್ದಾರೆ. ಈ ಹಿನ್ನೆಲೆ ಇನ್ನು 20 ವರ್ಷ ಭಾರತಕ್ಕೆ ಇದು ಪ್ರಮುಖ ಕಾಲಘಟ್ಟವಾಗಿದೆ. ಯುವ ಪೀಳಿಗೆಯನ್ನು ಬಳಸಿಕೊಂಡು ಭಾರತ ಅಭಿವೃದ್ಧಿ ಪಥದಲ್ಲಿ ಸಾಗಬೇಕು. ಭಾರತದಲ್ಲಿ ಅಗಾಧ ಯುವ ಶಕ್ತಿ ಇದ್ದರೂ ಸಮರ್ಥ ಬಳಕೆಗೆ ಉತ್ತಮ ಯೋಜನೆಗಳಿಲ್ಲ. ಇಂತಹ ಹಲವು ಲೋಪಗಳನ್ನು ಸರಿಪಡಿಸಿಕೊಳ್ಳಬೇಕು ಎಂದು ಡಾ.ವಾಸುದೇವ ಕೆ.ಆತ್ರೆ ಹೇಳಿದರು.

> "ಭಾರತದಲ್ಲಿ ತಂತ್ರಜ್ಞಾನ ಅಳವಡಿಕೆ ಮೂಲಕ ಯೋಜನೆಗಳ ಬಗ್ಗೆ ಚಿಂತನ–ಮಂಥನವಾಗಬೇಕು. ಇದು ತಂತ್ರಜ್ಞಾನ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗದೆ, ಸಾಮಾಜಿಕ ಕ್ಷೇತ್ರಕ್ಕೂ ಇದರ ವ್ಯಾಪ್ತಿ ವಿಸ್ತರಣೆಯಾಗಬೇಕು. ಭಾರತದ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರದ ಹಸ್ತಕ್ಷೇಪ ಹೆಚ್ಚಾಗಿದೆ. ಇದು ವಿಶ್ವವಿದ್ಯಾನಿಲಯಗಳ ಕುಲಪತಿಗಳ ಆಯ್ಕೆ ಹಾಗೂ ಪರೀಕ್ಷೆಗಳ ಮೇಲೆ ಗಾಢ ಪರಿಣಾಮ ಬೀರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ನೀತಿ ನಿಯಮ ಹಾಗೂ ನಡವಳಿಕೆಗಳು ಬದಲಾಗಬೇಕು. **–ಡಾ.ವಾಸುದೇವ ಕೆ.ಅತ್ರೆ**

ಶಿಕ್ಷಣ ಕ್ಷೇತ್ರದ ಭವಿಷ್ಯವನ್ನು ನಿರ್ಧರಿಸುವ ತೀರ್ಮಾನವನ್ನು ಆ ಕ್ಷೇತ್ರದವರಿಗೆ ಬಿಡಬೇಕು. ಆಗ ಉತ್ತಮ ಶಿಕ್ಷಣ ನೀತಿ ರೂಪಿಸುವ ಸಂಬಂಧ ಹೊಸ ಆಲೋಚನೆ ಹಾಗೂ ತಂತ್ರಜ್ಞಾನ ಹುಟ್ಟಿಕೊಳ್ಳುತ್ತದೆ ಎಂದು ಡಾ.ವಾಸುದೇವ ಕೆ.ಆತ್ರೆ ಅಭಿಪ್ರಾಯಪಟ್ಟರು.

ಈ ಮೊದಲು ಒಂದು ಚಿಪ್‌ನಲ್ಲಿ ಕೆಲವು ಟ್ರಾನ್ಸಿಸ್ಟರ್‌ಗಳಿತ್ತು. ಆದರೆ ಈಗ ಒಂದು ಚಿಪ್‌ನಲ್ಲಿ ಮಿಲಿಯನ್‌ಗಟ್ಟಲೆ ಟ್ರಾನ್ಸಿಸ್ಟರ್‌ಗಳಿರುತ್ತದೆ. ಈ ಮೂಲಕ ರಕ್ಷಣೆ, ಮನೋರಂಜನೆ ಸೇರಿದಂತೆ ಹಲವು ಕ್ಷೇತ್ರಗಳ ತಂತ್ರಜ್ಞಾನ ಬೆಳವಣಿಗೆ ಸಾಧಿಸುತ್ತಾ ಬಂದಿತು. ಕಂಪ್ಯೂಟರ್‌ಗಳ ರಚನೆಯಲ್ಲಿ ಕೂಡ ಕ್ಷಿಪ್ರ ಕ್ರಾಂತಿಯಾಗಿದೆ. ಡೇಟಾ ಶೇಖರಣೆಯಲ್ಲಿ ಗಿಗಾ ಬೈಟ್‌ಗಳಿರುವ ಸೂಪರ್ ಕಂಪ್ಯೂಟರ್‌ಗಳು ಬಂದಿದೆ ಇದರಿಂದ ಗೂಗಲ್ ಸೇರಿದಂತೆ ಇತರೆ ಮಾಧ್ಯಮಗಳ ಮೂಲಕ ವಿಶ್ವದ ಮಾಹಿತಿಯನ್ನು ಬೆರಳ ತುದಿಯಲ್ಲೆ ಪಡೆಯಬಹುದು ಎಂದರು. ಇನ್ನು ಮಾರುಕಟ್ಟೆ ವ್ಯವಹಾರದಲ್ಲಿ ಬ್ಲಾಕ್ ಚೈನ್ ಆಧಾರಿತ ಬಿಟ್ ಕಾಯಿನ್‌ಗಳು ಪರಿಚಯಗೊಂಡಿದೆ. ಅಲ್ಲದೆ ಮಾರುಕಟ್ಟೆ ಸೇರಿದಂತೆ ಇತರೆ ಉತ್ಪನ್ನಗಳ ಸಾಗಾಟ ವ್ಯವಸ್ಥೆಯಲ್ಲಿ ಪಾರದರ್ಶಕತೆ ಕಾಪಾಡಲು ಬಾರ್ ಕೋಡಿಂಗ್ ವ್ಯವಸ್ಥೆ ಕೂಡ ಬಂದಿದೆ. ಇದರಿಂದ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆ ಮೂಲಕ ಮಾರುಕಟ್ಟೆ ಕ್ಷೇತ್ರ ಕೂಡ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ ಎಂದು ಹೇಳಿದರು.


ಇದೆಲ್ಲದರ ಜೊತೆಗೆ ರೋಬೋಟ್‌ನಲ್ಲಿ ಕೂಡ ಬಹಳಷ್ಟು ತಂತ್ರಜ್ಞಾನ ಅಭಿವೃದ್ಧಿಯಾಗಿದೆ. ಭವಿಷ್ಯದ ಗೃಹೋಪಯೋಗಿ ವಸ್ತುಗಳ ಪಟ್ಟಿಯಲ್ಲಿ ಗೃಹ ಕೆಲಸದ ರೋಬೋಟ್‌ಗಳು ಕೂಡ ಕೆಲಸ ನಿರ್ವಹಿಸಲಿದೆ. ಜೊತೆಗೆ ದೊಡ್ಡ ಪ್ರಮಾಣದ ಡ್ರೋಣ್‌ನಿಂದ ಹಿಡಿದು ಸಣ್ಣ ಗಾತ್ರದ ಡ್ರೋಣ್‌ಗಳು ಕೂಡ ಕಾರ್ಯ ನಿರ್ವಹಿಸುತ್ತಿವೆ ಎಂದು ಹೇಳಿದರು.

ಇತ್ತೀಚೆಗೆ ಕೃತಕ ಬುದ್ಧಿಮತ್ತೆ(ಎಐ)ಯಲ್ಲಿ ಕ್ಷಿಪ್ರ ಕ್ರಾಂತಿಯಾಗುತ್ತಿದೆ. ಪ್ರತಿಯೊಂದು ಕ್ಷೇತ್ರದಲ್ಲೂ ಕೃತಕ ಬುದ್ಧಿಮತ್ತೆ ಪ್ರಭಾವಶಾಲಿಯಾಗಿ ನೆಲೆಯೂರಲಿದೆ. ಈ ಸಂಬಂಧ ಕಾಲೇಜುಗಳಲ್ಲಿ ಎಐ ಬಗ್ಗೆ ಪಠ್ಯಗಳನ್ನು ಪರಿಚಯಿಸಿದ್ದು, ಉಪನ್ಯಾಸ ಹಾಗೂ ಕಾರ್ಯಾಗಾರಗಳು ನಡೆಯುತ್ತಿವೆ ಎಂದು ಡಾ.ವಾಸುದೇವ ಕೆ.ಆತ್ರೆ ಹೇಳಿದರು. ಬಾಹ್ಯಾಕಾಶ ಪ್ರವಾಸೋದ್ಯಮ ಕೂಡ ಇತ್ತೀಚಿಗೆ ಟ್ರೆಂಡ್ ಆಗಿದೆ. ದಿನ ಕಳೆದಂತೆ ಇದರ ವೇಗ ಕೂಡ ಹೆಚ್ಚಾಗುತ್ತಿದೆ. ತ್ರಿ ಡಿ ಪ್ರಿಂಟಿಂಗ್ ಮಾತ್ರವಲ್ಲದೆ ವೈದ್ಯಕೀಯ ಮತ್ತು ಆರೋಗ್ಯ ಕ್ಷೇತ್ರದಲ್ಲೂ ತಂತ್ರಜ್ಞಾನದ ಆವಿಷ್ಕಾರಗಳು ನಡೆಯುತ್ತಿವೆ. ಒಟ್ಟಾರೆ ಮೈಕ್ರೋ ಹಾಗೂ ನ್ಯಾನೊ ಜಾಗತಿಕವಾಗಿ ಪ್ರಬಲಶಾಲಿಯಾಗಿ ಬೆಳೆಯುತ್ತಿದೆ. ವಿಶ್ವದ ಇತರೆ ರಾಷ್ಟ್ರಗಳಂತೆ ಭಾರತ ಕೂಡ ಇಂತಹ ಹಲವು ಕ್ಷೇತ್ರಗಳಲ್ಲಿ ತಾಂತ್ರಿಕವಾಗಿ ಬೆಳವಣಿಗೆ ಸಾಧಿಸುತ್ತಿದೆ. ತಂತ್ರಜ್ಞಾನ ಅಭಿವೃದ್ಧಿಯಲ್ಲಿ ಪೈಪೋಟಿ ನೀಡುತ್ತಿದೆ ಎಂದರು. ಇದೇ ವೇಳೆ ಮೈಸೂರು ಓಪನ್ ಫೋರಂ ಸದಸ್ಯ ರೊಡನೆ ಡಾ.ವಾಸುದೇವ ಕೆ.ಆತ್ರೆ ಸಂವಾದ ನಡೆಸಿದರು.

ಕ್ಷತ್ರಿಯರಿಗೆ ಶಸ್ತ್ರಾಭ್ಯಾಸದ ಜೊತೆಗೆ ವೇದಾಧ್ಯಯನ ಕಡ್ಡಾಯವಾಗಿತ್ತು

ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದಂಗಳು ಅಭಿಮತ

ಮೈಸೂರು,ಜು.21(ಎಸ್‌ಪಿಎನ್)–ಹಿಂದಿನ ಕಾಲದಲ್ಲಿ ಕ್ಷತ್ರಿಯರಿಗೆ ಶಸ್ತ್ರಾಭ್ಯಾಸದ ಜೊತೆಗೆ ವೇದಾಧ್ಯಯನ ಕಡ್ಡಾಯವಾಗಿತ್ತು. ಏಕೆಂದರೆ, ಮಂತ್ರ ಸಿದ್ಧಿ ಶಸ್ತ್ರಗಳನ್ನು ಉಪಯೋಗಿಸಲು ಮಂತ್ರಗಳ ಪಠಣ ಕ್ಷತ್ರಿಯರಿಗೆ ಅಗತ್ಯವಾಗಿತ್ತು ಎಂದು ಉಡುಪಿ ಪಲಿಮಾರು ಮಠದ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದಂಗಳವರು ಪ್ರವಚನ ನೀಡಿದರು.



ಉಡುಪಿಯ ಪಲಿಮಾರು ಮಠದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು 'ಶ್ರೀಮನ್ಮಹಾಭಾರತ'ದ ಕುರುಕ್ಷೇತ್ರ ಪ್ರವಚನ ನೀಡಿದರು.

ಮೈಸೂರು ಶ್ರೀ ಕೃಷ್ಣಧಾಮ ಆವರಣದಲ್ಲಿ ಶ್ರೀ ಕೃಷ್ಣ ಟ್ರಸ್ಟ್ ಹಾಗೂ ಶ್ರೀ ಕೃಷ್ಣಮಿತ್ರ ಮಂಡಳಿ ಸಹಯೋಗದೊಂದಿಗೆ ಆಯೋಜಿಸಿದ್ದ 'ಶ್ರೀಮನ್ಮಹಾಭಾರತ'ದ ಕುರುಕ್ಷೇತ್ರ ಕುರಿತ ಪ್ರವಚನ ನೀಡಿದರು. ಮಹಾಭಾರತದ ಕುರುಕ್ಷೇತ್ರ ಯುದ್ಧ 'ಧರ್ಮಯುದ್ಧ'. ಈ ಯುದ್ಧದಲ್ಲಿ ಪಾಂಡವರು–ಕೌರವರು ಶ್ರೀ ಕೃಷ್ಣ ಪರಮಾತ್ಮನ ಸಮ್ಮುಖದಲ್ಲಿ ಮೊದಲು ಮಾತುಕತೆ ನಡೆಸಿ, ನಂತರ ಯುದ್ಧದಲ್ಲಿ ಪಾಲ್ಗೊಂಡಿದ್ದ ಕೆಲ ಘಟನಾವಳಿ ಉಲ್ಲೇಖಿಸಿ ತಿಳಿಸಿದರು. ಕೌರವರು ಮತ್ತು ಪಾಂಡವರು ಕ್ಷತ್ರಿಯರಾದ್ದರಿಂದ ಶಸ್ತ್ರ–ಅಸ್ತ್ರಗಳ ಜೊತೆಗೆ ವೇದಾಧ್ಯಯನ ಕಡ್ಡಾಯವಾಗಿತ್ತು. ಏಕೆಂದರೆ, ಹಿಂದಿನ ಯುದ್ಧಭೂಮಿಯಲ್ಲಿ ಶಸ್ತ್ರ ಉಪಯೋಗಿಸಲು ವೇದ ಮಂತ್ರ ಪಠಣ ಮಾಡಬೇಕಿತ್ತು. ಈ ಹಿನ್ನೆಲೆಯಲ್ಲಿ ಕ್ಷತ್ರಿಯರಿಗೆ ವೇದಾಧ್ಯಯನ ಕಂಠಪಾಠ ಮಾಡಿಸಲಾಗುತ್ತಿತ್ತು ಎಂದರು. ಕೌರವರು–ಪಾಂಡವರ ನಡುವಿನ ಯುದ್ಧವನ್ನು ಶ್ರೀಕೃಷ್ಣ ಪರಮಾತ್ಮ ಶಂಖ ಊದಿ ಪ್ರಾರಂಭಿಸಿದ್ದರು. ಶ್ರೀಕೃಷ್ಣ ಪರಮಾತ್ಮ ಊದಿದ ಶಂಖದ ನಾದಕ್ಕೆ ಯುದ್ಧಭೂಮಿಯಲ್ಲಿ ಶತ್ರುಗಳು ಪತರಗುಟ್ಟುತ್ತಾರೆ ಎಂಬ ಪ್ರತೀತಿ. ಈಗಲೂ ಜಾಗಟೆ, ಶಂಖ ಊದಿ ಶತ್ರು ವಿನಾಶಕ್ಕೆ ಭಗವಂತನಲ್ಲಿ ಪ್ರಾರ್ಥಿಸುತ್ತಾರೆ. ಈ ಹಿನ್ನೆಲೆಯಲ್ಲಿ ಏಕ ಮಾತ್ರ ವ್ಯಕ್ತಿ ಮೋದಿ ಅವರು, ಹಿಂದೂ ಆಚರಣೆಗಳ ಮೇಲೆ ನಂಬಿಕೆಯಿಟ್ಟು, ಕೊರೊನಾ ವೈರಸ್ ಸರ್ವನಾಶಕ್ಕೆ ಶಂಖ ಊದಲು, ಜಾಗಟೆ ಬಾರಿಸಲು ಸಾರ್ವಜನಿಕರಿಗೆ ಕರೆ ನೀಡಿದ್ದರು ಎಂದರು. ಈಗ ನಡೆಯುವ ಯುದ್ಧಗಳು ಕುತಂತ್ರದಿಂದ ಕೂಡಿರುತ್ತವೆ ಎಂದರು. ಈಗಿನ ಸೈನಿಕರಿಗೆ ಅತ್ಯಾಧುನಿಕ ಶಸ್ತ್ರಗಳನ್ನು ನೀಡುತ್ತಾರೆ. ದೇಶ ರಕ್ಷಿಸಲು ಸೇನೆಗೆ ಯುವಕರು ಹೆಚ್ಚಾಗಿ ಸೇರಲಿ ಎಂದು ಕೇಂದ್ರ ಸರ್ಕಾರ ಹೊಸ ನೇಮಕಾತಿ ವ್ಯವಸ್ಥೆ ಜಾರಿಗೆ ತಂದಿದೆ. ಕೆಲವರು ಅದಕ್ಕೂ ಕುಹಕವಾಡುವವರಿದ್ದಾರೆ ಎಂದು ಪರೋಕ್ಷವಾಗಿ ಅಗ್ನಿವೀರ್, ಅಗ್ನಿಪಥ್ ಸೇನಾ ನೇಮಕಾತಿಯನ್ನು ಬೆಂಬಲಿಸಿದರು.

ಸರ್ಕಾರಿ ಭೂಮಿ ತೆರವು ಕಾರ್ಯಾಚರಣೆ

ಮೈಸೂರು, ಜು.21(ಬಿಎಲ್‌ಯು)–ಸರ್ಕಾರಿ ಜಮೀನು ಒತ್ತುವರಿ ತೆರವು ಕಾರ್ಯಾಚರಣೆ ಮುಂದುವರೆಸಿರುವ ಜಿಲ್ಲಾಡಳಿತ ಮೈಸೂರಿನ ಜಟ್ಟಿಹುಂಡಿಯಲ್ಲಿ ಸರ್ಕಾರಿ ಭೂಮಿ ಅತಿಕ್ರಮಿಸಿಕೊಂಡಿದ್ದ ಜಾಗವನ್ನು ತೆರವು ಮಾಡಿದೆ. ಮೈಸೂರಿನ ಇಲವಾಲ ಹೋಬಳಿ ಜಟ್ಟಿಹುಂಡಿ ಗ್ರಾಮದ ಸರ್ವೆ ನಂ.36/7, 53/1 ಮತ್ತು 36/4 ಕ್ಕೆ ಸೇರಿದ ಸರ್ಕಾರಿ ಜಮೀನನ್ನು ಕೆಲವರು ಒತ್ತುವರಿ ಮಾಡಿಕೊಂಡಿದ್ದರು. ತಾಲೂಕು ಆಡಳಿತ ಈ ಸಂಬಂಧ ದಾಖಲಾತಿ ಪರಿಶೀಲನೆ ಮಾಡಿ, ಸ್ಥಳ ಮಹಜರು ಮಾಡಿದ ಸಂದರ್ಭದಲ್ಲಿ ಸರ್ಕಾರಿ ಭೂಮಿ ಒತ್ತುವರಿ ಮಾಡಿಕೊಂಡಿರುವುದು ದೃಢಪಟ್ಟಿತ್ತು. ಈ ಹಿನ್ನೆಲೆಯಲ್ಲಿ ತಹಶೀಲ್ದಾರ್ ಮಹೇಶ್‌ಕುಮಾರ್ ನೇತೃತ್ವದ ಅಧಿಕಾರಿಗಳು ಸರ್ಕಾರಿ ಭೂಮಿ ಒತ್ತುವರಿಯನ್ನು, ತೆರವು ಮಾಡಿ, ಸರ್ಕಾರದ ವಶಕ್ಕೆ ಪಡೆದಿದ್ದಾರೆ. ಒತ್ತುವರಿ ತೆರವು ಕಾರ್ಯಾಚರಣೆ ವೇಳೆ ಗಲಾಟೆ ಆಗಬಾರದೆಂದು ಹೆಚ್ಚಿನ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಸಾಲ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಮೈಸೂರು,ಜು.21–ಪುರಸಭೆ, ಕೃಷ್ಣರಾಜನಗರ ವತಿಯಿಂದ 2024–25ನೇ ಸಾಲಿನ ಡೇ–ನಲ್ಮ್ ಯೋಜನೆಯಡಿ ಸ್ವಯಂ ಉದ್ಯೋಗ, ಗುಂಪು ಉದ್ಯೋಗ, ಗುಂಪುಗಳ ಕ್ರೆಡಿಟ್ ಲಿಂಕೇಜ್, ಕೌಶಲ ತರಬೇತಿ, ಪ್ರಧಾನ ಮಂತ್ರಿ ಕಿರು ಆಹಾರ ಸುರಕ್ಷಿತ ತಯಾರಿಕೆ, ಸ್ವ–ಸಹಾಯ ಗಂಪುಗಳಿಗೆ ಪ್ರಾದೇಶಿಕೆ ಮಟ್ಟದ ಒಕ್ಕೂಟ, ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ ಗುಂಪುಗಳ ರಚನೆ, ಬೀದಿಬದಿ ವ್ಯಾಪಾರಸ್ಥರ ಸೌಲಭ್ಯಕ್ಕಾಗಿ ಕೃಷ್ಣರಾಜನಗರ ಪುರಸಭೆಯ ವ್ಯಾಪ್ತಿಯಲ್ಲಿ ಅರ್ಜಿಗಳನ್ನು ಜು.31ರೊಳಗೆ ಸಲ್ಲಿಸಬೇಕು. ಮಾಹಿತಿಗೆ ದೂ.ಸ: 08223–262242.

ಸಿಎಂ ಪತ್ನಿಗೆ ದಾನವಾಗಿ ಬಂದ ಜಮೀನಿನ ಮೂಲ ಮಾಲೀಕನ ಕುಟುಂಬಸ್ಥರಿಗೂ ಪರಿಹಾರದಲ್ಲಿ ಪಾಲು ಬರಬೇಕು

ಮಾಜಿ ಸಚಿವ ಎನ್.ಮಹೇಶ್ ಪ್ರತಿಪಾದನೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಎನ್.ಮಹೇಶ್ ಮಾತನಾಡಿದರು. ಶಾಸಕ ಶ್ರೀವತ್ಸ, ಮಾಜಿ ಶಾಸಕ ಎಸ್.ಬಾಲರಾಜು, ರಘು ಕೌಟಿಲ್ಯ, ಶೈಲೇಂದ್ರ,ಅಶ್ವಿನಿ ಶರತ್ ಚಿತ್ರದಲ್ಲಿದ್ದಾರೆ.

ಮೈಸೂರು,ಜು.21(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಉಡುಗೊರೆ ರೂಪದಲ್ಲಿ ನೀಡಿರುವ ಜಮೀನು ಮೂಲ ಪಿತ್ರಾರ್ಜಿತ ಆಸ್ತಿಯಾಗಿದ್ದು, ನಿಂಗ ಅವರ ಇತರ ಕುಟುಂಬಸ್ಥರಿಗೂ ಪರಿಹಾರ ದೊರಕಿಸಿಕೊಡುವ ಯತ್ನ ನಡೆಯಬೇಕಾಗಿದೆ ಎಂದು ಮಾಜಿ ಸಚಿವ ಎನ್.ಮಹೇಶ್ ಪ್ರತಿಪಾದಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಸದ್ದು ಮಾಡಿರುವ ಮುಡಾ 50:50ರ ಅನುಪಾತದ ನಿವೇಶನ ಹಗರಣಕ್ಕೆ ಸಂಬಂಧಿಸಿದಂತೆ ಸಿಎಂ ಕುಟುಂಬದ ಹೆಸರು ಕೇಳಿ ಬರುತ್ತಿದೆ. ಈಗ ಅದರ ವಿಷಯ ಅಪ್ರಸ್ತುತ. ಆದರೆ ಸಿಎಂ ಪತ್ನಿ ಪಾರ್ವತಿ ಅವರ ಹೆಸರಿಗೆ ಬಂದಿದ್ದ ಕೆಸರೆಯಲ್ಲಿನ ಸರ್ವೆ ನಂ.464ರ 3.16 ಎಕರೆ ಜಾಗವನ್ನು ಮಾರಾಟ ಮಾಡಿದವರು ಅದು ಪಿತ್ರಾರ್ಜಿತ ಆಸ್ತಿಯಾಗಿದ್ದರೂ ಕುಟುಂಬದ ಇತರರ ಸಮ್ಮತಿ ಪಡೆದಿಲ್ಲ. ಹೀಗಾಗಿ ಕುಟುಂಬದ ಇತರರಿಗೂ ಪರಿಹಾರ ನೀಡಬೇಕಿದೆ ಎಂದರು.

ಇದುವರೆಗೂ ಅದು ದಲಿತರಿಗೆ ಬಂದಿದ್ದ ಗ್ರಾಂಟ್ ಭೂಮಿ ಎಂಬ ತಪ್ಪು ಕಲ್ಪನೆ ಇತ್ತು. ಆದರೆ 1935ರಲ್ಲಿ ನಿಂಗ ಎಂಬುವರು ಹರಾಜಿನಲ್ಲಿ ಖರೀದಿ ಮಾಡಿದ್ದರು. ಅವರಿಗೆ ಮಲ್ಲಯ್ಯ, ಮೈಲಾರಯ್ಯ ಹಾಗೂ ದೇವರಾಜ ಎಂಬ ಮೂವರು ಮಕ್ಕಳಿದ್ದರು. ಇವರಲ್ಲಿ ದೇವರಾಜ ಎಂಬುವವರು ಸಿಎಂ ಪತ್ನಿ ಪಾರ್ವತಮ್ಮನವರ ಸಹೋದರ ಮಲ್ಲಿಕಾರ್ಜುನ ಸ್ವಾಮಿ ಅವರಿಗೆ ಆ ಜಮೀನು ಮಾರಾಟ ಮಾಡಿದ್ದಾರೆ. ಇದು ಪಿತ್ರಾರ್ಜಿತ ಆಸ್ತಿಯಾಗಿರುವ ಕಾರಣ ಇನ್ನುಳಿದ ಸಹೋದರರು ಅಥವಾ ಅವರ ಮಕ್ಕಳ ಸಹಿ, ಸಮ್ಮತಿ ಪಡೆದು ಮಾರಾಟ ಮಾಡಬೇಕಾಗಿತ್ತು. ಆದರೆ ಆ ರೀತಿ ಮಾಡಿಲ್ಲ. ತಾವೊಬ್ಬರೇ ಹೇಗೋ ಇತರರ ಹಕ್ಕು ಖುಲಾಸೆ ಮಾಡಿಸಿ ಮಾರಾಟ ಮಾಡಿದ್ದಾರೆ ಎಂದು ತಿಳಿಸಿದರು.

ಸಿಎಂ ಪತ್ನಿಯವರ ಸಹೋದರರಿಗೆ ಆ ಜಮೀನು ಮಾರಾಟ ಮಾಡಿರುವುದೇ ಊರ್ಜಿತವಲ್ಲ. ಇದಲ್ಲದೆ, ಮುಡಾ ಆ ಜಮೀನಿನಲ್ಲಿ ನಿವೇಶನ ರಚಿಸಿ, ಅದಕ್ಕೆ ಸಂಬಂಧಿಸಿದಂತೆ 50:50 ಅನುಪಾತದ ಪ್ರಕಾರ ಸಿಎಂ ಅವರ ಪತ್ನಿ ಪಾರ್ವತಿ ಅವರಿಗೆ ಕೆಲ ನಿವೇಶನ ನೀಡಿದೆ. ಹಗರಣ ಬೆಳಕಿಗೆ ಬಂದ ನಂತರ ಸಿಎಂ ಹೇಳಿಕೆ ನೀಡಿ, ತಮಗೆ ನಿವೇಶನ ಬೇಡ, ಬದಲಾಗಿ ಆ ಜಮೀನಿನ ಈಗಿನ ಮೌಲ್ಯವಾದ 62 ಕೋಟಿ ಪರಿಹಾರ ನೀಡಲಿ ಎಂದು ಕೇಳಿದ್ದಾರೆ. ವಾಸ್ತವವಾಗಿ ಆ ಪರಿಹಾರದಲ್ಲಿ ಜಮೀನಿನ ಮೂಲ ಹಕ್ಕುದಾರರಿಗೂ ಪಾಲು ಬರಬೇಕಾಗಿದೆ ಎಂದು ಒತ್ತಾಯಿಸಿದರು.

ಮೂಲ ಮಾರಾಟದಲ್ಲಿಯೇ ಗೊಂದಲವುಂಟಾಗಿದ್ದು, ತಾವು ಮೂಲ ಕುಟುಂಬದ ಕೆಲವರನ್ನು ಭೇಟಿ ಮಾಡಿ ಮಾಹಿತಿ ಸಂಗ್ರಹಿಸಿದ್ದೇವೆ. ತಮಗೆ ಅದು ಮಾರಾಟ ಆಗಿರುವುದು ತಿಳಿದಿರಲಿಲ್ಲ. ಪಿತ್ರಾರ್ಜಿತ ಆಸ್ತಿಯಲ್ಲಿ ತಮಗೂ ಪಾಲು ಬರಬೇಕಾಗಿತ್ತು. ಆದರೆ ಅದು ತಪ್ಪಿ ಹೋಗಿದೆ. ಹೀಗಾಗಿ ದಲಿತ ಕುಟುಂಬದವರಾದ ತಮಗೆ ಅದಕ್ಕೆ ಸಂಬಂಧಿಸಿದ ಪರಿಹಾರದಲ್ಲಿ ಪಾಲು ಬರಬೇಕೆಂದು ಕೋರಿದರು. ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗೆ ಕುಟುಂಬದವರಿಂದ ಮನವಿ ಕೊಡಿಸಿದ್ದು, ಸಂಬಂಧಿಸಿದವರು ದಲಿತ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಬೇಕಾಗಿದೆ ಎಂದರು.

ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ, ಶಾಸಕ ಶ್ರೀವತ್ಸ, ಮಾಜಿ ಶಾಸಕ ಬಾಲರಾಜು, ಮಾಜಿ ಉಪ ಮೇಯರ್ ಶೈಲೇಂದ್ರ, ಮಾಜಿ ಕಾರ್ಪೊರೇಟರ್ ಅಶ್ವಿನಿ ಶರತ್ ಉಪಸ್ಥಿತರಿದ್ದರು.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ನಮೂದಿಸಿರುವ ಷೆಡ್ಯೂಲು ಸ್ವತ್ತನ್ನು, ನಮ್ಮ ಕಕ್ಷಿಗಾರರಾದ ಶ್ರೀ.ಹೆಚ್.ಎಸ್.ರಂಗನಾಥ ಬಿನ್.ಲೇಟ್.ರಾಮಣ್ಣ, ಹಳೇಪುರ ಗ್ರಾಮ, ದೊಡ್ಡಕವಲಂದೆ ಹೋಬಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ, ಇವರು, ಸ್ವತ್ತಿನ ಮಾಲೀಕರಾದ 1. ಜಿ.ಉಷಾರಾಣಿ ಕೋಂ.ಜಿ.ಎಸ್. ಶಾಂತಕುಮಾರ್ ಬಿನ್. ಲೇಟ್. ಎಂ.ಸಿ. ಚಂದ್ರಕಾಂತಮ್ಮ, ಕಲ್ಯಾಣ ನಗರ, ಬೆಂಗಳೂರು, 2. ಜಿ.ಸಿ. ರೂಪ, ಕೋಂ.ಎನ್. ರಾಜೇಂದ್ರ ಪ್ರಸಾದ್, ಬಿನ್.ಲೇಟ್ ಎಂ.ಸಿ.ಚಂದ್ರಕಾಂತಮ್ಮ, ಜ್ಞಾನ ಭಾರತೀ ಅಂಚೆ. ಕೆ.ಎಚ್.ಸಿಎಸ್. ಲೇಔಟ್, ಬೆಂಗಳೂರು. 3. ಎಲ್.ಜಿ. ನಂದಿಮಠ ಬಿನ್. ಗುರುಪಾದಯ್ಯ, 4.ನಿವೇದಿತಾ ನಂದಿಮಠ ಬಿನ್.ಲೇಟ್. ಜಯಶ್ರೀ, 5. ಪಣೀಶ ನಂದಿಮಠ @ ಪಣೀಶಲಿಂಗ ಬಸವ ನಂದಿಮಠ, ಎ.ಡಬ್ಲ್ಯೂ.ಎಚ್.ಒ ಕಾಲೋನಿ, ಕನ್ನಮಂಗಲ ವೈಟ್ ಫೀಲ್ಡ್, ಬೆಂಗಳೂರು, ನಿವಾಸಿಗಳು. ಇವರುಗಳಿಂದ ಶುದ್ಧ ಕ್ರಯಕ್ಕೆ ಪಡೆಯಲು ಇಚ್ಛಿಸಿರುತ್ತಾರೆ. ಸದರಿ ಸ್ವತ್ತಿನ ಮೇಲೆ ಯಾರಿಗಾದರೂ, ಹಕ್ಕು, ಹಿತಾಸಕ್ತಿ, ಇದ್ದಲ್ಲಿ ಅಥವಾ ತಮ್ಮ ತಕರಾರು ಏನಾದರೂ ಇದ್ದಲ್ಲಿ, ಅಂತಹ ವ್ಯಕ್ತಿಗಳು, ತಮ್ಮ ತಕರಾರನ್ನು ಸಂಬಂಧಪಟ್ಟ ಸೂಕ್ತ ದಾಖಲೆಗಳೊಂದಿಗೆ, ಕೆಳಗೆ ನಮೂದಿಸಿರುವ ನಮ್ಮ ಕಛೇರಿ ವಿಳಾಸಕ್ಕೆ, ಈ ಪ್ರತಿಕಾ ಪ್ರಕಟಣೆ ಆದ 15 ದಿನಗಳ ಒಳಗಾಗಿ ತಲುಪಿಸತಕ್ಕದ್ದು, ತಪ್ಪಿದಲ್ಲಿ ನಮ್ಮ ಕಕ್ಷಿಗಾರರು ಸದರಿ ಸ್ವತ್ತನ್ನು ಕ್ರಯಕ್ಕೆ ಪಡೆಯಲು ಮತ್ತು ಕ್ರಯ ಪತ್ರವನ್ನು ನೋಂದಾಯಿಸಿಕೊಳ್ಳಲು ಸೂಕ್ತ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾರೆ.

ಷೆಡ್ಯೂಲು: ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ನಂಜನಗೂಡು ಪಟ್ಟಣ, ವಾರ್ಡ್ ನಂ.11 ಆರ್.ಪಿ ರಸ್ತೆ, "O" ಕ್ರಾಸ್ ನಲ್ಲಿ, ಅಂಬೇಡ್ಕರ್ ರಸ್ತೆ, ನಂಜನಗೂಡು ನಗರಸಭಾ, ನಮೂನೆ–3 ರಂತೆ. ಸ್ವತ್ತಿನ ನಂ. 25-11-2 ಸ್ವತ್ತಿನ ನಿರ್ಧರಣಾ ಸಂಖ್ಯೆ, 2619/2531, ಅಳತೆ ಪೂರ್ವ–ಪಶ್ಚಿಮ: 12.192024 ಮೀಟರ್, ಉತ್ತರ–ದಕ್ಷಿಣ: 12.801 626 ಮೀಟರ್, ಒಟ್ಟು 156.07704 ಚದರ ಮೀಟರ್ ವುಳ್ಳ ನಿವೇಶನಕ್ಕೆ ಚೆಕ್ಕು ಬಂದಿ:ಪೂರ್ವಕ್ಕೆ: ಝೀರೋ (O) ಕ್ರಾಸ್ ರಸ್ತೆ, ಪಶ್ಚಿಮಕ್ಕೆ : ಹೆಚ್. ಕೆ. ಸವಿತಾ ರವರ ಸ್ವತ್ತು, ಉತ್ತರಕ್ಕೆ: ನಾಗಕುಮಾರಯ್ಯ ರವರ ಸ್ವತ್ತು, ದಕ್ಷಿಣಕ್ಕೆ: ಖಾಸಗಿ ಸ್ವತ್ತು

ಸಹಿ/– ಎಸ್.ವೆಂಕಟೇಶ್, ವಕೀಲರು,
KAR–1794/98, 1ನೇ ಹಂತ, 6ನೇ ಕ್ರಾಸ್, ಆರ್.ಪಿ.ರಸ್ತೆ ಬಡಾವಣೆ, ನಂಜನಗೂಡು 571301,
ಮೊ: 9845671639 / 9844644473
ದಿನಾಂಕ: 21.07.2024, ನಂಜನಗೂಡು

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಲೋಕೇಶ್ ಹೆಚ್.ಎನ್.ಬಿನ್ ನಂಜೇಗೌಡ .ಹೆಚ್.ಎಲ್. ಮನೆ ನಂಬರ್:59, ಶ್ರೀಹರಿ: 11ನೇ ಮುಖ್ಯರಸ್ತೆ, 25ನೇ ಕ್ರಾಸ್, ಡಿ ಬ್ಲಾಕ್, 1ನೇ ಹಂತ, ಜೆ.ಪಿ.ನಗರ, ಮೈಸೂರು–570008 ಇವರಿಗೆ ಸರ್ವೆ ನಂಬರ್: 1231 ರಲ್ಲಿ ತರೀ ವಿಸ್ತೀರ್ಣ 0–05 ಗುಂಟೆ, ಮತ್ತು ನಂಜೇಗೌಡ ಹೆಚ್.ಎಲ್. ಬಿನ್ ಲೇಟ್ ಲಕ್ಷ್ಮೀಗೌಡ, ಮನೆ ನಂಬರ್:16, 1ನೇ ಮುಖ್ಯರಸ್ತೆ, ಹಾರೋಹಳ್ಳಿ, ಪಾಂಡವಪುರ ತಾಲೂಕು, ಮಂಡ್ಯ ಜಿಲ್ಲೆ–571434 ರವರಿಗೆ ಸರ್ವೆ ನಂಬರ್:1230/1 ರಲ್ಲಿ ತರೀ ವಿಸ್ತೀರ್ಣ: 0–17 ಗುಂಟೆ ಜಮೀನು. ಈ ಕೆಳಕಂಡ ಅನುಸೂಚಿಯಲ್ಲಿ ವಿವರಿಸಿರುವ ಸ್ವತ್ತುಗಳನ್ನು ಅದರ ಮಾಲೀಕರಾದ ವಿಜಯಕುಮಾರ್ ಕೆ. ಬಿನ್ ಕೃಷ್ಣಮೂರ್ತಿ ಆರ್.ಇ. ನಂ.338. ಡಿ.ಸುಬ್ಬಯ್ಯ ರಸ್ತೆ, ಮಹಾರಾಜ ಹೋಟೆಲ್ ಹಿಂಭಾಗ, ಚಾಮರಾಜ ಮೊಹಲ್ಲಾ, ವಿ.ಟಿ.ಸಿ: ಮೈಸೂರು ನಗರ, ಮೈಸೂರು ಜಿಲ್ಲೆ–570024. ಇವರಿಂದ ಖರೀದಿಸಬೇಕೆಂದು ಕೊಂಡಿದ್ದು, ಅನುಸೂಚಿ ಸ್ವತ್ತಿನ ವಿಚಾರವಾಗಿಯೂ ಅಥವಾ ಅದರ ಮಾರಾಟದ ವಿಚಾರವಾಗಿ ಯಾವುದೇ ವ್ಯಕ್ತಿಗಳಿಂದ ಯಾವುದೇ ರೀತಿಯ ಹಕ್ಕು–ಅಧಿಕಾರ ಅಥವಾ ತಕರಾರು ಇದ್ದಲ್ಲಿ ಅವುಗಳನ್ನು ಸೂಕ್ತ ದಾಖಲಾತಿಗಳ ಆಧಾರದೊಂದಿಗೆ ಈ ಕೆಳಗೆ ಸಹಿ ಮಾಡಿರುವವರಿಗೆ ಈ ಪ್ರಕಟಣೆಯ ದಿನಾಂಕದಿಂದ 07 ದಿನಗಳೊಳಗಾಗಿ ಕಳುಹಿಸತಕ್ಕದ್ದು, ಸದರಿ ಅವಧಿಯೊಳಗೆ ಯಾವುದೇ ತಕರಾರು ಬರದಿದ್ದಲ್ಲಿ ನಮ್ಮ ಕಕ್ಷಿದಾರರು ಅನುಸೂಚಿ ಸ್ವತ್ತುಗಳನ್ನು ಖರೀದಿಸುವುದಕ್ಕೆ ಮುಂದುವರೆಯುತ್ತಾರೆ. ಸದರಿ ಅವಧಿಯ ನಂತರ ಸ್ವೀಕೃತವಾದ ಯಾವುದೆ ತಕರಾರುಗಳನ್ನು ಪುರಸ್ಕರಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ: 1. ಮಂಡ್ಯ ಜಿಲ್ಲೆ. ಶ್ರೀರಂಗಪಟ್ಟಣ ತಾಲ್ಲೋಕು, ಬೆಳಗೊಳ ಹೋಬಳಿ, ಬೆಳಗೊಳ ಗ್ರಾಮದ ಜಮಾಬಂಧಿಗೆ ಸೇರಿದ ಸರ್ವೆ ನಂ.1230/1 ರ ತರೀ ವಿಸ್ತೀರ್ಣ 0–17 (ಹದಿನೇಳು) ಗುಂಟೆ, ಆಕಾರ ರೂ 1–14 ಪೈಸೆ ವುಳ್ಳ ಪೂರ್ತಾ ಜಮೀನು ಇದಕ್ಕೆ ಚೆಕ್ಕುಬಂದಿ:– ಪೂರ್ವಕ್ಕೆ :– ರಸ್ತೆ ಲಾ.ನಂ.878 ರ ಜಮೀನು, ಪಶ್ಚಿಮಕ್ಕೆ :– ಕೃಷ್ಣರಾಜಸಾಗರ ಬಲನಾಲಾ ಏರಿ, ಉತ್ತರಕ್ಕೆ:– ಸರ್ವೆ ನಂಬರ್ 1231. ಮತ್ತು ಸರ್ವೆ ನಂಬರ್ :1230/2 ರ ಜಮೀನುಗಳು, ದಕ್ಷಿಣಕ್ಕೆ :– ಲಾ.ನಂ.3, ರ ಜಿ.ವಿ.ನಾರಾಯಣಸ್ವಾಮಿ ರವರ ಸ್ವತ್ತು.

2. ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೋಕು, ಬೆಳಗೊಳ ಹೋಬಳಿ, ಬೆಳಗೊಳ ಗ್ರಾಮದ ಜಮಾಬಂಧಿಗೆ ಸೇರಿದ ಸರ್ವೆ ನಂ. 1231ರ ತರೀ ವಿಸ್ತೀರ್ಣ 0–05 (ಐದು) ಗುಂಟೆ, ಆಕಾರ 0– 20 ಪೈಸೆ ವುಳ್ಳ (5445 ಚದರ ಅಡಿಗಳು) ಪೂರ್ತಾ ಜಮೀನು ಇದಕ್ಕೆ ಚೆಕ್ಕುಬಂದಿ:– ಪೂರ್ವಕ್ಕೆ :– ರಸ್ತೆ, ಪಶ್ಚಿಮಕ್ಕೆ :– ಕೃಷ್ಣರಾಜಸಾಗರ ಬಲನಾಲಾ ಏರಿ, ಉತ್ತರಕ್ಕೆ:– ನಮ್ಮ ಬಾಬ್ತು ಸರ್ವೆ ನಂಬರ್ 1230/1 ರ ಜಮೀನು, ದಕ್ಷಿಣಕ್ಕೆ :– ನಮ್ಮ ಬಾಬ್ತು ಸರ್ವೆ ನಂಬರ್ 1230/1 ರ ಜಮೀನು

ಸಹಿ/–ವೈ.ಎಸ್. ಶಿವಕುಮಾರ, ಬಿ.ಕಾಂ, ಎಲ್.ಎಲ್.ಬಿ. ವಕೀಲರು, ಶನಿ ಕಾಂಪ್ಲೆಕ್ಸ್, 1ನೇ ಮಹಡಿ, ಟಿ.ಎ.ಪಿ.ಸಿ.– ಎಂ.ಎಸ್. ಸೊಸೈಟಿ ಎದುರು, ಪಾಂಡವಪುರ ಟೌನ್, ಮಂಡ್ಯ ಜಿಲ್ಲೆ, ದೂರವಾಣಿ ಸಂಖ್ಯೆ: 9035283426.